
ಶ್ರೀವಾದಿರಾಜಯತಿ ವಿರಚಿತ

ಏಕಾದಶೀನಿರ್ಣಯ



ಶ್ರೀವಾದಿರಾಜ ಸೇವಾಸಂಘ, ಉಡುಪಿ

ಶ್ರೀವಾದಿರಾಜಯತಿ ವಿರಚಿತ

ಏಕಾದಶೀನಿರ್ಣಯ

ಕನ್ನಡ ಭಾವಾನುವಾದ

ಶ್ರೀ ಬಿ.ಪಿ. ನಾಗಭೂಷಣರಾವ್

ತುಮಕೂರು

1994

ಪ್ರಕಾಶಕರು:

ಶ್ರೀವಾದಿರಾಜ ಸೇವಾಸಂಘ, ಉಡುಪಿ

ಮುಖಚಿತ್ರ: ಶ್ರೀವಾದಿರಾಜರು ತಾಯಿಗೆ ಮಾಡಿಸಿಕೊಟ್ಟ ತಮ್ಮ ಪ್ರತಿಮೆ

ಪ್ರತಿಗಳು:

ಬೆಲೆ:

ಮುದ್ರಕರು: ನಿಖಿಲ್ ಆಫ್‌ಸೆಟ್ ಪ್ರಿಂಟರ್ಸ್
ಕಂಬ್ಳ ಕ್ರಾಸ್‌ರೋಡ್, ಮಂಗಳೂರು. ಫೋನ್: 24638

ವಿಷಯ ಸೂಚಿ:

ಏಕಾದಶಿ ಸಮರ್ಥನೆ — 1

ಏಕಾದಶಿ ನಿರ್ಣಯ — 25

1952 ಜ್ಯೋತಿಷಕ ಸಮ್ಮೇಳನದ ವರದಿ — 43

ಶ್ರೀ ಶ್ರೀ ಸೋದೆ ವಾದಿರಾಜ ಮಠಾಧೀಶರಾದ ಶ್ರೀ ಶ್ರೀ ವಿಶ್ವೋತ್ತಮತೀರ್ಥ ಶ್ರೀಪಾದಂಗಳವರ

ಆಶೀರ್ವಚನ

ಕೃಷ್ಣಾಮೃತ ಮಹಾರ್ಣವ ಗ್ರಂಥದಲ್ಲಿ ಶ್ರೀಮಧ್ವಾಚಾರ್ಯರು ಏಕಾದಶೀ ವ್ರತದ ಮಹಿಮೆಯನ್ನು ಈ ರೀತಿ ವರ್ಣಿಸಿದ್ದಾರೆ.

ನೇದೃಶಂ ಪಾವನಂ ಕಿಂಚಿನ್ನರಾಣಾಂ ಭುವಿ ವಿದ್ಯತೇ |

ಯಾದೃಶಂ ಪದ್ಮನಾಭಸ್ಯ ದಿನಂ ಪಾತಕಹಾನಿದಂ ||

ಅಶ್ವಮೇಧ ಸಹಸ್ರಾಣಿ ವಾಜಪೇಯ ಶತಾನಿ ಚ |

ಏಕಾದಶ್ಯುಪವಾಸಸ್ಯ ಕಲಾಂ ನಾರ್ಹಂತಿ ಷೋಡಶೀಂ ||

ಭೂಮಿಯಲ್ಲಿ ಮನುಷ್ಯರಿಗೆ ಏಕಾದಶಿಗೆ ಸಮಾನವಾದ, ಪಾಪನಾಶಕವಾದ, ಪಾವನವಾದ ಬೇರೆ ದಿವಸ ಯಾವುದೂ ಇಲ್ಲ. ಸಾವಿರಾರು ಅಶ್ವಮೇಧ ಯಾಗಗಳೂ, ನೂರಾರು ವಾಜಪೇಯ ಯಾಗಗಳೂ ಏಕಾದಶೀ ವ್ರತದ ಹದಿನಾರನೇ ಒಂದು ಭಾಗಕ್ಕೂ ಅರ್ಹವಾಗುವುದಿಲ್ಲ. ಎಲ್ಲಾ ವ್ರತಗಳಿಗಿಂತಲೂ ಏಕಾದಶೀ ವ್ರತವು ಶ್ರೀ ಹರಿಗೆ ಅತ್ಯಂತ ಪ್ರೀತಿಕರವಾದುದು. ಈ ವ್ರತವು ಸರ್ವ ಸಜ್ಜನರಿಗೂ ವಿಹಿತವಾದುದು.

ಆದರೆ ಏಕಾದಶೀ ತಿಥಿ ಯಾವ ದಿನದಲ್ಲಿ ಖಚಿತವಾಗಿ ಸಂಭವಿಸುತ್ತದೆ ಎಂಬುದರ ಬಗ್ಗೆ ಹಿಂದಿನಿಂದಲೂ ವಾದ-ವಿವಾದಗಳು ಏಳುತ್ತಿದ್ದವು. ಈ ವಿಷಯದಲ್ಲಿ ವಿಶೇಷ ಸ್ಪಷ್ಟೀಕರಣ ನೀಡಲೋಸುಗ ಶ್ರೀ ವಾದಿರಾಜ ಗುರು ಸಾರ್ವಭೌಮರು "ಏಕಾದಶೀನಿರ್ಣಯ" ಎಂಬ ಕೃತಿಯನ್ನು ರಚಿಸಿದ್ದಾರೆ. ಈ ಗ್ರಂಥವು ಸಂಸ್ಕೃತ ಭಾಷೆಯಲ್ಲಿ ಇರುವುದರಿಂದ ಜನಸಾಮಾನ್ಯರಿಗೆ ಸುಲಭವಾಗಿ ಗ್ರಾಹ್ಯ

ವಾಗುವುದಿಲ್ಲ. ಇದರ ತಾತ್ಪರ್ಯ ಸ್ತೋತ್ರವು ಜನಸಾಮಾನ್ಯರಿಗೂ ಎಂದು ಬರಲಿ ಎಂಬ ಸದುದ್ದೇಶದಿಂದ ಶ್ರೀ ನಾಗಭೂಷಣರಾಯರು ಈ ಗ್ರಂಥದ ಕನ್ನಡ ಭಾವಾನುವಾದ ಮಾಡಿದ್ದಾರೆ. ಅವರ ಈ ಕೃತಿ ಸಮುಚಿತವೂ, ಶ್ಲಾಘನೀಯವೂ ಆಗಿದೆ.

ಶ್ರೀ ನಾಗಭೂಷಣರಾಯರು ಓದುಗರಿಗೆ ಅಪರಿಚಿತರೇನಲ್ಲ. ಈಗಾಗಲೇ "ಶ್ರೀ ಸ್ವಾಪ್ನವೃಂದಾವನಾಖ್ಯಾನಂ" ಮತ್ತು "ಭೂಗೋಲವರ್ಣನೆ" ಎಂಬ ಶ್ರೀ ಗುರುರಾಜರ ಕೃತಿಗಳನ್ನು ಎಲ್ಲರಿಗೂ ತಿಳಿಯುವಂತೆ ಲಲಿತ ಶೈಲಿಯಲ್ಲಿ ಸ್ಪಷ್ಟೀಕರಣ ಗಳೊಂದಿಗೆ ಕನ್ನಡದಲ್ಲಿ ಬರೆದು ಸಜ್ಜನವೃಂದಕ್ಕೆ ತುಂಬಾ ಉಪಕಾರ ಮಾಡಿದ್ದಾರೆ. ಅವರ ಜ್ಞಾನ ಕಾರ್ಯಕ್ಕೆ ಅನುಕೂಲವಾಗುವಂತೆ ನಾಗಭೂಷಣರಾಯರಿಗೆ ಆಯುರಾ ರೋಗ್ಯಾದಿ ಸಕಲ ಸಂಪತ್ತುಗಳನ್ನು ಕರುಣಿಸಲೆಂದು ನಾವು ನಮ್ಮ ಆರಾಧ್ಯ ದೇವರಾದ ಶ್ರೀ ಭೂವರಾಹ ಹಯವದನ ವೇದವ್ಯಾಸರಲ್ಲಿಯೂ, ಶ್ರೀ ಗುರುರಾಜರಲ್ಲಿಯೂ ಪ್ರಾರ್ಥಿಸುತ್ತೇವೆ.

ನಮ್ಮ ಮಠಕ್ಕೆ ದ್ವಂದ್ವ ಮಠವಾದ ಶ್ರೀ ಶೀರೂರು ಮಠದ ಶ್ರೀ ಶ್ರೀಗಳವರು ಪರ್ಯಾಯ ಪೀಠಾರೋಹಣ ಮಾಡುವ ಸಂದರ್ಭದಲ್ಲಿ ಈ ಕೃತಿಯು ಮುದ್ರಣಗೊಂಡು ಹೊರ ಬರುತ್ತಿರುವುದು ಸಂತೋಷದ ಸಂಗತಿ. ಸಜ್ಜನರು ಈ ಕೃತಿಯನ್ನು ಓದಿ ಸಂಶಯವನ್ನು ಪರಿಹರಿಸಿಕೊಂಡು ಏಕಾದಶೀ ವ್ರತವನ್ನು ಸಕಾಲದಲ್ಲಿ ಆಚರಿಸಿ, ಶ್ರೀ ಹರಿಗುರುಗಳ ಕೃಪೆಗೆ ಪಾತ್ರರಾಗಲೆಂದು ನಾವು ಹಾರೈಸುತ್ತೇವೆ.

ಶ್ರೀ ವಾದಿರಾಜಸೇವಾಸಂಘ, ಉಡುಪಿ, ಇವರು ಗ್ರಂಥ ಪ್ರಕಾಶನ ಕಾರ್ಯವನ್ನು ಕೈಗೊಂಡಿದ್ದಾರೆ. ಮುಂದೆಯೂ ಸಹ ನಿರಂತರವಾಗಿ ಜ್ಞಾನ ಪ್ರಚಾರ ಕಾರ್ಯ ಈ ಸಂಘದವರಿಂದ ಹೊರಹೊಮ್ಮಲೆಂದು ನಾವು ಹಾರೈಸುತ್ತೇವೆ.

ಇತ್ಯನೇಕ ಶ್ರೀಮನ್ನಾರಾಯಣ ಸ್ಮರಣೆಗಳು,

ಉಡುಪಿ

ತಾ. 25.12.1993

ಶ್ರೀ ವಿಶ್ವೋತ್ತಮ ತೀರ್ಥ ಶ್ರೀಪಾದಂಗಳವರು

ಶ್ರೀ ಶ್ರೀ ಕೃಷ್ಣಾಪುರ ಮಠಾಧೀಶರಾದ ಶ್ರೀ ಶ್ರೀ ವಿದ್ಯಾಸಾಗರತೀರ್ಥ ಶ್ರೀಪಾದಂಗಳವರ

ಆಶೀರ್ವಚನ

ಜ್ಯೋತಿಷ್ಯ ಕಾಲಗಣನೆಗೆ ಯಾವ ಗಣಿತ ಬಳಸಬೇಕು? ಯಾವ ಪದ್ಧತಿಯಿಂದ ತಯಾರಿಸಲ್ಪಟ್ಟ ಪಂಚಾಂಗವನ್ನು ನಾವು ನಿತ್ಯಕರ್ಮಾಚರಣೆಗೆ ಅನುಸರಿಸಬೇಕು ಎಂದು ಲೌಕಿಕರಿಗೆ ಗೊಂದಲವಾಗುವಂತೆ ಪ್ರಸ್ತುತ ಪರಿಸ್ಥಿತಿಯಿದೆ. ಆಯಾಯ ಗಣಿತ ಪದ್ಧತಿಯನ್ನು ಅನುಸರಿಸಿ ಬರೆದ ಪಂಚಾಗಕರ್ತರು, ತಮ್ಮ ಪಂಚಾಂಗ ಪದ್ಧತಿಯನ್ನು ಯುಕ್ತವೆಂದು ಸಾಧಿಸಲು ಪ್ರಯತ್ನಿಸಿ ಜನರಿಗೆ ನಿಶ್ಚಿತವಾದ, ಅನುಸರಣೀಯವಾದ ಪದ್ಧತಿ ಯಾವುದೆಂದು ತೋರಿಸಲು ವಿಫಲರಾಗಿದ್ದಾರೆ. ಹೀಗಿರುವಾಗ ನಮ್ಮ ಪ್ರಾಚೀನ ಋಷಿಪುಂಗವರು ಯಾವ ಪದ್ಧತಿಯನ್ನು ಯುಕ್ತವೆಂದು ಸ್ವೀಕರಿಸಿದ್ದಾರೆ ಮತ್ತು ಮುಖ್ಯವಾಗಿ ವೈಷ್ಣವರು ಅವಶ್ಯವಾಗಿ ಆಚರಿಸಬೇಕಾದ ಏಕಾದಶೀ ತಿಥಿಯ ನಿರ್ಣಯಕ್ಕೆ ಯಾವ ಗಣಿತ ಪದ್ಧತಿಯ ಅನುಸರಣೆ ಶಾಸ್ತ್ರಸಮ್ಮತವಾಗಿದೆ ಎಂಬುದನ್ನು ತೋರಿಸಲೋಸ್ಕರ ಶ್ರೀ ಭಾವೀಸಮೀರ ಶ್ರೀ ವಾದಿರಾಜರು ರಚಿಸಿದ ಏಕಾದಶೀ ನಿರ್ಣಯವೆಂಬ ಗ್ರಂಥವನ್ನು ಲೌಕಿಕರಿಗೂ ಮನದಟ್ಟಾಗುವಂತೆ ಪ್ರಾಕೃತ ಭಾಷೆಯ ಅನುವಾದ ಸಹಿತವಾಗಿ ಶ್ರೀ ಭಾವೀಸಮೀರ ಶ್ರೀ ವಾದಿರಾಜ ಗುರು ಸೇವಾವೃಂದದವರು ಪ್ರಕಟಿಸಿರುತ್ತಾರೆ. ಶ್ರೀ ವಾದಿರಾಜರ "ಸ್ವಾಪ್ನವೃಂದಾ ವನಾಖ್ಯಾನ" ಎಂಬ ಗ್ರಂಥಕ್ಕೆ ಈ ಹಿಂದೆ ಉತ್ತಮ ರೀತಿಯಲ್ಲಿ ಅನುವಾದ ಬರೆದ ಶ್ರೀ ವಾದಿರಾಜರ ನಿರಂತರ ಸೇವಾಸಕ್ತರೂ, ಪರಮಭಕ್ತರೂ ಆಗಿರುವ ಶ್ರೀಯುತ ನಾಗಭೂಷಣರಾಯರೇ ಈ ಗ್ರಂಥಾನುವಾದ ಮಾಡಿದ್ದಾರೆಂಬುದು ಸಂತೋಷದ ಸಂಗತಿ. ಅಷ್ಟೇ ಅಲ್ಲದೆ ಸುಲಭವಾಗಿ ಮನದಟ್ಟಾಗುವಂತೆ ಪ್ರತ್ಯೇಕವಾಗಿ ಎಲ್ಲ ವಿಷಯವನ್ನು ಸಂಗ್ರಹಿಸಿ

ಚಿಕ್ಕ ಲೇಖನವೊಂದನ್ನು ಬರೆದಿದ್ದಾರೆ. ಸಜ್ಜನರೆಲ್ಲರೂ ಈ ಪುಸ್ತಕದ ಸಹಾಯದಿಂದ ಶಾಸ್ತ್ರಸಮ್ಮತವಾದ, ನಮ್ಮ ಪೂರ್ವಿಕರು ಅನುಸರಿಸಿ ಕೊಂಡು ಬಂದ ಪದ್ಧತಿಯನ್ನು ತಿಳಿಯುವಂತಾಗಬೇಕು.

"ತಸ್ಮಾತ್ ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ" ಎಂಬ ಗೀತಾಚಾರ್ಯನ ಉಕ್ತಿಯಂತೆ ಶಾಸ್ತ್ರಗ್ರಹಿತವಾದ ಆರ್ಯಭಟ ಪದ್ಧತಿಯೇ ನಮಗೆ ಅನುಸರಣೀಯವಾಗಿದೆ. ಸಜ್ಜನರು ಪುಸ್ತಕದ ಸಹಾಯದಿಂದ ಈ ಅಂಶವನ್ನು ಮನದಟ್ಟು ಮಾಡಿಕೊಂಡು ಶಾಸ್ತ್ರೀಯ ಪದ್ಧತಿಯನ್ನು ಬಿಡದೆ ಅನುಸರಿಸಿ ಹರಿಗುರುಗಳ ಪರಮಾನುಗ್ರಹಕ್ಕೆ ಪಾತ್ರರಾಗಬೇಕೆಂದು ಅಪೇಕ್ಷಿಸುತ್ತೇವೆ. ಹಾಗೆಯೇ ಈ ಪುಸ್ತಕವನ್ನು ಈ ಸಂದರ್ಭದಲ್ಲಿ ಪ್ರಚುರ ಪಡಿಸಿ ಗುರುಗಳ ಸೇವೆಯನ್ನು ಅರ್ಥಪೂರ್ಣವಾಗಿ ನಡೆಸಿದ ಶ್ರೀ ವಾದಿರಾಜ ಗುರು ಸೇವಾ ಸಮಿತಿಯ ಪದಾಧಿಕಾರಿಗಳಿಗೂ ಶ್ರೇಯಸ್ಸನ್ನು ಹಾರೈಸುತ್ತೇವೆ.

ಇತ್ಯನೇಕ ಶ್ರೀಮನ್ನಾರಾಯಣ ಸ್ಮರಣೆಗಳು,

ಉಡುಪಿ

ತಾ. 25.12.1993

ಶ್ರೀ ವಿದ್ಯಾಸಾಗರ ತೀರ್ಥ ಶ್ರೀಪಾದಂಗಳವರು

ನಿವೇದನೆ

ಶ್ರೀಮದಾನಂದ ತೀರ್ಥರಿಂದ ರಚಿತವಾದ ಶ್ರೀಕೃಷ್ಣಾಮೃತ ಮಹಾರ್ಣವ ಗ್ರಂಥದಲ್ಲಿ, ಏಕಾದಶಿ ವಿಚಾರದಲ್ಲಿ "ನೇದೃಶಂ ಪಾವನಂ ಕಿಂಚಿನ್ನರಾಣಾಂ ಭುವಿ ವಿದ್ಯತೇ | ಯಾದೃಶಂ ಪದ್ಮನಾಭಸ್ಯ ದಿನಂ ಪಾತಕಹಾನಿದಂ|" ಎಂದು ಉಕ್ತವಾಗಿದೆ. ಅತಿ ಪವಿತ್ರವಾದ ವೈಷ್ಣವ ಧರ್ಮಗಳ ಮಧ್ಯದಲ್ಲಿ, ಇಂತಹ ಅತ್ಯುತ್ತಮವಾದ ಏಕಾದಶೀ ವೃತವನ್ನು, ದಶಮೀ ವೇಧರಹಿತವಾದ ಏಕಾದಶೀ ತಿಥಿಯಂದೇ ಆಚರಿಸಬೇಕೆಂಬ ನಿಯಮವನ್ನು ಶ್ರೀಕೃಷ್ಣಾಮೃತಮಹಾರ್ಣವ ಗ್ರಂಥದಲ್ಲಿ ತಿಳಿಸಿದ್ದಾರೆ. ದಶಮೀ ವೇಧವನ್ನು ತಿಳಿಯುವ ವಿಚಾರದಲ್ಲಿ ಸ್ಮೃತಿ ವಾಕ್ಯಗಳು ಅನೇಕವಿರುವುವು. ಆದರಿಂದಾಗಿ ಆಚರಣೆಯಲ್ಲಿ ವ್ಯತ್ಯಾಸಗಳು ಬಂದಿರುವುವು. ಕೆಲವು ಆಚರಣೆಗಳಿಂದ ಏಕಾದಶಿಯು ವ್ಯರ್ಥವಾಗುತ್ತಿದೆ. ಹಾಗೆ ಆಗಬಾರದೆಂಬ ಅಭಿಲಾಷೆಯಿಂದ "ಏಕಾದಶೀ ನಿರ್ಣಯ" ವೆಂಬ ಈ ಗ್ರಂಥವನ್ನು ಭಾವೀ ಸಮೀರ ಶ್ರೀ ವಾದಿರಾಜ ಗುರುಸಾರ್ವಭೌಮರು ರಚಿಸಿದ್ದಾರೆ. ದಶಮೀ ವೇಧದ ವಿಚಾರದಲ್ಲಿ ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರ ವಚನವನ್ನು ವ್ಯಾಖ್ಯಾನ ಮಾಡಿ ಏಕಾದಶಿ ನಿರ್ಣಯವನ್ನು ಸ್ಪಷ್ಟಗೊಳಿಸಿದ್ದಾರೆ.

ಈ ಗ್ರಂಥದಲ್ಲಿ ತಿಥಿಗಳ ಸಮವೃದ್ಧಿ, ಅತಿವೃದ್ಧಿ ಇಷ್ಟೇ ಘಳಿಗೆಗಳೆನ್ನುವುದನ್ನು ಸ್ಪಷ್ಟವಾಗಿ ಹೇಳಿರುವುದರಿಂದ, ಇದಕ್ಕೆ ವಿರುದ್ಧವಾಗಿ ದೃಕ್‌ಸಿದ್ಧಾಂತ ಗಣಿತದಿಂದ ಸಾಧಿಸಲ್ಪಡುವ ತಿಥ್ಯಾದಿಗಳು ಏಕಾದಶಿ ನಿರ್ಣಯಕ್ಕೆ ಉಪಯುಕ್ತವಲ್ಲವೆಂದು ತಿಳಿಯುತ್ತದೆ. ದೃಕ್ಪಂಚಾಂಗದ ತಿಥಿಗಳು ಏಕಾದಶೀ ಮೊದಲಾದ ಕರ್ಮಗಳಿಗೆ ಅರ್ಹವಾಗುವುದಿಲ್ಲ ಮತ್ತು ಅವು ಋಷಿ, ದೇವತಾ ಪ್ರೋಕ್ತ ವಚನಗಳಿಗೆ ವಿರುದ್ಧ ಎನ್ನುವುದನ್ನು ಓದುಗರು ತಿಳಿಯಲೆಂದು ಅದರ ವಿಮರ್ಶೆಯನ್ನೂ ಈ ಪುಸ್ತಕದಲ್ಲಿ ಪ್ರಕಟಿಸಲಾಗಿದೆ.

ಈ ಗ್ರಂಥದ ಅನುವಾದ ಕಾರ್ಯವನ್ನು ನಿರ್ವಹಿಸುವ ಅರ್ಹತೆಯು

ನನಗಿಲ್ಲದಿದ್ದರೂ, ಈ ಸೇವೆಯಿಂದ ನಾನು ಪುಣ್ಯಕ್ಕೆ ಭಾಗಿಯಾಗಲೆಂದು ಶ್ರೀ ಸೋದೆ ವಾದಿರಾಜ ಮಠಾಧೀಶರಾದ ಶ್ರೀ ವಿಶ್ವೋತ್ತಮ ತೀರ್ಥ ಶ್ರೀಪಾದಂಗಳವರು ಮಾಡಿದ ಒತ್ತಾಯದಿಂದಲೂ, ಅವರ ವಾಕ್ಯಕ್ತಿಯಿಂದಲೂ ಈ ಕಾರ್ಯವು ನೆರವೇರುವುದೆಂಬ ಹಿಂದಿನ ಅನುಭವದಿಂದ ಬಂದ ಧೃಡ ನಂಬಿಕೆಯಿಂದಲೂ, ಈ ಸಾಹಸ ಕಾರ್ಯವನ್ನು ಕೈಗೊಳ್ಳಲು ಧೈರ್ಯವಾಯಿತು. ಶ್ರೀವಾದಿರಾಜ ಗುರುಸಾರ್ವಭೌಮರ ಪರಮಾನುಗ್ರಹದಿಂದ ಈ ಅನುವಾದ ಕಾರ್ಯವು ಸುಗಮವಾಗಿ ನೆರವೇರಿತು. ಇದರಲ್ಲಿ ಲೋಪದೋಷಗಳೇನಾದರೂ ಇದ್ದರೆ ಅವು ನನ್ನದೇ ಆಗಿರುತ್ತವೆ.

ನನಗೆ ಪರಮಾನುಗ್ರಹ ಮಾಡುವುದಕ್ಕೋಸ್ಕರವೇ, ಈ ಗ್ರಂಥದ ಅನುವಾದವನ್ನು ಮಾಡಲು ಆಜ್ಞೆಯನ್ನಿತ್ತು, ಸೂಕ್ತ ಸಲಹೆಗಳನ್ನು ನೀಡಿದ ಸೋದೆ ಮಠದ ಶ್ರೀಶ್ರೀ ವಿಶ್ವೋತ್ತಮತೀರ್ಥ ಶ್ರೀಪಾದಂಗಳವರಿಗೆ ನಾನು ಚಿರಋಣಿಯಾಗಿದ್ದೇನೆ.

30.7.'93
ತುಮಕೂರು

ಬಿ.ಪಿ. ನಾಗಭೂಷಣ ರಾವ್
"ಪದ್ಮಪ್ರಭಾ"
ಬಿ.ಎನ್.ಪಿ. ಕಾಂಪೌಂಡು
ಎಂ.ಜಿ. ರಸ್ತೆ
ತುಮಕೂರು - 572101

ಪ್ರಕಾಶಕರ ವಿಜ್ಞಾಪನೆ

"ಏಕಾದಶೀನಿರ್ಣಯ" ಗ್ರಂಥವು ಶ್ರೀಮದ್ಭಾವಿಸಮೀರವಾದಿರಾಜಗುರು ಸಾರ್ವಭೌಮರು ಸಂಸ್ಕೃತದಲ್ಲಿ ರಚಿಸಿರುವ ಸ್ವತಂತ್ರ ಗ್ರಂಥಗಳಲ್ಲಿ ಒಂದು. ಈ ಗ್ರಂಥದ ರಚನೆಯ ಹಿನ್ನೆಲೆ ಇಂತಿದೆ. ಶ್ರೀ ಹರಿಗೆ ಅತಿಪ್ರೀತಿಕರವಾದ ಏಕಾದಶೀ ವ್ರತವನ್ನು ದಶಮೀವೇಧ ರಹಿತವಾದ ಏಕಾದಶೀ ತಿಥಿಯಂದೇ ಆಚರಿಸಬೇಕೆಂದೂ, ಅರುಣೋದಯ ವೇಳೆಯಲ್ಲಿ ದಶಮೀ ತಿಥಿ ಕಂಡು ಬಂದರೆ ಆ ದಿನ ಏಕಾದಶೀ ಉಪವಾಸವು ಪಾಪಕ್ಕೆ ಕಾರಣವಾಗುವುದೆಂದೂ ಶ್ರೀಮದಾಚಾರ್ಯರು ಕೃಷ್ಣಾಮೃತಮಹಾರ್ಣವ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. "ಚತಸ್ರೋ ಘಟಿಕಾಃ ಪ್ರಾತರರುಣೋದಯ ಉಚ್ಯತೇ" ಎಂಬ ಶ್ರೀಮದಾಚಾರ್ಯರ ವಚನದಂತೆ ಸೂರ್ಯೋದಯಕ್ಕಿಂತ ಪೂರ್ವದ ನಾಲ್ಕು ಘಳಿಗೆಗಳ ಕಾಲವು ಅರುಣೋದಯವು. ಉಡುಪಿಯ ಮಾಧ್ವಮಠಗಳಲ್ಲಿ ಪ್ರಾಚೀನ ಸಂಪ್ರದಾಯದಂತೆ ಅರುಣೋದ ಯಕ್ಕಿಂತ ಪೂರ್ವದಲ್ಲಿ ಹ್ರಾಸಪಕ್ಷದಲ್ಲಿ 5 ವಿಘಳಿಗೆ, ಸಮಪಕ್ಷದಲ್ಲಿ 10 ವಿಘಳಿಗೆ, ಸಮವೃದ್ಧಿ ಪಕ್ಷದಲ್ಲಿ 1 ಘಳಿಗೆ, ಅತಿವೃದ್ಧಿ ಪಕ್ಷದಲ್ಲಿ 1 ಘಳಿಗೆ, 20 ವಿಘಳಿಗೆ ಕಾಲ ದಶಮೀವೇಧ ಕಂಡು ಬಂದರೆ ಆ ದಿನ ಏಕಾದಶೀ ಉಪವಾಸ ಮಾಡದೆ ಮರುದಿನ ಉಪವಾಸ ಮಾಡುವ ಆಚರಣೆಯಿದೆ. ಈ ಆಚರಣೆಯು"ಚತಸ್ರೋ ಘಟಿಕಾಃ ಪಾತ್ರರರುಣೋದಯ ಉಚ್ಯತೇ" ಎಂಬ ಆಚಾರ್ಯರ ವಚನಕ್ಕೆ ವಿರೋಧ ವಾಗುವುದೆಂದೂ, ಅರುಣೋದಯದ ಪೂರ್ವಕಾಲದ ವೇಧವನ್ನು ಆಚಾರ್ಯರು ಹೇಳದಿರುವುದರಿಂದ ಅನುಕ್ತದೋಷ ಬರುವುದೆಂದೂ ಘಟ್ಟದ ಮೇಲಿನ ಕೆಲವು ಮಾಧ್ವ ಪಂಡಿತರು ಆಕ್ಷೇಪಿಸುತ್ತಿದ್ದರು. ಈ ಆಕ್ಷೇಪಣೆಗಳಿಗೆ ಉತ್ತರ ರೂಪವಾಗಿ ಶ್ರೀ ವಾದಿರಾಜ ಗುರು ಸಾರ್ವಭೌಮರು ಏಕಾದಶೀ ನಿರ್ಣಯವೆಂಬ ಗ್ರಂಥವನ್ನು ರಚಿಸಿದರು. ಈ ಗ್ರಂಥದಲ್ಲಿ ಅರುಣೋದಯಕ್ಕಿಂತ ಪೂರ್ವದಲ್ಲಿ, ಹಿಂದೆ ಹೇಳಿದಂತೆ ದಶಮೀವೇಧದ ಆಚರಣೆಯು ಶ್ರೀಮದಾಚಾರ್ಯರ ವಚನಕ್ಕೆ ವಿರೋಧವಲ್ಲ

ವೆಂದೂ, ಅನುಕ್ತವು ದೋಷವಲ್ಲವೆಂದೂ, 'ಚತಸ್ರೋ ಘಟಿಕಾಃ' ಎನ್ನುವ ಆಚಾರ್ಯರ ಸಾಮಾನ್ಯ ವಚನವು ಅರುಣೋದಯದ ಪೂರ್ವಕಾಲದ ವೇಧವನ್ನು ಹೇಳುವ ವಿಶೇಷ ವಚನಗಳಿಗೆ ವಿರೋಧವಾಗುವುದಿಲ್ಲವೆಂದೂ ಯುಕ್ತಿಪೂರ್ವಕವಾಗಿ ಸಮರ್ಥಿಸಿದ್ದಾರೆ. ಅನಂತರ, ಆಚಾರ್ಯರಿಂದಲೇ ಉಪದೇಶ ಪಡೆದ ಆಚಾರ್ಯರ ಸಾಕ್ಷಾತ್ ಶಿಷ್ಯರಾದ, ಪ್ರಾಚೀನ ಟೀಕಾಕಾರರಾದ ತ್ರಿವಿಕ್ರಮ ಪಂಡಿತಾಚಾರ್ಯರ ವಚನವನ್ನು ವ್ಯಾಖ್ಯಾನ ಮಾಡಿ, ದಶಮೀವೇಧದ ಅವಧಿಯನ್ನು ನಿರ್ಣಯಿಸಿ, ಉಡುಪಿಯ ಮಾಧ್ವಮಠಗಳ ಪ್ರಾಚೀನ ಸಂಪ್ರದಾಯವನ್ನು ಸಮರ್ಥಿಸಿದ್ದಾರೆ.

ಇತ್ತೀಚೆಗೆ ಉಡುಪಿಯ ಕೆಲವು ಮಠಾಧಿಪತಿಗಳು ಪ್ರಾಚೀನ ಸಂಪ್ರದಾಯವನ್ನು ತ್ಯಜಿಸಿ ನೂತನ ದೃಗ್ಗಣಿತಾನುಸಾರ ಏಕಾದಶಿಯನ್ನು ಆಚರಿಸಲು ಪ್ರಾರಂಭಿಸಿದ್ದಾರೆ.

ಶ್ರೀ ವಾದಿರಾಜ ಗುರುಸಾರ್ವಭೌಮರು ಏಕಾದಶೀ ನಿರ್ಣಯ ಗ್ರಂಥದಲ್ಲಿ ತಿಥಿಗಳ ವೃದ್ಧಿಯು ಅತಿ ವೃದ್ಧಿಯಲ್ಲಿ 5 ಮತ್ತು 6 ಘಳಿಗೆಗಳೆಂದು ನಿರ್ದಿಷ್ಟವಾಗಿ ತಿಳಿಸಿದ್ದಾರೆ. ನೂತನ ದೃಗ್ಗಣಿತದಲ್ಲಿ ತಿಥಿಗಳ ವೃದ್ಧಿಯು ಅತಿವೃದ್ಧಿಯಲ್ಲಿ 8 ಘಳಿಗೆ ಬರುವುದರಿಂದಲೂ, ಇನ್ನೂ ಅನೇಕ ಕಾರಣಗಳಿಂದಲೂ ನೂತನ ದೃಗ್ಗಣಿತವು ಶ್ರೀಮದಾಚಾರ್ಯರಿಗೆ, ಶ್ರೀ ವಾದಿರಾಜರಿಗೆ ಸಮ್ಮತವಲ್ಲವೆಂಬುದನ್ನು ಶ್ರೀಯುತ ನಾಗಭೂಷಣರಾಯರು ಈ ಗ್ರಂಥದಲ್ಲಿ "ಏಕಾದಶೀ -ಪ್ರಾಚೀನ ಪದ್ಧತಿ ಸಮರ್ಥನೆ" ಎಂಬ ವಿಮರ್ಶಾತ್ಮಕ ಲೇಖನದಲ್ಲಿ ಚೆನ್ನಾಗಿ ಸಮರ್ಥಿಸಿದ್ದಾರೆ.

ಭಿನ್ನ ಭಿನ್ನ ಗಣಿತಕ್ರಮಗಳನ್ನು ಅನುಸರಿಸುವುದರಿಂದ ಉಂಟಾಗುವ ವ್ಯತ್ಯಾಸದಿಂದ ಸನಾತನ ಧಾರ್ಮಿಕ ಸತ್ಕರ್ಮಾನುಷ್ಠಾನಪರಾಯಣರಾದ ಜನರಿಗೆ ನಾನಾ ಸಂಶಯಗಳು ತಲೆದೋರಿ ಯಾವ ಪಂಚಾಂಗಾನುಸಾರ ನಾವು ಧಾರ್ಮಿಕ ಕರ್ಮಗಳನ್ನಾಚರಿಸಬೇಕೆಂಬ ಕಳವಳವುಂಟಾಗುವುದು ಸಹಜ. ಇದರ ನಿರ್ಣಯದ ಬಗ್ಗೆ ಈ ಹಿಂದೆಯೇ 1952ರಲ್ಲಿ ಅನೇಕರು ಉಡುಪಿಯ ಅಷ್ಟಮಠಾಧಿಪತಿ ಗಳಲ್ಲಿಯೂ, ಇತರ ಅನೇಕ ಧಾರ್ಮಿಕ ಮಹಾಜನರಲ್ಲಿಯೂ ವಿಜ್ಞಾಪಿಸಿಕೊಂಡ ಪರಿಣಾಮವಾಗಿ ಉಡುಪಿಯಲ್ಲಿ ಶ್ರೀಕೃಷ್ಣ ಮಠದ ವಸಂತ ಮಹಲಿನಲ್ಲಿ "ಅಖಿಲ

ಕರ್ಣಾಟಕ ಜ್ಯೌತಿಷಿಕ ಮಹಾ ಸಮ್ಮೇಳನ"ವು ಜರುಗಿತು. ಉಡುಪಿಯ ಅಷ್ಟ ಮಠಾಧಿಪತಿಗಳ ಉಪಸ್ಥಿತಿಯಲ್ಲಿ, ಶ್ರೀ ಭಂಡಾರಿಕೇರಿ ಮಠದ ಶ್ರೀ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದರ ಅಧ್ಯಕ್ಷತೆಯಲ್ಲಿ ಜರುಗಿದ ಈ ಮಹಾಸಮ್ಮೇಳನವು, ಇತರ ನಾಲ್ಕು ನಿರ್ಣಯಗಳೊಂದಿಗೆ "ಪಾಶ್ಚಾತ್ಯ ದೃಗ್ಗಣಿತವು ಶಾಸ್ತ್ರವೆಂದಾಗಲೀ, ಸಿದ್ಧಾಂತವೆಂದಾಗಲೀ, ವೇದಾಂಗವೆಂದಾಗಲೀ ಹೇಳಿಸಿಕೊಳ್ಳುವುದಿಲ್ಲ"ವೆಂದು ಸರ್ವಾನುಮತದಿಂದ ನಿರ್ಣಯವನ್ನು ಕೈಗೊಂಡಿದೆ. ಸಜ್ಜನರ ಅವಗಾಹನೆಗಾಗಿ ಈ ಸಮ್ಮೇಳನದ ವರದಿಯ ಯಥಾಪ್ರತಿಯನ್ನು ಈ ಪುಸ್ತಕದಲ್ಲಿ ಮುದ್ರಿಸಲಾಗಿದೆ. ಶ್ರೀ ವಾದಿರಾಜ ಸೇವಾ ಸಂಘದ ಅಧ್ಯಕ್ಷರಾದ ಶ್ರೀ ಶ್ರೀ ವಿಶ್ವೋತ್ತಮ ತೀರ್ಥ ಶ್ರೀಪಾದಂಗಳವರ ಆದೇಶದಂತೆ ಬಹು ಜಟಿಲವಾದ "ಏಕಾದಶೀ ನಿರ್ಣಯ" ಗ್ರಂಥದ ಕನ್ನಡ ಭಾವಾನುವಾದವನ್ನೂ, "ಏಕಾದಶೀ - ಪ್ರಾಚೀನ ಪದ್ಧತಿಯ ಸಮರ್ಥನೆ" ಎಂಬ ವಿಮರ್ಶೆಯನ್ನೂ ಬರೆದುಕೊಟ್ಟ ಶ್ರೀಯುತ ಬಿ.ಪಿ. ನಾಗಭೂಷಣರಾಯರಿಗೆ ನಾವು ಚಿರಋಣಿಯಾಗಿದ್ದೇವೆ.

ಗ್ರಂಥದ ಅನುವಾದವನ್ನು ಪರಿಶೀಲಿಸಿ, ಸೂಕ್ತ ಸಲಹೆಗಳನ್ನು ನೀಡಿ ಸಹಕರಿಸಿದ ಸರ್ವಶ್ರೀ

(1) ಕೆ. ಹರಿದಾಸ ಉಪಾಧ್ಯಾಯ, ಉಡುಪಿ ಸಂಸ್ಕೃತ ಮಹಾಪಾಠ ಶಾಲೆಯ ನಿವೃತ್ತ ಪ್ರಾಂಶುಪಾಲರು ಮತ್ತು ಶ್ರೀ ಶೀರೂರು ಮಠದ ಆಸ್ಥಾನ ವಿದ್ವಾಂಸರು,

(2) ಕಟ್ಟೆ ವಾದಿರಾಜ ಆಚಾರ್ಯ, ಶ್ರೀ ಶೀರೂರು ಮಠದ ಆಸ್ಥಾನ ವಿದ್ವಾಂಸರು,

(3) ಆನಂದತೀರ್ಥಾಚಾರ್ಯ, ಆತ್ಮಕೂರಿನ ಪಾಣಿನಿ ಮಹಾವಿದ್ಯಾಲಯದ ಪಂಡಿತರು,

(4) ಪಿ. ಲಕ್ಷ್ಮೀನಾರಾಯಣ ಶರ್ಮ, ಉಡುಪಿ ಸಂಸ್ಕೃತ ಮಹಾಪಾಠಶಾಲೆಯ ಪ್ರಾಂಶುಪಾಲರು ಇವರಿಗೆ ಅನಂತ ಕೃತಜ್ಞತೆಗಳು,

ಪುಸ್ತಕವನ್ನು ಸಕಾಲಕ್ಕೆ ಅಂದವಾಗಿ ಮುದ್ರಿಸಿಕೊಟ್ಟ 'ನಿಖಿಲ್ ಆಫ್‌ಸೆಟ್ ಪ್ರಿಂಟರ್ಸ್' ಮಂಗಳೂರು, ಇವರಿಗೂ, ಮುದ್ರಣದೋಷಗಳನ್ನು ತಿದ್ದಿಕೊಟ್ಟು ಗ್ರಂಥ ಪ್ರಕಾಶನದಲ್ಲಿ ನೆರವಾದ ಮೆಜಿಸ್ಟಿಕ್ ಪ್ರೆಸ್‌ನ ಮಾಲಕರಾದ ಶ್ರೀಯುತ ಭಾಸ್ಕರ ರಾಯರಿಗೂ, ಸಂಘದ ಸದಸ್ಯರಾದ, ನನ್ನ ಮಿತ್ರರಾದ ಬನ್ನಂಜೆ ಗೋಪಾಲಕೃಷ್ಣ ಉಪಾಧ್ಯಾಯರಿಗೂ ನಮ್ಮ ಕೃತಜ್ಞತೆಗಳು.

ಧರ್ಮಾಭಿಮಾನಿಗಳಾದ ಶ್ರೀ ಗುರುರಾಜರ ಭಕ್ತರು ಈ ಗ್ರಂಥವನ್ನೋದಿ ಋಜುವರೇಣ್ಯರಾದ ಜಗದ್ಗುರು ಶ್ರೀಮನ್ಮಧ್ವಾಚಾರ್ಯರು, ಶ್ರೀ ವಾದಿರಾಜ ಗುರುಸಾರ್ವಭೌಮರು ಆಚರಿಸುತ್ತಿದ್ದ ಪ್ರಾಚೀನ ಪದ್ಧತಿಯಂತೆ ಏಕಾದಶೀ ವ್ರತವನ್ನು ಆಚರಿಸಿ ಹರಿ ಗುರುಗಳ ಪರಮಾನುಗ್ರಹಕ್ಕೆ ಪಾತ್ರರಾಗಬೇಕೆಂಬ ಸದುದ್ದೇಶದಿಂದ ಈ ಗ್ರಂಥವನ್ನು ಪ್ರಕಟಿಸುತ್ತಿದ್ದೇವೆ.

ಪಿ. ವ್ಯಾಸಾಚಾರ್ಯ

ಕಾರ್ಯದರ್ಶಿ

ತಾ. 08.1.1994

ಶ್ರೀ ವಾದಿರಾಜ ಸೇವಾ ಸಂಘ,

ಉಡುಪಿ.

ಶ್ರೀವಾದಿರಾಜಗುರುಭ್ಯೋ ನಮಃ

ಏಕಾದಶಿ - ಪ್ರಾಚೀನ ಪದ್ಧತಿ ಸಮರ್ಥನೆ

ಜ್ಞಾತ್ವಾ ವಿಪ್ರೈಸ್ತಿಥಿಂ ಸಮ್ಯಕ್ ದೈವಜ್ಞೈಃ ಸಮುದೀರಿತಾಂ | ಕರ್ತವ್ಯ ಉಪವಾಸಸ್ತು ಅನ್ಯಥಾ ನರಕಂ ವ್ರಜೇತ್ || ಗಣಕರಿಂದ ಏಕಾದಶಿ ತಿಥಿಯನ್ನು ಸರಿಯಾಗಿ ತಿಳಿದು, ಅಂದು ಉಪವಾಸವನ್ನು ಆಚರಿಸಬೇಕು ಎಂದು ತಿಳಿಸುವ ಶ್ರೀ ಸೂತ ಪುರಾಣಿಕರ ವಾಕ್ಯವನ್ನು ಶ್ರೀಕೃಷ್ಣಾಮೃತ ಮಹಾರ್ಣವ ಗ್ರಂಥದಲ್ಲಿ ಉದಾಹರಿಸಲಾಗಿದೆ. ಈ ವಿಷಯದಲ್ಲಿ ಈ ವರೆವಿಗೂ ಅನೇಕ ಜ್ಞಾನಿಗಳಿಂದ ಆರ್ಯ ಸಿದ್ಧಾಂತವೇ ದಶಮ್ಯಾದಿ ದಿನತ್ರಯ ವ್ರತಾಚರಣೆಯಲ್ಲಿ ಗ್ರಾಹ್ಯವೆಂದು ನಿಶ್ಚಯಿಸಲ್ಪಟ್ಟು ಆಚರಣೆಯಲ್ಲಿದೆ. ಈ ಆರ್ಯ ಸಿದ್ಧಾಂತವೇ ಪ್ರವೃದ್ಧ ಸಿದ್ಧಾಂತ, ಅರಭಟ ಸಿದ್ಧಾಂತ, ಸ್ತಂಭ ಸಿದ್ಧಾಂತ, ಅಧಿಕ ಸಿದ್ಧಾಂತ, ಆರ್ಯಭಟ ಸಿದ್ಧಾಂತ ಎಂದು ಬೇರೆ ಬೇರೆ ಹೆಸರುಗಳಿಂದ ಹೇಳಲ್ಪಡುತ್ತದೆ. "ವೃದ್ಧಾ ಪ್ರವೃದ್ಧಸಿದ್ಧಾಂತ ಮಧಿಗಮ್ಯ ಮುನೀಶ್ವರಾಃ | ದೈವಜ್ಞೈಃ ನಿರ್ಣಯಃ ಕಾರ್ಯೋ ದಶಮ್ಯಾದಿ ದಿನ ತ್ರಯೇ||" "ಆರ್ಯಭಟ್ಟೇನ ಗಣನಂ ದಶಮ್ಯಾದಿ ದಿನತ್ರಯೇ | ಕಾರ್ಯಮನ್ಯತ್ತು ಸೌರೇಣ ನಿಶ್ಚಿತಂ ಬ್ರಹ್ಮವಿತ್ತಮೈಃ |" ಎನ್ನುವ ನಿರ್ಣಯಾಮೃತದ ವಾಕ್ಯವೂ "ವ್ರತಾನಾಮೇವ ಸರ್ವೇಷಾಂ ಸೌರೇಣೈವ ವಿನಿರ್ಣಯಃ | ದಶಮ್ಯಾದಿ ತ್ರಯಾಣಾಂ ತು ಆರ್ಯೇಣೈವ ತು ನಿರ್ಣಯಃ | ವೃದ್ಧಾವಾರ್ಯಭಟೋ ಗ್ರಾಹ್ಯಃ ||" "ತಥಾ ದಶಮ್ಯಾದಿ ತ್ರಯಾಣಾಂ ತು ಸ್ತಂಭೇನೈವ ತು ಕಾರಯೇತ್|" ಇತ್ಯಾದಿ ವಾಕ್ಯಗಳಿಗನುಸಾರವಾಗಿ ದಶಮೀ ವೇಧರಹಿತ ಆರ್ಯ ಸಿದ್ಧಾಂತಾನುಸಾರಿ ಗಣಿತದ ಏಕಾದಶಿ ತಿಥಿಯು ಗ್ರಾಹ್ಯವೆಂದು ನಿಶ್ಚಿತವಾಗಿತ್ತು. ಇತ್ತೀಚೆಗೆ ಕೆಲವರು ನೂತನ ದೃಕ್ಸಿದ್ಧಾಂತ ಪ್ರಕಾರವೇ ಏಕಾದಶಿ ತಿಥಿಯು ಆಚರಿಸಲ್ಪಡಬೇಕೆಂದು ಹೇಳಿ, ಅದರ ಪ್ರಕಾರ ಪಂಚಾಂಗಗಳನ್ನು ಮುದ್ರಿಸಿಯೂ ಇದ್ದಾರೆ. ಅವರುಗಳು ವರಾಹ ದೇವರ ವಚನವನ್ನು ಉದಾಹರಿಸಿ, "ತಿಥಿಯು ಸೂರ್ಯಚಂದ್ರರ ಚಲನೆಯನ್ನು ಅವಲಂಬಿಸಿದೆ. ಆದರೆ ಆ ಚಲನೆಯು ಎಲ್ಲಾ ಕಾಲಗಳಲ್ಲೂ ಹೀಗೆಯೇ ಇರುತ್ತದೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಕಾಲಕಾಲದಲ್ಲಿ ಅದು ವ್ಯತ್ಯಾಸವಾಗುತ್ತಾ

ಹೋಗುತ್ತದೆ. ಆದ್ದರಿಂದ ನಾವು ಒಂದು ಸಿದ್ಧಾಂತವನ್ನು ಅವಲಂಬಿಸಿ, ಅದರ ಆಧಾರದಲ್ಲಿ ತಿಥ್ಯಾದಿಗಳನ್ನು ನಮೂದಿಸಬೇಕು. ಅದಕ್ಕೆ ಅನುಗುಣವಾಗಿ ಚಂದ್ರೋದಯ, ಗ್ರಹಣಾದಿಗಳಾದರೆ ನಾವು ಅನುಸರಿಸಿದ ಗಣಿತ ಪದ್ಧತಿ ಸರಿಯಾದುದೆಂದು ನಿರ್ಧರಿಸಬೇಕು. ಹೀಗೆ ಪ್ರತ್ಯಕ್ಷದ ಆಧಾರದಿಂದಲೇ ಗಣಿತ ಪದ್ಧತಿಗಳ ಪ್ರಾಮಾಣಿಕತೆಯು ನಿರ್ಧರಿಸಲ್ಪಡಬೇಕು. ಒಂದೇ ಗಣಿತವನ್ನು ದೀರ್ಘಕಾಲಿಕವಾಗಿ ಆಧರಿಸದೆ ಕಾಲಕಾಲಕ್ಕೆ ಪ್ರತ್ಯಕ್ಷಕ್ಕೆ ಅನುಗುಣವಾಗಿ ಪರಿಷ್ಕರಿಸಿ ತಿಥಿಯನ್ನು ನಿರ್ಣಯಿಸಬೇಕು." ಎನ್ನುತ್ತಾರೆ. (1993ನೇ ಇಸವಿ ಮಾರ್ಚಿ ತಿಂಗಳ ತತ್ವವಾದದಲ್ಲಿ ಮುದ್ರಿತವಾಗಿದೆ.) ಹಾಗೆಯೇ ಅದೇ ಮಾಸ ಪತ್ರಿಕೆಯಲ್ಲಿ "ಪ್ರಾಚೀನ ಗಣಿತವನ್ನು ಬೀಜ ಸಂಸ್ಕಾರದಿಂದ ಪರಿಷ್ಕರಿಸಿದರೆ ಅದು ದೃಗ್ಗಣಿತವೇ ಆಗುತ್ತದೆ. ಅಂದ ಮೇಲೆ ವಿಷ್ಣು ವ್ರತಗಳಲ್ಲಿ ದೃಗ್ಗಣಿತವನ್ನು ಅನುಸರಿಸುವುದು ಪ್ರಾಚೀನರಿಗೂ ವಿರುದ್ಧವಲ್ಲ" ಎಂದಿದ್ದಾರೆ. ತಮ್ಮ ಅಭಿಪ್ರಾಯವನ್ನು ಸಮರ್ಥಿಸಲು, ಇನ್ನೂ ಅನೇಕ ವಾದಗಳನ್ನು ಮಂಡಿಸಿದ್ದಾರೆ. ಅವರ ಈ ವಾದಗಳನ್ನು ವಿಮರ್ಶಿಸುವುದಕ್ಕೆ ಮುಂಚಿತವಾಗಿ ತಿಥ್ಯಾದಿಗಳ ಗಣನೆಯ ಪ್ರಕಾರವನ್ನು ತಿಳಿಸುವ ಶಾಸ್ತ್ರಗಳಲ್ಲಿ ಏನು ಹೇಳಿದೆ ಎನ್ನುವುದನ್ನು ಮೊದಲು ಪರಿಶೀಲಿಸೋಣ.

ಶಿಕ್ಷಾ, ವ್ಯಾಕರಣ, ಜ್ಯೋತಿಷ, ನಿರುಕ್ತ, ಕಲ್ಪ ಮತ್ತು ಛಂದಸ್ಸು - ಇವು ವೇದದ ಆರು ಅಂಗಗಳು. ಇದರಲ್ಲಿ ಒಂದಾದ ಜ್ಯೋತಿಷವು "ವೇದಸ್ಯ ಚಕ್ಷುಃ" ಎಂದು ಕರೆಯಲ್ಪಟ್ಟರೆ "ಚತುರ್ಲಕ್ಷಂ ತು ಜ್ಯೋತಿಷಂ" ಎಂದಿರುವುದರಿಂದ, ಈ ಶಾಸ್ತ್ರವು ಅಗಾಧವಾದುದೆಂದು ತಿಳಿಯಲ್ಪಡುತ್ತದೆ. ಈ ಶಾಸ್ತ್ರದಲ್ಲಿ ಸಂಹಿತಾ, ಹೋರಾ, ಸಿದ್ಧಾಂತವೆಂದು ಮೂರು ವಿಭಾಗಗಳಿವೆ. ಈ ಸಿದ್ಧಾಂತ ವಿಭಾಗದಲ್ಲಿ ರೇಖಾಗಣಿತ, ಗ್ರಹಗೋಲ, ಗ್ರಹಣಾದಿ ಗಣಿತ ವಿಭಾಗಗಳೆಲ್ಲಾ ಸೇರಿದೆ. ಬ್ರಾಹ್ಮ ಸಿದ್ಧಾಂತ, ಸೂರ್ಯ ಸಿದ್ಧಾಂತ, ವಸಿಷ್ಠ ಸಿದ್ಧಾಂತ, ರೋಮ ಸಿದ್ಧಾಂತ ಮತ್ತು ಪೌಲಿಶ ಸಿದ್ಧಾಂತವೆಂದು ಮುಖ್ಯವಾಗಿ ಪಂಚ ಸಿದ್ಧಾಂತ ಭೇದಗಳಿವೆ. ವಸಿಷ್ಠ, ನಾರದ, ವ್ಯಾಸ, ಮರೀಚಿ, ಮನು, ಅಂಗೀರ, ಬ್ರಹ್ಮ, ಸೂರ್ಯ, ಕಶ್ಯಪ, ಭೃಗು, ಶೌನಕ, ಗರ್ಗ, ಅತ್ರಿ, ಪರಾಶರ, ಲೋಮಶ, ಪೌಲಿಶ, ಚ್ಯವನ, ಯವನ - ಇವರೇ ಮೊದಲಾದವರು ಜ್ಯೋತಿಃಶಾಸ್ತ್ರದ ಆದ್ಯ ಪ್ರವರ್ತಕರು.

ಮೇಲಿನ ಪಂಚ ಸಿದ್ಧಾಂತಗಳನ್ನು ಮತ್ತು ಆದ್ಯ ಪ್ರವರ್ತಕರ ವಚನಗಳನ್ನು

ಅವಲಂಬಿಸಿ ಆರ್ಯಭಟ್ಟ, ಲಲ್ಲ, ಬ್ರಹ್ಮಗುಪ್ತ, ವರಾಹಮಿಹಿರ, ಭಾಸ್ಕರಾಚಾರ್ಯ ಮೊದಲಾದವರು ಗ್ರಂಥಗಳನ್ನು ಬರೆದು ಆದರಲ್ಲಿ ಗ್ರಹಣಾದಿ ಕಾಲಗಳನ್ನು ಕಂಡು ಹಿಡಿಯುವ ಕ್ರಮವನ್ನು ನಿರೂಪಿಸಿದ್ದಾರೆ. ಹಾಗೆಯೇ ಶ್ರೀಪತಿ, ಕಲ್ಯಾಣವರ್ಮ, ಜೀವ ಶರ್ಮ, ವೆಂಕಟೇಶ, ಬಲಭದ್ರ, ಗುಣಾಕರ, ಭಟ್ಟೋತ್ಪಲ, ವೈದ್ಯನಾಥ, ಮಂತ್ರೇಶ್ವರ ಮೊದಲಾದ ಮೇಧಾವಿ ಶಾಸ್ತ್ರಜ್ಞರುಗಳು ತಮ್ಮ ಪೂರ್ವಾಚಾರ್ಯರ ಅಭಿಪ್ರಾಯ ಗಳನ್ನು ವಿಪುಲವಾಗಿ ವ್ಯಾಖ್ಯಾನ ಮಾಡಿ ಗ್ರಂಥಗಳನ್ನು ರಚಿಸಿದ್ದಾರೆ. "ದಿವ್ಯಂ ಜ್ಞಾನಮತೀಂದ್ರಿಯಂ ಯದ್ಋಷಿಭಿರ್ಬ್ರಾಹ್ಮಂ ವಸಿಷ್ಠಾದಿಭಿಃ| ಪಾರಂಪರ್ಯವಶಾದ್ರ ಹಸ್ಯಮವನೀಂ ನೀತಂ ಪ್ರಕಾಶ್ಯಂ ತತಃ |" ಎಂದು ಶ್ರೀ ಭಾಸ್ಕರಾಚಾರ್ಯರು ತಮ್ಮ ಗ್ರಂಥದಲ್ಲಿ ತಿಳಿಸಿದ್ದಾರೆ. ಇದರ ತಾತ್ಪರ್ಯವೇನೆಂದರೆ "ಜ್ಯೋತಿಃ ಶಾಸ್ತ್ರವು (ಕೇವಲ ಪ್ರತ್ಯಕ್ಷದಿಂದ ತಿಳಿಯಲಿಕ್ಕಾಗದ) ದಿವ್ಯ ಅತೀಂದ್ರಿಯ ಜ್ಞಾನವಾಗಿರುವುದು. ಅತಿರಹಸ್ಯವಾದ ಈ ಶಾಸ್ತ್ರವನ್ನು ವಸಿಷ್ಠಾದಿ ಮಹರ್ಷಿಗಳು (ಜನರ ಕಲ್ಯಾಣಕ್ಕಾಗಿ) ಉಪದೇಶಿರುತ್ತಾರೆ." ಹಾಗೆಯೇ ಮುಂದುವರೆದು ಇದನ್ನು ಮೀರಿದರೆ ಆಯುಷ್ಯವೂ ಪುಣ್ಯವೂ ನಾಶವಾಗುವುದು ಎಂದು ತಮ್ಮ ಗ್ರಂಥದಲ್ಲಿ ತಿಳಿಸಿದ್ದಾರೆ. ಈ ರೀತಿಯಾಗಿ ಶ್ರೀ ಭಾಸ್ಕರಾಚಾರ್ಯರು ತಮ್ಮ ಗ್ರಂಥದಲ್ಲಿ ಬರೆದಿರುವುದರಿಂದ, ಇವರೆಲ್ಲರ ಗ್ರಂಥಗಳೂ ಪ್ರಾಚೀನ ಸಿದ್ಧಾಂತಗಳಿಗನುಸಾರಿಯಾದ ಗ್ರಂಥಗಳೇ ಆಗಿರುವುದೆಂದು ತಿಳಿಯಬಹುದಾಗಿದೆ. ಸಾತ್ವಿಕರಾದ ವಸಿಷ್ಠಾದಿ ಋಷಿ ವಚನಗಳಿಗನುಸಾರಿಯಾಗಿರು ವುದರಿಂದಲೂ, ಅವಿರೋಧವಾಗಿರುವುದರಿಂದಲೂ ಗ್ರಾಹ್ಯವೇ ಆಗಿರುತ್ತದೆ.

ಧರ್ಮಶಾಸ್ತ್ರೋಕ್ತ ಕರ್ಮಕಾಲವನ್ನು ನಿರ್ಣಯಿಸುವುದು ಪಂಚಾಂಗ ಗಣಿತದ ಮುಖ್ಯ ಪ್ರಯೋಜನ. ಕಲ್ಪಾಂತರದ ವರೆಗಿನ ಕರ್ಮಗಳಿಗೆ ಯೋಗ್ಯವಾದ ಕಾಲ ಸ್ವರೂಪವನ್ನೂ ಗ್ರಹಗತಿಸ್ವರೂಪವನ್ನೂ ತತ್ವತಃ ತಿಳಿದ ತ್ರಿಕಾಲಜ್ಞರಾದ ಮಹರ್ಷಿ ಗಳು ಕರ್ಮಕಾಲ ಪ್ರಕ್ರಿಯೆಗಳಿಗನುಸಾರವಾಗಿ ಗಣಿತ ಕ್ರಮವನ್ನೂ ಹೇಳಿರುವರು. ನಿತ್ಯವಾದ ಮಹಾಕಾಲದಲ್ಲಿ ಸಂವತ್ಸರ, ಅಯನ, ಋತು, ಮಾಸ, ಪಕ್ಷ, ತಿಥಿ, ನಕ್ಷತ್ರ ಮೊದಲಾದ ವಿಭಾಗಗಳು ಕಲ್ಪಿಸಲ್ಪಟ್ಟಿವೆ. ಅವುಗಳೆಲ್ಲವೂ ಕರ್ಮಾನು ಷ್ಠಾನಾರ್ಥವಾಗಿ ಧರ್ಮಶಾಸ್ತ್ರಗಳಲ್ಲಿ ಪ್ರತ್ಯೇಕವಾಗಿ ನಿರ್ಣಯಿಸಲ್ಪಟ್ಟಿವೆ. ಉಪವಾಸ, ವ್ರತ, ದಾನ, ಶ್ರಾದ್ಧಾದಿ ಸಾಮಾನ್ಯ-ವಿಶೇಷ ಕರ್ಮಗಳಲ್ಲಿ ತಿಥ್ಯಾದಿಗಳು ಆಯಾ ಕರ್ಮಗಳಿಗೆ ವಿಹಿತವಾಗಿರುವ ಅರುಣೋದಯ, ಪೂರ್ವಾಹ್ನ, ಮಧ್ಯಾಹ್ನ, ಅಪರಾಹ್ನ,

ಪ್ರದೋಷಾದಿ ಕರ್ಮಕಾಲ ವ್ಯಾಪ್ತಿ ಸಹಿತವಾಗಿಯೇ ಸ್ವೀಕರಿಸಲ್ಪಡುತ್ತದೆಯೇ ಹೊರತು ವ್ಯಾಪ್ತಿ ರಹಿತವಾದ ಕೆಲವು ತಿಥಿಗಳನ್ನೇ ಅಧಿಕರಿಸಿ ಕರ್ಮಗಳು ಆಚರಿಸಲ್ಪಡುವುದಿಲ್ಲ. ಅಪೇಕ್ಷಿತ ವ್ಯಾಪ್ತಿಯು ಸಿಗದಿರುವ ಸಂದರ್ಭದಲ್ಲಿ ಶಾಸ್ತ್ರ ನಿರ್ಣಯಾನುಸಾರವಾಗಿ ಬೇರೆ ದಿನಗಳಲ್ಲಿಯಾದರೂ ಆಚರಿಸಲ್ಪಡುತ್ತದೆ. ಅಂತಹ ಸಂದರ್ಭದಲ್ಲಿ ಕರ್ಮಕ್ಕೆ ವಿಹಿತವಾದ ತಿಥಿಯು ಸಿಗದೆ ಬೇರೆ ತಿಥಿ ಇದ್ದರೂ ಇರಬಹುದು. ಏಕಾದಶಿ ತಿಥಿಗೆ ದಶಮೀ ವೇಧವಿದ್ದರೆ, ಉಪವಾಸವು ದ್ವಾದಶಿಯಂದು ಆಚರಿಸಲ್ಪಡುವುದು. ಮೃತರ ತಿಥಿಯು ಏಕಾದಶಿಯಾದರೆ, ಮೃತರ ತಿಥಿಯ ದಿವಸವೇ ಆಚರಿಸಲ್ಪಡಬೇಕಾಗಿದ್ದರೂ, ಅದು ದ್ವಾದಶಿಯಂದು ಆಚರಿಸಲ್ಪಡುತ್ತದೆ. ಕುತುಪ ಕಾಲದಲ್ಲಿ ಯೋಗ್ಯವಾದ ಪಿಂಡ ಪ್ರದಾನ ಕಾರ್ಯವು ದ್ವಾದಶಿಯಂದು ಪಾರಣೆಗೆ ಮುಂಚೆಯೇ ಆಚರಿಸಲ್ಪಡುತ್ತದೆ. ದಿನ ಪೂರ್ತಿಯಾಗಿ ಕರ್ಮಯೋಗ್ಯ ತಿಥಿ ವ್ಯಾಪ್ತಿ ಇಲ್ಲದಿದ್ದರೂ, ಸೂರ್ಯೋದಯ ಕಾಲದಲ್ಲಿ ಆ ತಿಥಿಯು ಇದ್ದರೆ ದಾನ ಅಧ್ಯಯನ ಮೊದಲಾದ ಕರ್ಮಗಳಿಗೆ ಗ್ರಾಹ್ಯ ವಾಗಿದೆ ಎನ್ನುವುದನ್ನು "ಯಾಂ ತಿಥಿಂ ಸಮನುಪ್ರಾಪ್ಯ ಉದಯಂ ಯಾತಿ ಭಾಸ್ಕರಃ | ಸಾ ತಿಥಿಃ ಸಕಲಾ ಜ್ಞೇಯಾ ದಾನಾಧ್ಯಯನ ಕರ್ಮಸು" ಎನ್ನುವ ಧರ್ಮಶಾಸ್ತ್ರ ವಚನದಿಂದ ತಿಳಿಯಬಹುದು. ಮೇಲೆ ಹೇಳಿದ ವಿಷಯದಲ್ಲಿ ಇವೆಲ್ಲವೂ ದೃಷ್ಟಾಂತಗಳು.

ಪ್ರತ್ಯಕ್ಷಾದಿಗಳಿಂದ ತಿಳಿಯಲ್ಪಡುವ, ಕಾಲ ವಿಭಾಗದಲ್ಲಿ ಸೇರದ ಗ್ರಹಣಾದಿಗಳು ಹೀಗಲ್ಲ. ಗ್ರಸ್ತೋದಯ, ಗ್ರಸ್ತಾಸ್ತ, ಖಗ್ರಾಸಾದಿ ಗ್ರಹಣ ಸ್ವರೂಪಾನುಸಾರವಾಗಿ ವೇಧದ ಅವಧಿಯೂ, ಅದರಂತೆ ನಿಯಮ ವಿಶೇಷಣಗಳೂ ಇರುತ್ತವೆ. ಸ್ಪರ್ಶ, ಮಧ್ಯ, ಮೋಕ್ಷಾದಿ ಅವಸ್ಥಾ ವಿಶೇಷಗಳಿಗನುಸಾರವಾಗಿಯೇ ಸ್ನಾನ, ದಾನ, ಜಪ, ಹೋಮಾದಿ ಕರ್ಮಗಳು ಪ್ರವರ್ತಿಸುವುವು. ಗ್ರಹಣಾದಿಗಳಲ್ಲಿ "ಯಾವಚ್ಚಾಕ್ಷುಷದರ್ಶನಯೋಗ್ಯಂ ತಾವಾನ್ ಪುಣ್ಯಕಾಲಃ" ಎಂದಿರುವುದರಿಂದ, ದೇಶಾಂತರಗಳಲ್ಲಿ ದೃಶ್ಯವಾಗುವ ಗ್ರಹಣವು ದೃಶ್ಯವಿಲ್ಲದಿರುವ ದೇಶಗಳಲ್ಲಿ ಆಚರಣೀಯವಲ್ಲ. ಇದರಿಂದ ಗ್ರಹಣಾದಿಗಳು ತೀರಾ ಭಿನ್ನವಾದ ವಿಷಯಗಳೆಂದು ಸಿದ್ಧವಾಗುವುದು.

ಗ್ರಹಣಾದಿಗಳನ್ನು ಪ್ರತ್ಯಕ್ಷವಾಗಿ ನೋಡಿ ತಿಳಿಯುವಂತೆ, ತಿಥ್ಯಾದಿಗಳನ್ನು

ಪ್ರತ್ಯಕ್ಷವಾಗಿ ನೋಡಿ ತಿಳಿಯಲು ಸಾಧ್ಯವಿಲ್ಲ. ಸಪ್ತವಿಧ ಪ್ರತ್ಯಕ್ಷಗಳಲ್ಲಿ ಸಾಕ್ಷ ಪ್ರತ್ಯಕ್ಷವು ಒಂದು ವಿಧ. ಕಾಲವು ಸಾಕ್ಷಿಯಿಂದಲೇ ಗ್ರಹಿಸಲ್ಪಡುತ್ತದೆ. ತಿಥಿಯು ಕಾಲದ ಒಂದು ವಿಭಾಗವಾದರೂ ಸೂರ್ಯ ಚಂದ್ರರ ಚಲನೆಯನ್ನು ಅವಲಂಬಿಸಿದ್ದರೂ, ತಿಥಿಯ ಗಣನೆಯು ಪ್ರತ್ಯಕ್ಷದಿಂದ ಸಾಧ್ಯವಿಲ್ಲ. ಸೂರ್ಯ ಚಂದ್ರರು ಚಕ್ಷುರಿಂದ್ರಿಯದಿಂದ ಪ್ರತ್ಯಕ್ಷವಾಗಿ ತಿಳಿಯಲ್ಪಟ್ಟರೂ, ಯೋಗ್ಯ ಸನ್ನಿಕರ್ಷದ ಅಭಾವದಿಂದಾಗಿ ಯಥಾರ್ಥವಾಗಿ ತಿಳಿಯಲ್ಪಡುವುದಿಲ್ಲ. ಭೂಮಿಯ ವ್ಯಾಸ 7926.70 ಮೈಲಿಗಳು. ಸೂರ್ಯನ ವ್ಯಾಸ $432.49 \times 10^{3} \times 2$ ಅಂದರೆ 864980 ಮೈಲಿಗಳು. ಭೂಮಿಗಿಂತ ಸುಮಾರು 109 ಪಟ್ಟು ದೊಡ್ಡದು. ಭೂಮಿಗೂ ಸೂರ್ಯನಿಗೂ ಜನವರಿ ತಿಂಗಳಲ್ಲಿ 9 ಕೋಟಿ 13 ಲಕ್ಷ ಮೈಲಿ ದೂರವಿದ್ದರೆ, ಜುಲೈ ತಿಂಗಳಿನಲ್ಲಿ ಆ ದೂರವು 9 ಕೋಟಿ 45 ಲಕ್ಷ ಮೈಲಿಗಳು. ಈ ಅತಿದೂರದಿಂದಾಗಿ ಸುಮಾರು 109 ಪಟ್ಟು ದೊಡ್ಡದಾದ ಸೂರ್ಯಗ್ರಹವು ನಮಗೆ ಒಂದು ದೊಡ್ಡ ಕಾಲ್ಚೆಂಡಿನಂತೆ ಕಾಣುತ್ತದೆ. ಹೀಗೆ ಚಂದ್ರನೂ ಭೂಮಿಯಿಂದ 238857 ಮೈಲುಗಳ ದೂರದಲ್ಲಿದ್ದಾನೆ. ಚಂದ್ರನ ವ್ಯಾಸ 2159.86 ಮೈಲುಗಳು. ಹೀಗೆ ಅತಿದೂರದಿಂದಾಗಿ ಸೂರ್ಯಚಂದ್ರರ ಅಳತೆಯ ವಿಚಾರದಲ್ಲಿಯಾಗಲೀ, ದೂರದ ವಿಚಾರದಲ್ಲಿಯಾಗಲೀ, ಅಥವಾ ಆ ಗ್ರಹಗಳ ಮೇಲ್ಮೈಯ ವಿಚಾರವಾಗಿ ಯಾಗಲೀ ಯಥಾರ್ಥಜ್ಞಾನವು ಹುಟ್ಟುವುದಿಲ್ಲ. ಅದೂ ಅಲ್ಲದೆ ಆ ಗ್ರಹಗಳು 24 ಗಂಟೆಗಳ ಕಾಲ ನಮಗೆ ದೃಶ್ಯವೂ ಅಲ್ಲ. ಇದರಿಂದ ತಿಥಿಯು ಪ್ರತ್ಯಕ್ಷ ಸಿದ್ಧವಲ್ಲ. ಗಣಿತ ರಹಿತವಾದ ಆಗಮಗಳಿಂದಲೇ ತಿಳಿಯಬೇಕು. ಅನುಮಾನ, ಆಗಮಗಳಿಂದ ಮಾತ್ರ ತಿಥಿಯನ್ನು ತಿಳಿಯಬಹುದಾಗಿದೆ ಎನ್ನುವುದು ಸಿದ್ಧವಾಗುತ್ತದೆ. ಆದ್ದರಿಂದ ತಿಥಿಯನ್ನು ಧರ್ಮಜ್ಞರೂ, ತ್ರಿಕಾಲಜ್ಞಾನಿಗಳೂ ಸಾತ್ವಿಕರೂ ಆದ ವಸಿಷ್ಠಾದಿ ಋಷಿಗಳು ಹೇಳಿರುವ ವಚನಗಳಿಂದಲೇ ತಿಳಿಯಬೇಕು. ಇವರುಗಳು ಜ್ಯೋತಿಃಶಾಸ್ತ್ರ ಪ್ರವರ್ತಕರೂ, ಧರ್ಮಶಾಸ್ತ್ರ ಪ್ರವರ್ತಕರೂ ಆದ್ದರಿಂದ ಅವರುಗಳಿಂದ ರಚಿತವಾದ ಗ್ರಂಥಗಳಲ್ಲಿ ಏನು ಹೇಳಿದ್ದಾರೋ, ಹೇಗೆ ತಿಥ್ಯಾದಿಗಳ ಗಣನೆಯನ್ನು ಮಾಡಬೇಕೆಂದಿದ್ದಾರೋ ಹಾಗೆಯೇ ಗಣಿತವನ್ನು ಮಾಡಿ ತಿಥಿಯನ್ನು ತಿಳಿಯಬೇಕು. ಅವರು ಹೇಳಿದ ಸಂಸ್ಕಾರಗಳನ್ನು ಮಾಡಬೇಕು. ನಿಷೇಧಿಸಿರುವ ಸಂಸ್ಕಾರಗಳನ್ನು ಮಾಡಬಾರದು. ಅವರುಗಳು ಅವರುಗಳ ಗ್ರಂಥದಲ್ಲಿ ಏನು ಹೇಳಿದ್ದಾರೋ ಈಗ ನೋಡೋಣ.

(1) ವಿಷ್ಣುಧರ್ಮೋತ್ತರ ಉದಾಹೃತ ವಸಿಷ್ಠ ಸಿದ್ಧಾಂತದಲ್ಲಿ:-

"ಯಂತ್ರವೇಧಾದಿನಾ ಜ್ಞಾತಂ ಯದ್ಬೀಜಂ ಗಣಕೈಸ್ತತಃ |
ಗ್ರಹಣಾದಿ ಪರಿಕ್ಷೇತ ನ ತಿಥ್ಯಾದಿ ಕದಾಚನ ||

(2) ಲೋಮಶ ಸಿದ್ಧಾಂತದಲ್ಲಿ :-

ಪ್ರತ್ಯಹಂ ತಿಥಿ ನಕ್ಷತ್ರ ಯೋಗಾದ್ಯಾನಯನೇ ವಿಧುಃ |
ನ ಬೀಜಸಂಸ್ಕೃತೋ ಗ್ರಾಹ್ಯೇ ಗ್ರಹಣಾದೌ ಸ ಬೀಜಕಃ |

(3) ಬ್ರಾಹ್ಮ ಸಿದ್ಧಾಂತದಲ್ಲಿ:-

ಮಂದೋಚ್ಚಾಭ್ಯಾಮರ್ಕಚಂದ್ರೌ ಯದಾ ಮಂದಫಲಂ ಮುನೇ |
ಆಕೃಷ್ಯೇತೇ ಏವ ತಸ್ಮಾನ್ಮಂದ ಕರ್ಮೈಕಮೇತಯೋಃ ||

(4) ವೃದ್ಧವಾಸಿಷ್ಠ ಸಿದ್ಧಾಂತ :- ಕರ್ಮಣ್ಯೈಕೇನ ಮಾಂದೇನ ಸ್ಪಷ್ಟೋ ಭಾನು ಸ್ತಥಾ ಶಶೀ ||

ಭೌಮಾದಯಃ ಸ್ಫುಟಾಖೇಟಾಶ್ಚತುರ್ಭಿಃ ಕರ್ಮಭಿಃ ಸ್ಮೃತಾ ||

(5) ಸೂರ್ಯ ಸಿದ್ಧಾಂತದಲ್ಲಿ :- ಮಾಂದಂ ಕರ್ಮೈಕಮರ್ಕೇಂದ್ವೋರ್ಭೌ ಮಾದೀನಾಮಥೋಚ್ಯತೇ||

(6) ಗರ್ಗ ಮಹರ್ಷಿಗಳು :- ಶೃಂಗೋನ್ನತಿ ಯುತಿಚ್ಛಾಯಾಗ್ರಹಸ್ತೋದಯ ಸಾಧನೇ | ಬೀಜೇನ ಸಂಸ್ಕೃತಾಃ ಖೇಟಾಸ್ತದ್ಧೀನಾಸ್ತ್ವನ್ಯಕರ್ಮಸು ||

(7) ಶಾಕಲ್ಯ ಸಂಹಿತೆಯಲ್ಲಿ ನಾರದರಿಗೆ ಬ್ರಹ್ಮದೇವರು ಹೇಳಿದ್ದು:- ಗ್ರಹಣೇ ಗ್ರಹಯೋಗೇ ಚ ಕಾಲಭಾಲಗ್ನ ಸಾಧನೇ | ಶೃಂಗೋನ್ನತ್ಯುದಯಾಸ್ತಾದೌ ಗ್ರಹೇ ಬೀಜಂ ವಿಧೀಯತೇ|| ತಿಥ್ಯಾದಿ ಸಾಧನೇ ಕ್ವಾಪಿ ನಾರ್ಕೇಂದ್ವೋರ್ಬೀಜ ಯೋಗಿತಾ | ಅನ್ಯಥಾ ಸಾಯನಾರ್ಕಸ್ಯ ರಾಶಿ ಸಂಕ್ರಮ ಸಂಭವೇ | ಶುದ್ಧ ಸಂಕ್ರಮಣ ಶ್ರಾದ್ಧಂ ಪ್ರಸಜ್ಯೇತ ನ ಯುಜ್ಯತೇ ||

ಮೇಲೆ ಉದಾಹರಿಸಿರುವ ದೇವತೆಗಳ ಮತ್ತು ಋಷಿಗಳ ವಚನದ ತಾತ್ಪರ್ಯವು ಈ ರೀತಿಯಾಗಿದೆ: (1) ಗಣಿತ ಶಾಸ್ತ್ರಜ್ಞರು ಯಂತ್ರ ವೇಧಾದಿಗಳಿಂದ

ಸಿದ್ಧಮಾಡುವ ಬೀಜ ಸಂಸ್ಕಾರಗಳನ್ನು ಗ್ರಹಣಾದಿಗಳಲ್ಲಿ ಹೊರತು, ತಿಥ್ಯಾದಿ ಗಣಿತಗಳಲ್ಲಿ ಎಂದಿಗೂ ಮಾಡಬಾರದು (2) ಗ್ರಹಣಾದಿಗಳಲ್ಲಿ ಹೊರತು ನಿತ್ಯದ ತಿಥ್ಯಾದಿ ಗಣಿತದಲ್ಲಿ ಚಂದ್ರನಿಗೆ ಬೀಜ ಸಂಸ್ಕಾರ ಮಾಡಬಾರದು. (3) ಸೂರ್ಯಚಂದ್ರರಿಗೆ ಮಂದೋಚ್ಚದ ಆಕರ್ಷಣ ಸ್ವಾಭಾವಿಕವಾದುದರಿಂದ, ಆ ಸಂಸ್ಕಾರವನ್ನು ಮಾತ್ರ ಮಾಡಬೇಕು. ಅರ್ಥಾತ್ ಇತರ ಸಂಸ್ಕಾರಗಳನ್ನು ಮಾಡಬಾರದು. (4-6) ಶೃಂಗೋನ್ನತಿ, ಗ್ರಹಯುತಿ, ಗ್ರಹಣ, ಅಸ್ತೋದಯ, ಛಾಯಾಸಾಧನ ಇತ್ಯಾದಿಗಳಲ್ಲಿ ಬೀಜ ಸಂಸ್ಕಾರವನ್ನು ಉಪಯೋಗಿಸಬೇಕು. ಕುಜಾದಿಗ್ರಹರಿಗೂ ಅದನ್ನು ಉಪಯೋಗಿಸತಕ್ಕದ್ದು. ತಿಥಿ ನಕ್ಷತ್ರಾದಿಗಳಿಗೆ ಅದನ್ನು ಉಪಯೋಗಿಸಲೇಬಾರದು. (7) ಗ್ರಹಣ ಗ್ರಹಯೋಗಾದಿಗಳಲ್ಲಿ ಪ್ರತ್ಯಕ್ಷಕ್ಕೆ ಸರಿ ಬರುವಂತೆ ಬೀಜ ಸಂಸ್ಕಾರ ಮಾಡಬೇಕು. ತಿಥ್ಯಾದಿ ಸಾಧನೆಯಲ್ಲಿ ಸೂರ್ಯಚಂದ್ರರಿಗೆ ಎಂದೆಂದೂ ಬೀಜ ಸಂಸ್ಕಾರ ಮಾಡಬಾರದು. ಈ ವ್ಯವಸ್ಥೆಯನ್ನು ಬಿಟ್ಟು (ಎಲ್ಲದಕ್ಕೂ ಪ್ರತ್ಯಕ್ಷವೇ ಆಗಬೇಕೆಂದರೆ ಪ್ರತ್ಯಕ್ಷವೆನಿಸುವ) ಸಾಯನ ಸೂರ್ಯನ ಮೇಷಾಯನಾದಿ ಗಳಲ್ಲಿಯೇ (ಚಲ ಸಂಕ್ರಾಂತಿಯಲ್ಲಿಯೇ) ಶುದ್ಧ ಸಂಕ್ರಮಣದಲ್ಲಿ (ನಿರಯನದಲ್ಲಿ) ಮಾಡತಕ್ಕ ಶ್ರಾದ್ಧವನ್ನು ಮಾಡುವಂತೆ ಅನರ್ಥವೊದಗೀತು. ಇದು ಯೋಗ್ಯವಾದು ದಲ್ಲ. ಇದರಿಂದ ತಿಳಿಯುವುದೇನೆಂದರೆ **ತ್ರಿಕಾಲ ಜ್ಞಾನಿಗಳಾದ ಎಲ್ಲಾ ಋಷಿಗಳೂ ದೇವತೆಗಳೂ ಬೀಜ ಸಂಸ್ಕಾರವನ್ನು ತಿಥ್ಯಾದಿ ಗಣನೆಯಲ್ಲಿ ನಿಷೇಧಿಸಿದ್ದಾರೆ.**

ಗ್ರಹಣ ಗ್ರಹಯೋಗಾದಿಗಳಲ್ಲಿ ಬೀಜ ಸಂಸ್ಕಾರವನ್ನು ಮಾಡಬೇಕೆಂದೂ ತಿಳಿಸಿದ್ದಾರೆ. ಈ ಬೀಜ ಸಂಸ್ಕಾರವನ್ನು ಯಂತ್ರ ವೇಧಾದಿಗಳಿಂದ ಸಿದ್ಧಮಾಡಬೇ ಕೆಂದೂ ತಿಳಿಸಿದ್ದಾರೆ. ಹೀಗೆ ಗ್ರಹಣಾದಿಗಳಿಗೆ ಬೀಜ ಸಂಸ್ಕಾರದ ಅವಶ್ಯಕತೆಯೂ, ತಿಥ್ಯಾದಿಗಳಿಗೆ ಅದರ ನಿಷೇಧವೂ ಎಲ್ಲಾ ಋಷಿಗಳ ದೇವತೆಗಳ ಏಕ ರೀತಿ ಅಭಿಪ್ರಾಯ ವಾಗಿದೆ. ಪರಸ್ಪರ ವಿರುದ್ಧ ವಚನಗಳೂ ಇಲ್ಲ. ಇದಲ್ಲದೆ ಸ್ಕಾಂಧ ಪುರಾಣ ಕಲಿ ಮಹಾತ್ಮೆಯಲ್ಲಿ "ದೃಕ್ಸಿದ್ಧ ಖೇಟಗ್ರಹಸಾಧಿತಾಸು ಕುರ್ವಂತಿ ಕೇಚಿತ್ತಿಥಿಷು ಪ್ರಮಾದಾತ್ | ಶ್ರಾದ್ಧಾದಿಕಂ ತತ್ಪಿತೃಶಾಪತಸ್ತೇ ಪುಣ್ಯಕ್ಷಯಾದ್ದುರ್ಗತಿಮಾಪ್ನು ವಂತಿ|| ತಾತ್ಪರ್ಯ:- ಕಲಿಕಾಲದಲ್ಲಿ ಕೆಲವರು ದೃಕ್ಸಿದ್ಧ ತಿಥ್ಯಾದಿಗಳಲ್ಲಿ ಶ್ರಾದ್ಧಾದಿ ಗಳನ್ನು ಆಚರಿಸುವರು. ಅಂತಹವರು ಪಿತೃಗಳ ಶಾಪಕ್ಕೆ ಗುರಿಯಾಗಿ ಪುಣ್ಯಕ್ಷಯದಿಂದ ದುರ್ಗತಿಯನ್ನು ಹೊಂದುತ್ತಾರೆ. ಹೀಗೆ ಸ್ಮೃತಿಗಳಲ್ಲಿಯೂ ನಿರೂಪಿತವಾಗಿದೆ.

ಇನ್ನು ಖಗೋಳಶಾಸ್ತ್ರದ ವಿಚಾರದಲ್ಲಿ ಗ್ರಂಥಗಳನ್ನು ರಚಿಸಿರುವ ಪ್ರಾಚೀನ

ಮೇಧಾವಿ ಖಗೋಳಜ್ಞರು ಅವರುಗಳ ಗ್ರಂಥದಲ್ಲಿ ಏನು ಹೇಳಿದ್ದಾರೆನ್ನುವುದನ್ನು ನೋಡೋಣ. ಅವು ಈ ರೀತಿಯಾಗಿವೆ.

(1) ಕಾಲಾರ್ಕದಲ್ಲಿ:- ಮಾಂದ್ಯೈಕ ಕರ್ಮಸಂಸಿದ್ಧವ್ಯರ್ಕೇಂದೂತ್ಪಾದಿತಾ ತಿಥಿಃ | ಶ್ರಾದ್ಧಾದಿಷು ಪರಿಗ್ರಾಹ್ಯಾ ಗ್ರಹಣಾದೌ ತು ಬೀಜಯುಕ್ ||

(2) ಜ್ಯೋತಿಃ ಸಿದ್ಧಾಂತದಲ್ಲಿ:- ಚಂದ್ರಾರ್ಕ ಶಶಿ ತುಂಗಾನಾಂ ಬೀಜಂ ತಿಥ್ಯಾದಿ ಸಾಧನೇ | ನ ಕರ್ತವ್ಯಂ ಹಿ ಕರ್ತವ್ಯಂ ಚಂದ್ರಾರ್ಕ ಗ್ರಹಣಾದಿಷು ||

(3) ಯಂತ್ರ ದೀಪಿಕಾ ವ್ಯಾಖ್ಯಾನದಲ್ಲಿ ಲಲ್ಲಾಚಾರ್ಯರು:- ಶೃಂಗೋನ್ನತೌ ಗ್ರಹಯುತೌ ಗ್ರಹಣೇ ತಥಾಽಸ್ತೇ ಛಾಯಾ ನಿರೀಕ್ಷಣ ವಿಧಾವುದಯೇ ಪ್ರದೇಯಂ | ಬೀಜ ಫಲಂ ತಿಥಿ ಭಂಗೋಗವಿಧೌ ತ್ವದೇಯಂ ಚಂದ್ರೇ ಪ್ರದೇಯಮಖಿಲಂ ಕ್ಷಿತಿಜಾದಿಕೇಷು ||

(4) ತಿಥಿ ಕೌಸ್ತುಭದಲ್ಲಿ :- "ಸ್ವದೇಶೋಚಿತ ನಿರ್ಬೀಜಗ್ರಹೈಃ ಪಂಚಾಂಗ ಸಾಧನಂ| ಸ ಬೀಜೈರ್ಗ್ರಹಣಾದೀನಾಂ ಪುಣ್ಯಕರ್ಮಣಿ ಶಸ್ಯತೇ||

(5) ಸಿದ್ಧಾಂತ ಸಂಗ್ರಹದಲ್ಲಿ :- ಮಾಂದಂ ಕರ್ಮೈಕಮರ್ಕೇಂದ್ವೋಃ ಕಾರ್ಯಂ ತಿಥ್ಯಾದಿ ಸಾಧನೇ | ಚತಸ್ರ ಉದಯಾಸ್ತಾದೌ ಗ್ರಹಣೇ ಪಂಚ ಸಂಸ್ಕ್ರಿಯಾ||

(6) ಜ್ಯೋತಿಃ ಸಿದ್ಧಾಂತ ಸಂಗ್ರಹದಲ್ಲಿ:- ಶೀತಾಂಶುಶ್ಚರ ಬೀಜೇನ ಸಂಸ್ಕೃತೋ ದೃಕ್ಸಮೋ ಭವೇತ್| ದೃಕ್ಸಿದ್ಧೇಂದು ಸಮಾನೀತಂ ತಿಥ್ಯಾದ್ಯಂ ನೈವ ಯುಜ್ಯತೇ|| ವೈದಿಕೇಷ್ಟ್ವವಿಗೀತೇಷು ಹವ್ಯಕರ್ಮಾದಿ ಕರ್ಮಸು | ಆಸ್ತಿಕ್ಯೈಃ ಶಾಸ್ತ್ರ ಶರಣ್ಯೈರನುಷ್ಠಾನೇಷು ಸಂತತಂ |

(7) ಸಿದ್ಧಾಂತ ರತ್ನದಲ್ಲಿ :- ಮಾಂದಂ ಕರ್ಮೈಕಮರ್ಕೇಂದ್ವೋಃ ಕಾರ್ಯಂ ತಿಥಿ ಸಾಧನೇ ||

(8) ತಂತ್ರ ಸಂಗ್ರಹ ವ್ಯಾಖ್ಯಾನದಲ್ಲಿ :- ವಿಧುರ ಯಮುಪರಾಗೇ ಖೇಚರಾಣಾಂ ಚ ಯೋಗೇ ನಿಜ ತನುಸಿತಮಾನಾದ್ಯಂಗುಲಾನಾಂ ಪ್ರಸಂಗೇ | ಕುತಲಗಜನವ ರ್ಯೈರಗ್ರಗಣ್ಯೋಽಪ್ಯಗಣ್ಯಃ ಸಕಲತಿಥಿ ಭಯೋಗೋತ್ಪತ್ತಿ ವೃದ್ಧಿ ಕ್ಷಯೇಷು ಚ |

(9) ಗಣಕಾನಂದದ ಮಧ್ಯಮಾಧ್ಯಾಯದಲ್ಲಿ :- ಕರ್ತವ್ಯಾಃ ಪಂಚ ಸಂಸ್ಕಾರಾ ಮಧ್ಯಖೇಟೇಷು ಸರ್ವದಾ| ಪೂರ್ವಂ ಧ್ರುವಃ ಪ್ರಥಮತಸ್ತ್ರಿಗುಣಾಬ್ದಿಸ್ತತಃ ಪರಂ || ದೇಶಾಂತರ ಬೀಜಫಲಂ ಬಾಹ್ವೋಃ ಫಲಮಿತಿ ಕ್ರಮಾತ್|ಸೂರ್ಯಜ್ಞ ಯೋರ್ಬೀಜಫಲಮನುಕ್ತಂ ಶಾಸ್ತ್ರಕರ್ತೃಭಿಃ | ಚಂದ್ರೋಚ್ಚಸ್ಯ ತಥಾ ರಾಹೋಶ್ಚಂದ್ರಾರ್ಕ ಗ್ರಹಣಾದಿಷು | ಅವಶ್ಯಕತ್ವಾತ್ಕರ್ತವ್ಯಂ ನ ತಿಥ್ಯಾನಯನಾದಿಷು ||

ಮೇಲೆ ಉದಾಹರಿಸಿರುವ ಗ್ರಂಥಗಳ ವಚನಗಳ ತಾತ್ಪರ್ಯವು ಈ ರೀತಿಯಾಗಿದೆ:-

(1) ಮಂಧ ಸಂಸ್ಕಾರ ಮಾಡಿದ ಸೂರ್ಯ-ಚಂದ್ರ ಸ್ಫುಟಾಂತರದಿಂದ ಸಾಧಿಸಿದ ತಿಥಿಯೇ ಶ್ರಾದ್ಧಾದಿ ಕರ್ಮಗಳಲ್ಲಿ ಗ್ರಾಹ್ಯವಾಗಿರುವುದು. ಇತರ ಸಂಸ್ಕಾರಗಳನ್ನು ಗ್ರಹಣಾದಿಗಳಲ್ಲಿ ಮಾಡತಕ್ಕದ್ದು. (2) ತಿಥ್ಯಾದಿಗಳನ್ನು ಸಾಧಿಸುವಾಗ ಸೂರ್ಯ, ಚಂದ್ರ, ಚಂದ್ರೋಚ್ಚಗಳಿಗೆ ಬೀಜ ಸಂಸ್ಕಾರವನ್ನು ಮಾಡಬಾರದು. ಗ್ರಹಣಾದಿಗಳಲ್ಲಿ ಆ ಸಂಸ್ಕಾರಗಳು ಮಾಡಬೇಕಾದುದು.(3) ಶೃಂಗೋನ್ನತಿ, ಗ್ರಹಯುತಿ, ಗ್ರಹಣ, ಅಸ್ತೋದಯ, ಛಾಯಾಸಾಧನ ಈ ಪ್ರಸಂಗಗಳಲ್ಲಿ ಬೀಜ ಸಂಸ್ಕಾರಗಳನ್ನು ಉಪಯೋಗಿಸಬೇಕು. ತಿಥಿ ನಕ್ಷತ್ರಾದಿಗಳಿಗೆ ಅವುಗಳನ್ನು ಉಪಯೋಗಿಸಬಾರದು. ಕುಜಾದಿಗ್ರಹರಿಗೆ ಅದನ್ನು ಉಪಯೋಗಿಸತಕ್ಕದ್ದು (4) ಸ್ವದೇಶೋಚಿತ (ದೇಶಾಂತರ, ಚರ) ಸಂಸ್ಕಾರಗಳ ಹೊರತು ಬೀಜ ಸಂಸ್ಕಾರವನ್ನೇನೂ ಮಾಡದ ಗ್ರಹರಿಂದಲೇ ತಿಥ್ಯಾದಿ ಪಂಚಾಂಗವನ್ನು ಸಾಧಿಸಬೇಕು. ಗ್ರಹಣಾದಿ ಪುಣ್ಯಕಾಲ ಸಾಧನೆಯಲ್ಲಿ ಮಾತ್ರ ಬೀಜ ಸಂಸ್ಕಾರವು ಯುಕ್ತವಾಗುವುದು. (5) ತಿಥ್ಯಾದಿ ಸಾಧನೆಗಳಲ್ಲಿ ಮಂದಕರ್ಮವೊಂದು, ಉದಯಾಸ್ತಗಳಲ್ಲಿ ನಾಲ್ಕು ಮತ್ತು ಗ್ರಹಣದಲ್ಲಿ ಐದು ಸಂಸ್ಕಾರಗಳನ್ನು ಮಾಡಬೇಕು. (6) ಚರ ಬೀಜದಿಂದ ಸಂಸ್ಕೃತನಾದ ಚಂದ್ರನು ದೃಕ್ಸಿದ್ಧನಾಗುವನು. ಆದರೆ ದೃಕ್ಸಿದ್ಧ ಗ್ರಹಗಳಿಂದ ಸಾಧಿಸಿದ ತಿಥ್ಯಾದಿಗಳು ಪರಮ ಪವಿತ್ರವಾದ ಹವ್ಯ ಕವ್ಯಾದಿ ವೈದಿಕ ಕರ್ಮಾನುಷ್ಠಾನುಗಳಿಗೆ ಅಯೋಗ್ಯವಾಗಿರುವುದರಿಂದ ಅವನ್ನು ಶಾಸ್ತ್ರಾಚರಣರಾದ ಆಸ್ತಿಕರು ಸರ್ವಥಾ ಸ್ವೀಕರಿಸಬಾರದು. (7) ತಿಥ್ಯಾದಿ ಗಣಿತದಲ್ಲಿ ಸೂರ್ಯ ಚಂದ್ರರಿಗೆ ಮಾಂದ ಸಂಸ್ಕಾರವನ್ನಷ್ಟೇ ಮಾಡಬೇಕು. (8) ದೃಕ್ಸಿದ್ಧ ಚಂದ್ರನು ಗ್ರಹಣ, ಗ್ರಹಯೋಗ,

ಶೃಂಗೋನ್ನತಿ ಮುಂತಾದವುಗಳಲ್ಲಿ ಪ್ರತ್ಯಕ್ಷ ಗ್ರಾಹ್ಯನಾದರೂ ತಿಥಿ-ನಕ್ಷತ್ರಾದಿ ಗಣಿತದಲ್ಲಿಯೂ, ವೃದ್ಧಿ-ಕ್ಷಯಗಳಲ್ಲಿಯೂ ಈ ದೃಕ್ಸಿದ್ಧ ಚಂದ್ರನನ್ನು ಸ್ವೀಕರಿಸ ಬಾರದು. (9) ಮಧ್ಯಮ ಗ್ರಹಗಳಿಗೆ ಧ್ರುವ, ತ್ರಿಗುಣಾಬ್ಧ, ದೇಶಾಂತರ, ಬೀಜಫಲ, ಬಾಹ್ಯಫಲ ಎಂಬ ಐದು ಸಂಸ್ಕಾರಗಳನ್ನು ಮಾಡಬೇಕು. ಶಾಸ್ತ್ರಕರ್ತೃಗಳು ಸೂರ್ಯ ಬುಧರಿಗೆ ಬೀಜ ಫಲವನ್ನು ಹೇಳಿಲ್ಲ. ಚಂದ್ರ ಸೂರ್ಯರಿಗೂ, ಚಂದ್ರೋಚ್ಚ-ರಾಹು ಇವುಗಳಿಗೂ ಗ್ರಹಣಾದಿಗಳಲ್ಲಿ ಅವಶ್ಯವಿರುವುದರಿಂದ ಬೀಜ ಸಂಸ್ಕಾರ ಮಾಡಬೇಕು. ಆದರೆ ತಿಥ್ಯಾದಿ ಸಾಧನೆಯಲ್ಲಿ ಬೀಜ ಸಂಸ್ಕಾರವನ್ನು ಮಾಡಕೂಡದು. ದೃಕ್ಸಿದ್ಧಾಂತ ಮಾರ್ಗವು ತಿಥ್ಯಾದಿಗಳ ವಿಷಯದಲ್ಲಿ ಅಗ್ರಾಹ್ಯವು ಎಂದು ಸಮರ್ಥಿಸಿರುವ "ದೃಕ್ಪಂಚಾಂಗ ಖಂಡನಂ" ಇತ್ಯಾದಿ ಗ್ರಂಥಗಳಲ್ಲಿ ಮೇಲ್ಕಂಡ ಪ್ರಮಾಣಗಳಲ್ಲದೇ ಇನ್ನೂ ಅನೇಕ ಪ್ರಮಾಣಗಳು ಉಕ್ತವಾಗಿವೆ. ಈ ವಚನಗಳಿಂದಲೂ ತಿಳಿಯುವು ದೇನೆಂದರೆ ತಿಥ್ಯಾದಿಗಳಿಗೆ ಸೂರ್ಯಚಂದ್ರರನ್ನು ಸ್ಫುಟ ಮಾಡುವಾಗ ಬೀಜ ಸಂಸ್ಕಾರವನ್ನು ಮಾಡಬಾರದು. ಗ್ರಹಣ, ಗ್ರಹಸ್ಫುಟಾದಿಗಳಿಗೆ ಬೀಜ ಸಂಸ್ಕಾರವನ್ನು ಮಾಡಬೇಕು. ಅನೇಕ ದಶಮಾನಗಳಿಂದಲೂ ಪಂಚಾಂಗಗಳಲ್ಲಿ ಈ ರೀತಿಯಾದ ಗಣಿತ ಮಾಡುತ್ತಿರುವುದೇ ಕಂಡು ಬಂದಿದೆ. ಮೇಲೆ ಸಂಗ್ರಹಿಸಿ ಹೇಳಿರುವ ಎಲ್ಲಾ ವಚನಗಳೂ, ಹಾಗೆಯೇ ತ್ರಿಕಾಲಜ್ಞರಾದ ಋಷಿಗಳ ಮತ್ತು ದೇವತೆಗಳ ವಚನಗಳೂ ವಿರುದ್ಧವಾಗಿದ್ದರೂ, "ಪ್ರಾಚೀನ ಗಣಿತವನ್ನು ಬೀಜ ಸಂಸ್ಕಾರದಿಂದ ಪರಿಷ್ಕರಿಸಿದರೆ ಅದು ದೃಗ್ಗಣಿತವೇ ಆಗುತ್ತದೆ. ಅಂದ ಮೇಲೆ ವಿಷ್ಣು ವ್ರತಗಳಲ್ಲಿ ದೃಗ್ಗಣಿತವನ್ನು ಅನುಸರಿಸುವುದು ಪ್ರಾಚೀನರಿಗೂ ವಿರುದ್ಧವಲ್ಲ" ಎಂದು ಹೇಳುವುದು ಅರ್ಥ ಹೀನವಾದ ಮಾತುಗಳು. ಋಷಿಪ್ರೋಕ್ತ ಸಿದ್ಧಾಂತಗಳಲ್ಲಿ ಉಕ್ತವಾಗದಿರುವ ಬೀಜಸಂಸ್ಕಾರವನ್ನು ತಿಥ್ಯಾದಿಗಳಿಗೆ ದೃಕ್ಪಂಚಾಂಗದಲ್ಲಿ ಮಾಡಿರುವುದರಿಂದ, ಜ್ಯೋತಿಷ-ಧರ್ಮ ಶಾಸ್ತ್ರಗಳಲ್ಲಿ ಸರ್ವ ಸಾಮಾನ್ಯವಾಗಿ ತಿಳಿದು ಬರುವ ತಿಥ್ಯಾದಿಗಳ ಪರಮ ವೃದ್ಧಿ-ಕ್ಷಯಗಳಿಗೂ ಹಾಗೂ ತಿಥ್ಯಾದಿಗಳ ಕಾಲಕ್ಕೂ, ನೂತನ ದೃಕ್ಸಿದ್ಧಾಂತ ಪಂಚಾಂಗಗಳಲ್ಲಿ ಕಾಣಿಸಿರುವ ತಿಥ್ಯಾದಿಗಳ ಕಾಲಕ್ಕೂ ಬಹಳ ವ್ಯತ್ಯಾಸವು ಬರುವುದು. ವಸಿಷ್ಠಾದಿ ಸಾತ್ವಿಕ ಋಷಿ ವಚನಗಳಿಗೆ ವಿರುದ್ಧವಾದುದರಿಂದ ಅಗ್ರಾಹ್ಯವು.

ದೃಗ್ಗಣಿತವಾದಿಗಳು "ತಿಥಿಯು ಪ್ರತ್ಯಕ್ಷ ಸಿದ್ಧ, ಪ್ರತ್ಯಕ್ಷವೇ ಪ್ರಬಲ ಪ್ರಮಾಣ, ಈ ವಿಷಯದಲ್ಲಿ ವರಾಹದೇವರ ವಚನವಿದೆ" ಎನ್ನುತ್ತಾರೆ. ಕೆಲವು

ದೃಗ್ಗಣಿತ ವಾದಿಗಳು ವಿಜ್ಞಾನಿಗಳು ಉಪಯೋಗಿಸುವ ಅತ್ಯಂತ ಸೂಕ್ಷ್ಮ ಉಪಕರಣಗಳ ಸಹಾಯದಿಂದ ಏಕಾದಶಿ ತಿಥಿಯನ್ನು ತಿಳಿದು ಉಪವಾಸ ಮಾಡಬೇಕೆನ್ನುತ್ತಾರೆ. ಅತ್ಯಂತ ಸೂಕ್ಷ್ಮ ಉಪಕರಣಗಳಿಂದ ವಿಜ್ಞಾನಿಗಳು ತಿಳಿಯುವ ಮಾರ್ಗವೂ ಪ್ರತ್ಯಕ್ಷ ಸಿದ್ಧವಾದುದಲ್ಲ. ಯಾವ ವಿಜ್ಞಾನಿಯೂ ಚಂದ್ರ ಸೂರ್ಯರು ಭೂಮಿಗೆ ಇಷ್ಟೇ ದೂರದಲ್ಲಿದ್ದಾರೆಂದು ಅಳತೆ ಮಾಡಿ ಹೇಳಿಲ್ಲ. ಪ್ರಯೋಗ ಶಾಲೆಯಲ್ಲಿ ತಿಳಿದು ಬಂದಿರುವ ಪ್ರಮೇಯವನ್ನು ಅನುಸರಿಸಿ ಮಾಡಿದ ಗಣಿತದಿಂದ ಸೂರ್ಯ ಚಂದ್ರರ ದೂರ ಮೊದಲಾದವುಗಳನ್ನು ತಿಳಿಸುತ್ತಾರೆ. ವಿಜ್ಞಾನಿಗಳಿಗೆ ಮಾರ್ಗವೂ ಅನುಮಾನ ಮತ್ತು ಆಗಮ ವಿಭಾಗದಲ್ಲಿ ಸೇರುತ್ತದೆ. ಪ್ರತ್ಯಕ್ಷ ವಿಭಾಗದಲ್ಲಿ ಸೇರುವುದಿಲ್ಲ. ದೃಗ್ಗಣಿತ ವಾದಿಗಳು ಹೇಳುವ ವರಾಹ ದೇವರ ವಚನವು ಧರಣೀ ದೇವಿಯರ ಪ್ರಶ್ನೆಗೆ ಉತ್ತರ ರೂಪವಾಗಿದೆ. ಧರಣೀ ದೇವಿಯರು ವರಾಹ ದೇವರನ್ನು ಕುರಿತು, "ಕಥಮೇತದ್ವಿಜಾನೀಯಂ ಸೂರ್ಯಚಂದ್ರಮಸೋರ್ಗತಿಮ್| ಯಥಾ ಭವಂತಿ ತಿಥಯಃ ತ್ರಿಂಶದ್ಯಾಃ ಕಥಿತಾಸ್ತ್ವಯಾ || ಚಕ್ಷುಷಾ ನೈವ ಸುಜ್ಞಾತುಂ ಶಕ್ಯತೇ ವ್ಯೋಮಗಾ ಸ್ಥಿತಿಃ | ಅತಿಸೂಕ್ಷ್ಮತಮಾ ಯಸ್ಮಾತ್ ವ್ರತಹಾನಿರ್ಭವೇದ್ಧ್ರುವಮ್|| ಜ್ಞಾನೋಪಾಯಮತಸ್ತಸ್ಯಾ ಯಥಾವದ್ವದ ಮೇ ಪ್ರಭೋ|| (ತಾತ್ಪರ್ಯ:- "ಹೇ ಪ್ರಭೋ! ಸೂರ್ಯಚಂದ್ರರ ಗತಿಗನುಸಾರವಾಗಿ ಮೂವತ್ತು ತಿಥಿಗಳಾಗುತ್ತವೆಂದು ನಿನ್ನಿಂದ ಹೇಳಲ್ಪಟ್ಟಿತು. ಈ ಸೂರ್ಯ ಚಂದ್ರರ ಗತಿಯನ್ನು ತಿಳಿಯುವುದು ಹೇಗೆ? ಆಕಾಶದಲ್ಲಿ ಇವರ ಸ್ಥಿತಿಯು ಅತ್ಯಂತ ಸೂಕ್ಷ್ಮವಾದ್ದರಿಂದ ಕಣ್ಣಿನಿಂದ ತಿಳಿಯಲು ಸಾಧ್ಯವಿಲ್ಲ. (ಅರ್ಥಾತ್ ಪ್ರತ್ಯಕ್ಷ ಸಿದ್ಧವಲ್ಲ) ಇದರಿಂದ ನಿಶ್ಚಯವಾಗಿಯೂ ವ್ರತಹಾನಿಯಾಗುವುದು. ಆದ್ದರಿಂದ ಇದನ್ನು ಯಥಾವತ್ತಾಗಿ ತಿಳಿಯುವ ಜ್ಞಾನೋಪಾಯವನ್ನು ತಿಳಿಸು") ಎಂದು ಪ್ರಾರ್ಥಿಸಿದಳು.

ಜ್ಞಾನೋಪಾಯವನ್ನು ಬೋಧಿಸಲು ಪ್ರಾರ್ಥಿಸಿದಾಗ, ವರಾಹ ದೇವರು ತಾನು ಹಿಂದೆ ಜ್ಯೋತಿಶ್ಶಾಸ್ತ್ರವನ್ನು ಉಪದೇಶಿಸಿರುವುದಾಗಿಯೂ, ಋಷಿಗಳು ದೇವತೆಗಳು ಈ ಬಗ್ಗೆ ತಮ್ಮ ತಮ್ಮ ಸಿದ್ಧಾಂತಗಳನ್ನು ರಚಿಸಿರುವುದಾಗಿಯೂ, ಆ ಸಿದ್ಧಾಂತಗಳಲ್ಲಿ ಯಾವ ಯಾವ ದೇಶದಲ್ಲಿ ಯಾವ ಸಿದ್ಧಾಂತ ಮಾರ್ಗದ ಗಣಿತಕ್ಕನುಗುಣವಾಗಿ ಸೂರ್ಯ-ಚಂದ್ರರ ಗ್ರಹಣಗಳು ಸಂಭವಿಸುವುವೋ, ಗ್ರಹಗಳ ಉದಯಾಸ್ತಗಳಾಗುವುವೋ, ಆಯಾ ಸಿದ್ಧಾಂತ ಮಾರ್ಗದ ಗಣಿತದಿಂದ ಸೂರ್ಯ-ಚಂದ್ರರ ಸ್ಫುಟಮಾಡಿ ತಿಥಿಯನ್ನು ಸಾಧಿಸಬೇಕೆಂದು ಉತ್ತರವಿತ್ತನು. ಈ ರೀತಿಯಾಗಿ ಆಗಮಮಾರ್ಗವನ್ನೇ

ತಿಥಿಯನ್ನು ತಿಳಿಯಲು ಬೋಧಿಸಿರುವನು. ಈ ಪ್ರಶ್ನೋತ್ತರಗಳಿಂದ ತಿಥಿಯು ಪ್ರತ್ಯಕ್ಷ ಸಿದ್ಧವಲ್ಲ. ಆಗಮದಿಂದಲೇ ತಿಳಿಯಬೇಕು ಎಂಬ ಎರಡು ಮುಖ್ಯ ಅಂಶಗಳು ಸ್ಪಷ್ಟವಾಗುತ್ತದೆ. ಆದ್ದರಿಂದ ವರಾಹ ದೇವರ ವಚನವು ದೃಗ್ಗಣಿತವಾದಿಗಳಿಗೆ ಸಹಾಯಕವಾಗುವುದಿಲ್ಲವೆಂದು ತಿಳಿಯುತ್ತದೆ.

ತಿಥಿ ಪ್ರತ್ಯಕ್ಷವೆಂದು ಬಹಳ ಗದ್ದಲ ಎಬ್ಬಿಸಿರುವ ದೃಗ್ಗಣಿತವಾದಿಗಳು ಇದನ್ನು ತಿಳಿದೇ ತಮ್ಮ ಲೇಖನದಲ್ಲಿ ಧರಣಿ ದೇವಿಯರ ಪ್ರಶ್ನೆಯನ್ನು ಸಂಪೂರ್ಣವಾಗಿ ನಿರೂಪಿಸಿಲ್ಲ. ಪ್ರಶ್ನೆಯ ವಿವರವನ್ನು ಸಂಪೂರ್ಣವಾಗಿ ನಿರೂಪಿಸಿದರೆ, ಆ ಪ್ರಶ್ನೆಯಿಂದಲೇ "ತಿಥಿ ಪ್ರತ್ಯಕ್ಷ"ವೆಂಬ ತಮ್ಮ ವಾದವು ಬಿದ್ದು ಹೋಗುವುದೆಂದು ಮನಗೊಂಡು, ಆ ಭಾಗವನ್ನು ಮುಚ್ಚಿಟ್ಟು ಅದರ ಬದಲು "ಕಥಮೇತದ್ ವ್ರತಂ ಕಾರ್ಯಂ ದಿನತ್ರಯಂ" ಎಂದು ಪ್ರಶ್ನಿಸಿದ್ದಾಳೆಂದು ಲೇಖನದಲ್ಲಿ ತೋರಿಸಿದ್ದಾರೆ ಎಂದು ತಿಳಿಯಬಹುದಾಗಿದೆ. ಹಾಗಾದರೆ ವರಾಹದೇವರ ವಚನವನ್ನು ದೃಗ್ಗಣಿತಗಳ ವಾದಿಗಳು ತಮಗೆ ಸಹಾಯಕವಾಗಿದೆ ಎನ್ನುವುದನ್ನು ಯಾವ ರೀತಿ ಹೇಳುತ್ತಾರೆ ಎನ್ನುವುದನ್ನು ನೋಡೋಣ.

ತಮ್ಮ ವಾದವನ್ನು ಸಮರ್ಥಿಸಲು ದೃಕ್ಸಿದ್ಧಾಂತ ವಾದಿಗಳು ವರಾಹ ಪುರಾಣದ "ಸೃಷ್ಟಂ ಪುರಾಮಾಚಿವೇದಚಕ್ಷುಃ ಜ್ಯೋತಿಶ್ಶಾಸ್ತ್ರಂ ಮಯಾದ್ಭುತಂ | ಸತಃ ಸೂರ್ಯಶ್ಚ ಮುನಯಃ ಸ್ವಂ ಸ್ವಂ ಸಿದ್ಧಾಂತ ಮೂಚಿರೇ || ಯಸ್ಮಿನ್‌ದೇಶೇ ಯದಾ ಕಾಲೇ ಯದ್ಯತ್ ಸಿದ್ಧಾಂತಮಾರ್ಗತಃ | ಉದಯಾಸ್ತೌ ಗ್ರಹಾಣಾಂ ಸ್ಯುಃ ಗ್ರಹಣಂ ಚಂದ್ರ ಸೂರ್ಯಯೋಃ | ವಿಧೋರ್ವಿಲೋಕನಂ ವಾಪಿ ಭವೇತ್ ತತ್ಪಕ್ಷಮಾಶ್ರಿತಃ| ಇಷ್ಟಕಾಲೇ ಸ್ಫುಟೌಕೃತ್ವಾ ಸೂರ್ಯಚಂದ್ರೌ ಪ್ರಯತ್ನತಃ | ತಿಥಿಮಾಸಾದ್ಯ ಕುರ್ವೀತ ನಾನ್ಯಥಾ ತು ಕಥಂಚನ ||" ಎನ್ನುವ ವಚನವನ್ನು ಉದಾಹರಿಸಿ, ಪ್ರತ್ಯಕ್ಷದ ಆಧಾರದ ಮೇಲೆಯೇ ಗಣಿತ ಪದ್ಧತಿಗಳ ಪ್ರಾಮಾಣಿಕತೆಯು ನಿರ್ಧರಿಸಲ್ಪಡಬೇಕು. ಅದಕ್ಕಾಗಿ ಒಂದು ಸಿದ್ಧಾಂತವನ್ನು ಅವಲಂಬಿಸಿ, ಅದರ ಆಧಾರದ ಮೇಲೆ ತಿಥ್ಯಾದಿಗಳನ್ನು ನಮೂದಿಸಿದಾಗ, ಅದಕ್ಕೆ ಅನುಗುಣವಾಗಿ ಚಂದ್ರೋದಯ ಗ್ರಹಣಗಳಾದರೆ, ಆ ಪದ್ಧತಿಯು ಸರಿಯಾದುದೆಂದು ನಿರ್ಧರಿಸಬೇಕು. ಒಂದೇ ಗಣಿತವನ್ನು ದೀರ್ಘಕಾಲ ಆಧರಿಸಬಾರದು. ಕಾಲಕಾಲಕ್ಕೆ ಪ್ರತ್ಯಕ್ಷಕ್ಕೆ ಅನುಗುಣವಾಗಿ ಪರಿಷ್ಕರಿಸಿ ತಿಥಿಯನ್ನು ನಿರ್ಣಯಿಸಬೇಕು. "ಇಷ್ಟಕಾಲೇ ಸ್ಫುಟೌಕೃತ್ವಾ ಸೂರ್ಯಚಂದ್ರೌ" ಎನ್ನುವಲ್ಲಿನ

ಸ್ಫುಟದ ವಿಚಾರದಲ್ಲಿ ಭಾಸ್ಕರಾಚಾರ್ಯರು "ಸ್ಫುಟಕ್ರಿಯಾ ದೃಗ್ಗಣಿತೈಕ ಕೃದ್ಯಾ........" ಪ್ರಾಚೀನ ಗಣಿತವನ್ನು ಪ್ರತ್ಯಕ್ಷಕ್ಕೆ ಅನುಗುಣವಾಗಿ ಪರಿಷ್ಕರಿಸುವುದೇ ಸ್ಫುಟಕ್ರಿಯೆ" ಎಂದು ಹೇಳಿದ್ದಾರೆಂದು ತಿಳಿಸಿದ್ದಾರೆ. ವರಾಹ ಪುರಾಣದ ವಚನಕ್ಕೆ ಈ ರೀತಿಯಾಗಿ ಅರ್ಥ ಮಾಡಿದರೆ ತಿಥಿ ಸಾಧನೆಗೆ ಬೀಜ ಸಂಸ್ಕಾರ ಮಾಡಬಾರದೆಂದು ಹೇಳಿರುವ ಧರ್ಮಶಾಸ್ತ್ರಜ್ಞರೂ, ಖಗೋಳಶಾಸ್ತ್ರಜ್ಞರೂ, ತ್ರಿಕಾಲಜ್ಞಾನಿಗಳೂ ಆದ ಎಲ್ಲಾ ಋಷಿಗಳೂ ದೇವತೆಗಳೂ, ವರಾಹ ಪುರಾಣದ ವಚನವನ್ನು ತಿಳಿಯದ ಅಜ್ಞಾನಿಗಳೆಂದು ಹೇಳಬೇಕಾದೀತು. ಈ ಅಂಶ ಹಾಗಿರಲಿ. ವರಾಹ ವಾಕ್ಯದಲ್ಲಿ "ಯಸ್ಮಿನ್‌ದೇಶೇ ಯದಾ ಕಾಲೇ ಯದ್ಯತ್ ಸಿದ್ಧಾಂತ ಮಾರ್ಗತಃ" ಎನ್ನುವುದಕ್ಕೆ ಮೊದಲು "ಸೃಷ್ಟಂ ಪುರಾ ವೇದ ಚಕ್ಷುಃ ಜ್ಯೋತಿಶ್ಯಾಸ್ತ್ರಂ ಮಯಾದ್ಭುತಂ| ತತಃ ಸೂರ್ಯಶ್ಚ ಮುನಯಃ ಸ್ವಂಸ್ವಂ ಸಿದ್ಧಾಂತಮೂಚಿರೇ" ಎಂದಿರುವುದರಿಂದ, "ಯದ್ಯತ್ ಸಿದ್ಧಾಂತ" ಎನ್ನುವಲ್ಲಿ ಈ ಶ್ಲೋಕದಲ್ಲಿಯೇ ಉಕ್ತವಾಗಿರುವ ಋಷಿಗಳ ಮತ್ತು ದೇವತೆಗಳ ಸಿದ್ಧಾಂತವೆಂದೇ ಅರ್ಥವಾಗುತ್ತದೆಯೇ ಹೊರತು, ಅನ್ಯ ಕಲ್ಪಿತ ಸಿದ್ಧಾಂತವನ್ನಲ್ಲ ಎಂದು ತಿಳಿಯುತ್ತದೆ. ಆ ಸಿದ್ಧಾಂತಗಳಲ್ಲಿಯೇ ಕಾಲಕಾಲಕ್ಕೆ ಯೋಗ್ಯವಾದ ಬೀಜ ಸಂಸ್ಕಾರಗಳನ್ನು ಯಂತ್ರ ವೇಧಾದಿಗಳಿಂದ ತಿಳಿದು ಗ್ರಹಣಾದಿಗಳನ್ನು ಪರೀಕ್ಷಿಸಬೇಕೆಂದು ಋಷಿಗಳ ವಚನವೇ ಇದೆ. ಆದ್ದರಿಂದ ಕಾಲಕಾಲಕ್ಕೆ ಗಣಿತವನ್ನೇ ಬದಲಾಯಿಸುವ ಅಗತ್ಯವಿಲ್ಲ. ಈಗಿನವರಿಗೆ ಒಂದು ವೇಳೆ ಯೋಗ್ಯ ಬೀಜ ಸಂಸ್ಕಾರ ಗಳನ್ನು ಮಾಡಲು ತಿಳಿಯದಿದ್ದರೆ, ಋಷ್ಯಾದಿಗಳು ಹೇಳಿರುವ ಸಿದ್ಧಾಂತಗಳಲ್ಲಿರುವ ಗಣಿತವೇ ತ್ಯಾಜ್ಯವಾಗುವುದಿಲ್ಲ. ಹಾಗೆಯೇ ಅವರುಗಳು ತಿಥ್ಯಾದಿಗಳಿಗೆ ಬೀಜ ಸಂಸ್ಕಾರವನ್ನು ಮಾಡಬಾರದೆಂದು ನಿಷೇಧಿಸಿರುವುದು ಅನುಚಿತವೇನೂ ಆಗುವುದಿಲ್ಲ. ಆರ್ಷಪ್ರೋಕ್ತ ತಿಥ್ಯಾದಿ ಲಕ್ಷಣಗಳಿಗೆ ವಿರುದ್ಧವಾಗಿರುವುದನ್ನು ನಿರೂಪಿಸುವುದು ಅಗ್ರಾಹ್ಯವೇ ಆಗಿರುತ್ತದೆ. ಈ ವಿಷಯದಲ್ಲಿ ಬೃಹಸ್ಪತ್ಯಾಚಾರ್ಯರು "ಶಾಸ್ತ್ರಾರ್ಥಃ ಕ್ವಾಪಿ ನತ್ಯಾಜ್ಯಸ್ತೈಕ್ತೋऽತೀವ ಪ್ರಮಾದಕೃತ್ | ದೃಷ್ಟಾऽದೃಷ್ಟ ವಿರೋಧಶ್ಚ ಸರ್ವಸಂಪದ್ವಿನಾಶನಃ | ದೇವೈರತೋ ಮನುಷ್ಯೈಶ್ಚ ನ ತ್ಯಾಜ್ಯಃ ಶಾಸ್ತ್ರ ಚೋದಿತಃ||" ತಾತ್ಪರ್ಯ:- ಮನುಷ್ಯರಾಗಲೀ ದೇವತೆಗಳಾಗಲೀ ಶಾಸ್ತ್ರಾರ್ಥವನ್ನು ಎಂದಿಗೂ ತ್ಯಾಜ್ಯಮಾಡಬಾರದು. ಪ್ರತ್ಯಕ್ಷಾದಿ ಕಾರಣಗಳಿಂದ ಶಾಸ್ತ್ರವನ್ನು ಪರಿತ್ಯಾಗ ಮಾಡುವುದು ದೊಡ್ಡ ತಪ್ಪು, ಬಹಳ ಅನರ್ಥವಾಗುವುದು ಎಂದಿದ್ದಾರೆ.

ಮಾಂದ್ಯೈಕ ಕರ್ಮಸಂಸ್ಕೃತೌ ಚಂದ್ರಾರ್ಕೌ ತಿಥಿಭಯೋಗ ಕರಣಾನಾಂ| ಯೋಗ್ಯೌಸ್ಯಾತಾಂ ಗ್ರಹಣೇ ಚಂದ್ರೋಽನ್ಯೈಃ ಸಂಸ್ಕೃತೋ ಗ್ರಾಹ್ಯಃ || ಎನ್ನುವ ಶ್ಲೋಕದಲ್ಲಿ ಸೂರ್ಯ ಚಂದ್ರರಿಂದ ತಿಥಿ, ನಕ್ಷತ್ರ, ಯೋಗ, ಕರಣಗಳನ್ನು ಸಾಧಿಸಲು ಮಂದ ಸಂಸ್ಕಾರ ಮಾತ್ರ ಮಾಡಬೇಕು. ಇದಕ್ಕಿಂತ ಅಧಿಕ ಸಂಸ್ಕಾರಗಳನ್ನು ಗ್ರಹಣ ಗಣಿತದಲ್ಲಿ ಮಾಡತಕ್ಕದ್ದು ಎಂದು ಹೇಳಿದೆ. ಅಧಿಕ ಸಂಸ್ಕಾರಗಳೆಂದರೆ ಪಾತೋನ ಚಂದ್ರ ಸಂಸ್ಕಾರ, ಸ ತಿಥಿ ವ್ಯರ್ಕ ಚಂದ್ರೋಚ್ಚ ಸಂಸ್ಕಾರ, ವ್ಯರ್ಕೇಂದು ಫಲ ಸಂಸ್ಕಾರ ಇತ್ಯಾದಿಗಳು. ನವೀನ ದೃಕ್ಸಿದ್ಧಾಂತ ಪಂಚಾಂಗಗಳಲ್ಲಿ ಅಧಿಕ ಸಂಸ್ಕಾರಗಳನ್ನು ತಿಥ್ಯಾದಿಗಳಿಗೂ ಮಾಡುತ್ತಿದ್ದಾರೆ. ಇದಕ್ಕನುಸಾರವಾಗಿಯೇ "ಸ್ಫುಟಕ್ರಿಯಾ ದೃಗ್ಗಣಿತೈಕ್ಯಕೃದ್ಯಾ" ಇತ್ಯಾದಿ ವಚನಗಳಲ್ಲಿರುವ "ದೃಕ್ತುಲ್ಯ" ಪದಕ್ಕೆ ಅರ್ಥವನ್ನು ತಿಳಿಯಬೇಕು. ಶಾಸ್ತ್ರ ಪ್ರಸಿದ್ಧ ದೃಕ್ತುಲ್ಯ ಮಂದಾದಿ ಸ್ಫುಟವೆಂದರೆ ಸೂರ್ಯ ಚಂದ್ರರ ವಿಷಯದಲ್ಲಿ ಮಂದ ಸ್ಫುಟವೆನ್ನುವಷ್ಟೇ ಅರ್ಥ. ಮುಂದೆ ಅಕ್ಷಾಯನ ಲಂಬನಾದಿ ದೃಕ್ ಸಂಸ್ಕಾರಗಳನ್ನೆಲ್ಲಾ ಪ್ರತ್ಯೇಕ ಪ್ರಕರಣಗಳಲ್ಲಿ ಹೇಳಿರುವುದರಿಂದ, ಇಲ್ಲಿ ದೃಕ್ತುಲ್ಯವೆಂಬ ಪದವನ್ನು ಪಾರಿಭಾಷಿಕವಾಗಿಯೇ ಪ್ರಯೋಗಿಸಿದ್ದಾರೆಯೇ ಹೊರತು ಶಬ್ದಾರ್ಥಕ್ಕನುಸಾರಿಯಾಗಿಯಲ್ಲವೆನ್ನುವುದು ಚೆನ್ನಾಗಿ ತಿಳಿಯುತ್ತದೆ. ಆದ್ದರಿಂದ ದೃಕ್ತುಲ್ಯವೆನ್ನುವ ಪದವು ದೃಕ್ ಸಿದ್ಧಾಂತ ವಾದಿಗಳ ಲೇಖನದಲ್ಲಿ ಬರೆದ ಪ್ರಕಾರವಲ್ಲ. ಮೇಲೆ ಹೇಳಿದ ಎಲ್ಲಾ ಅಂಶಗಳಿಂದಲೂ ತಿಥ್ಯಾದಿಗಳಿಗೆ ಬೀಜ ಸಂಸ್ಕಾರವು ಯೋಗ್ಯವಲ್ಲವೆಂದೇ ಸಮರ್ಥಿತವಾಗುತ್ತದೆ. ಆದ್ದರಿಂದ ಮೊದಲು ತಿಳಿಸಿರುವ ಯಾವ ಋಷಿ, ಅಥವಾ ದೇವತಾ ಪ್ರೋಕ್ತ ಸಿದ್ಧಾಂತಗಳಲ್ಲಿ ಉಕ್ತವಾಗಿರುವ ಗಣಿತವನ್ನು ಯಂತ್ರ ವೇಧಾದಿಗಳಿಂದ ಸಿದ್ಧವಾದ ಉಚಿತ ಬೀಜ ಸಂಸ್ಕಾರದಿಂದ ಪರಿಷ್ಕರಿಸಿದಾಗ ಆ ದೇಶದಲ್ಲಿ ಗ್ರಹಣಾದಿಗಳೂ, ಚಂದ್ರನ ಉದಯವೂ, ಆಗುತ್ತದೋ, ಆ ಗಣಿತ ಮಾರ್ಗದಿಂದ ಕೇವಲ ಮಂದ ಸಂಸ್ಕಾರದಿಂದ ಇಷ್ಟಕಾಲದಲ್ಲಿ ಚಂದ್ರ ಸೂರ್ಯರ ಸ್ಫುಟಮಾಡಿ ಸಾಧಿಸಿದ ತಿಥಿಯು, ವರಾಹಪುರಾಣದಲ್ಲಿ ಉಕ್ತವಾದ ವಾಕ್ಯಗಳಿಗಾಗಲೀ, ಋಷಿ ಅಥವಾ ದೇವತಾ ಪ್ರೋಕ್ತ ವಚನಗಳಿಗಾಗಲೀ ವಿರೋಧವಾಗುವುದಿಲ್ಲ. ಆದ್ದರಿಂದ ವರಾಹ ಪುರಾಣದ ವಾಕ್ಯಗಳನ್ನು ಈ ರೀತಿಯೇ ಅರ್ಥ ಮಾಡಬೇಕು.

ದೃಕ್ಸಿದ್ಧಾಂತ ವಾದಿಗಳ ಇನ್ನೊಂದು ವಾದವು ಹೀಗಿದೆ:- "ಪ್ರಾಚೀನ ಗಣಿತ

ಪದ್ಧತಿ ಕಾಲಿಕ ಸಂಸ್ಕಾರವನ್ನು ಪಡೆಯದ ಕಾರಣ ಅಸಮರ್ಪಕವಾಗಿದೆ. ಆ ಕಾರಣದಿಂದಲೇ ಗಣಿತಪದ್ಧತಿಗಳು ಹಿಂದಿನಿಂದಲೂ ಕಾಲಕಾಲಕ್ಕೆ ಪರಿಷ್ಕರಿಸಲ್ಪಡುತ್ತಾ ಬಂದಿದೆ. ಸಾಕ್ಷಾತ್ ವರಾಹದೇವರು ರಚಿಸಿದ ಗಣಿತದ ಪದ್ಧತಿಯನ್ನು ಋಷಿ ಮುನಿಗಳು ಪರಿಷ್ಕರಿಸಿದ್ದಾರೆ. ಅದರಂತೆ ಅದು ವರೆವಿಗೆ ಪ್ರಚಲಿತವಿದ್ದ ಸೂರ್ಯ ಸಿದ್ಧಾಂತವನ್ನು ಆರ್ಯಭಟ ಲೌಕಿಕ ಉಪಕರಣಗಳಿಂದ ಸೂರ್ಯಚಂದ್ರರ ಗತಿಯನ್ನು ನಿರ್ಧರಿಸಿ ಪರಿಷ್ಕರಿಸಿದೆ. ಆಗ ಹಿಂದಿನ ಸಂಪ್ರದಾಯದಿಂದ ಸಿದ್ಧವಾದ ಗಣಿತವನ್ನು ಬಿಟ್ಟು ಹೊಸಗಣಿತ ಪದ್ಧತಿಯನ್ನು ಅನುಸರಿಸಲಾಯಿತು. ನೂರಾರು ವರ್ಷಗಳಿಂದ ಪರಿಷ್ಕರಿಸಲ್ಪಡದೇ ಇರುವುದರಿಂದ ಇಂದು ಆ ಗಣಿತವೂ ಅಸಮರ್ಪಕವಾಗಿದೆ. ಅಂದ ಮೇಲೆ ಅದನ್ನು ಬಿಟ್ಟು ಆಧುನಿಕ ಸೂಕ್ಷ್ಮ ಯಂತ್ರಗಳಿಂದ ನೋಡಿ, ಸೂರ್ಯಚಂದ್ರರ ಗತಿಯನ್ನು ನಿರ್ಧರಿಸಿ ತಯಾರಿಸಿದ ನವೀನ ದೃಗ್ಗಣಿತವನ್ನು ಅನುಸರಿಸುವುದರಲ್ಲಿ ತಪ್ಪೇನು?......... ಒಟ್ಟಿನಲ್ಲಿ ಏಕಾದಶಿ ಉಪವಾಸವನ್ನು ಆಧುನಿಕ ದೃಗ್ಗಣಿತಾನುಸಾರವಾಗಿ ಮಾಡುವುದೇ ಪ್ರಮಾಣ ಸಮ್ಮತ. ಆಚಾರ್ಯರಿಗೂ ಪ್ರಿಯ. ಇದರಿಂದ 'ಒಬ್ಬೊಬ್ಬರಿಗೊಂದು ಏಕಾದಶಿ' ಎಂದು ಇತರರು ನಮ್ಮನ್ನು ಹಾಸ್ಯ ಮಾಡುವುದೂ ತಪ್ಪುತ್ತದೆ". ಈ ವಾದವು ಋಷಿಗಳು ದೇವತೆಗಳು ರಚಿಸಿರುವ ಗ್ರಂಥಗಳಲ್ಲಿ ಹೇಳಿರುವುದನ್ನು ತಿಳಿಯದೇ ಮಾಡಿರುವ ವಾದವಾಗಿದೆ. ಯಂತ್ರ ವೇಧಾದಿಗಳಿಂದ ಕಾಲಕಾಲಕ್ಕೆ ಯೋಗ್ಯವಾದ ಬೀಜ ಸಂಸ್ಕಾರಗಳನ್ನು ತಿಳಿದು ಗ್ರಹಣಾದಿಗಳನ್ನು ಪರೀಕ್ಷಿಸಬೇಕೆಂದು, ಆ ಗ್ರಂಥಗಳಲ್ಲೇ ಹೇಳಿರುವುದರಿಂದ, ಅದನ್ನು ಮಾಡದೆ ಗಣಿತಗಳೇ ಅಸಮರ್ಪಕವೆಂದು ಹೇಳುವುದು ಹುರುಳಿಲ್ಲದ ಮಾತು. ಸಾಕ್ಷಾತ್ ವರಾಹ ದೇವರು ರಚಿಸಿದ ಗಣಿತ ಪದ್ಧತಿಗಳನ್ನು ಋಷಿಗಳು ಪರಿಷ್ಕರಿಸಿ ದ್ದಾರೆನ್ನುವುದು ಅಪ್ರಮಾಣವಾದ ಸಂಗತಿ. ಋಷಿಗಳು ಪ್ರತ್ಯೇಕ ಪ್ರತ್ಯೇಕವಾಗಿ ಸಿದ್ಧಾಂತಗಳನ್ನು ರಚಿಸಿರುವರು. ಇದು ವರಾಹ ವಾಕ್ಯದಲ್ಲಿನ "ಮುನಯಃ ಸ್ವಂಸ್ವಂ ಸಿದ್ಧಾಂತಮೂಚಿರೇ" ಎನ್ನುವುದರಿಂದ ತಿಳಿಯುತ್ತದೆ. ಆರ್ಯಭಟಾದಿಗಳು ತಮ್ಮ ತಮ್ಮ ಗ್ರಂಥಗಳಲ್ಲಿ ಹೇಳಿರುವ ಗಣಿತಗಳು ಪ್ರಾಚೀನ ಋಷಿದೇವಾದಿಗಳಿಂದ ಹೇಳಲ್ಪಟ್ಟ ಗ್ರಂಥಗಳ ಆಧಾರದ ಮೇಲೆ, ಅವುಗಳಿಗೆ ಅವಿರೋಧವಾಗಿರುವಂತೆ ರಚಿಸಿದವುಗಳಾಗಿರುತ್ತದೆ. ಹಿಂದಿನ ಖಗೋಳಜ್ಞರೆಲ್ಲರೂ ಋಷ್ಯಾದಿಗಳ ಗ್ರಂಥದಲ್ಲಿರುವಂತೆ ಬೀಜ ಸಂಸ್ಕಾರವನ್ನು ಗ್ರಹ ಗ್ರಹಣಾದಿಗಳ ಸ್ಫುಟಕ್ಕೂ, ಮಾಂದ

ಸಂಸ್ಕಾರವನ್ನು ಕರ್ಮಾರ್ಹ ತಿಥ್ಯಾದಿಗಳಿಗೂ ಮಾಡಬೇಕೆಂದು ಹೇಳಿರುವ ಕೆಲವು ವಚನಗಳನ್ನು ಹಿಂದೆ ಉದಾಹರಿಸಲಾಗಿದೆ. ನೂತನ ದೃಕ್ಸಿದ್ಧಾಂತ ಗಣಿತದಿಂದ ಗ್ರಹಣಾದಿಗಳ ಸ್ಫುಟವು ಯೋಗ್ಯವಾಗಿದ್ದರೂ, ಧರ್ಮಶಾಸ್ತ್ರ ಪ್ರವರ್ತಕರೂ ಖಗೋಳಶಾಸ್ತ್ರಜ್ಞರೂ, ಸಾತ್ವಿಕರೂ ತ್ರಿಕಾಲಜ್ಞಾನಿಗಳೂ ಆದ ವಸಿಷ್ಠ ಋಷ್ಯಾದಿಗಳ ವಚನಕ್ಕೆ ವಿರೋಧವಾದ ಬೀಜ ಸಂಸ್ಕಾರವನ್ನು ತಿಥ್ಯಾದಿಗಳಿಗೆ ಮಾಡುವುದರಿಂದ, ಆ ತಿಥ್ಯಾದಿಗಳು ಕರ್ಮಾರ್ಹವಾಗುವುದಿಲ್ಲ. ಒಟ್ಟಿನಲ್ಲಿ ಏಕಾದಶಿ ಉಪವಾಸವನ್ನು ಆಧುನಿಕ ದೃಗ್ಗಣಿತಾನುಸಾರಿಯಾಗಿ ಮಾಡುವುದು ಪ್ರಮಾಣ ಸಮ್ಮತ ಮತ್ತು ಆಚಾರ್ಯರಿಗೂ ಪ್ರಿಯವಾದುದೆಂದಿದ್ದಾರೆ. ಅದು ಪ್ರಮಾಣ ಸಮ್ಮತವಲ್ಲವೆನ್ನು ವುದನ್ನು ತೋರಿಸಿದುದಾಯಿತು. ಆಚಾರ್ಯರಿಗೆ ಪ್ರಿಯವಲ್ಲವೆನ್ನುವುದನ್ನು, ಆಚಾರ್ಯರ ಗ್ರಂಥಕ್ಕೆ ಅದು ವಿರೋಧವೆಂದು ನಿರೂಪಿಸುವಾಗ ಪ್ರದರ್ಶಿಸಲಾಗು ತ್ತದೆ.

ಒಬ್ಬರಿಗೊಂದೊಂದು ಏಕಾದಶಿ ಎಂದು ಇತರರು ಹಾಸ್ಯ ಮಾಡುವ ಅವಕಾಶ ತಪ್ಪುತ್ತದೆ ಎಂದು ದೃಕ್ಸಿದ್ಧಾಂತ ವಾದಿಗಳು ಹೇಳಿರುವುದರಿಂದ, ಅವರ ಗಣಿತದಿಂದ ಎಲ್ಲರಿಗೂ ಒಂದೇ ಏಕಾದಶಿ ಬರುತ್ತದೆ ಎಂದು ಹೇಳಿದಂತಾಯಿತು. ಹಾಗಾಗುವ ಪಕ್ಷದಲ್ಲಿ "ಬಹ್ವಾಗಮ ವಿರೋಧೇಷು..........." ಎಂದು ಆಚಾರ್ಯರು ಹೇಳುವ ಪ್ರಸಕ್ತಿಯೇ ಬರುತ್ತಿರಲಿಲ್ಲ. ಸರ್ವಜ್ಞ ಶಿಖಾಮಣಿಗಳಾದ ಆಚಾರ್ಯರಿಗೆ ವರಾಹ ವಾಕ್ಯ ತಿಳಿದಿರಲಿಲ್ಲವೆಂದು ಹೇಳುವಂತಿಲ್ಲ. ಅದರಂತೆಯೇ ಗ್ರಹಣಾದಿಗಳನ್ನು ನಿರ್ಣಯಿಸದಿರುವ ಗಣಿತಗಳನ್ನು ಕುರಿತು ಅವರು ಹೇಳಿರುವುದು ಎನ್ನುವಂತೆಯೂ ಇಲ್ಲ. ಆದ್ದರಿಂದ "ಬಹ್ವಾಗಮ ವಿರೋಧೇಷು........." ಎಂದು ಹೇಳಿರುವಲ್ಲಿ ಗ್ರಹಣಾದಿಗಳನ್ನು ನಿರ್ಣಯಿಸುವ ಆಗಮಗಳಲ್ಲಿ ವಿರೋಧ ಬಂದಾಗ ಎಂದೇ ತಿಳಿಯಬೇಕಾಗುತ್ತದೆ. ಪ್ರಾಚೀನ ಸಿದ್ಧಾಂತಗಳು, ಅದರ ಆಧಾರದ ಮೇಲೆ ರಚಿತವಾಗಿರುವ ನಂತರದ ಖಗೋಳಜ್ಞರ ಗ್ರಂಥಗಳೂ ಶ್ರೀಮದಾಚಾರ್ಯರ ಕಾಲದಲ್ಲಿದ್ದವು. ಸಿದ್ಧಾಂತಗಳಲ್ಲಿ ಪ್ರಭೇದವಿರುವುದರಿಂದ, ಅವುಗಳಲ್ಲಿ ಉಕ್ತವಾಗಿರುವ ಗಣಿತಾದಿ ಕ್ರಮಗಳಲ್ಲಿಯೂ ಪ್ರಭೇದಗಳಿವೆಯೆಂದು ತಿಳಿಯ ಬಹುದು. ಗಣಿತ ಕ್ರಮದಲ್ಲಿ ಪ್ರಭೇದವಿರುವುದರಿಂದ ತಿಥ್ಯಾದಿಗಳ ವಿಷಯದಲ್ಲಿ ವಿರೋಧ ಬರಲು ಅವಕಾಶವಿರುತ್ತದೆ. ಇಂತಹ ಆಗಮಗಳನ್ನು ಮನಸ್ಸಿನಲ್ಲಿಟ್ಟು

ಕೊಂಡೇ ಆಚಾರ್ಯರು "ಬಹ್ವಾಗಮ ವಿರೋಧೇಷು..........." ಎಂದು ಹೇಳಿದ್ದಾರೆಂದು ತಿಳಿಯಬಹುದಾಗಿದೆ. ದೃಗ್ಗಣಿತ ರೀತಿಯಲ್ಲೇ ಏಕಾದಶಿ ಉಪವಾಸ ಮಾಡಬೇಕೆಂದರೆ, ಅನ್ಯ ಆಗಮಗಳೇ ಇಲ್ಲದಂತಾಗಿ ಆಚಾರ್ಯರ ವಾಕ್ಯಕ್ಕೆ ಪ್ರಸಕ್ತಿಯೇ ಇಲ್ಲ. ಈ ವಿಚಾರದಲ್ಲಿ ದೃಕ್ಸಿದ್ಧಾಂತಿಗಳು ತಮ್ಮ ವಾದವನ್ನು ಮಂಡಿಸುವಾಗ ಪುನಃ ಪ್ರಾಚೀನ ಸಿದ್ಧಾಂತಗಳ ಹೆಸರನ್ನು ಹೇಳುತ್ತಾರೆ. ಇದರಿಂದ ಅವರ ವಾದವು ಅಸಂಬದ್ಧವೆಂದು ಚೆನ್ನಾಗಿ ತಿಳಿಯುತ್ತದೆ. ಒಬ್ಬರಿಗೊಂದೊಂದು ಏಕಾದಶಿಯನ್ನು ತಪ್ಪಿಸಲು, ಹಾಗೆಯೇ ಇತರರಿಂದ ಅಪಹಾಸ್ಯ ತಪ್ಪಿಸಿಕೊಳ್ಳಲು ಆಚಾರ್ಯರೇ ಹೇಳಿರುವ "ಬಹ್ವಾಗಮ ವಿರೋಧೇಷು ಬ್ರಾಹ್ಮಣೇಷು ವಿವಾದಿಷು| ಉಪೋಷ್ಯ ದ್ವಾದಶೀ ತತ್ರ...........|" ಎಂದು ಹೇಳಿರುವ ವಾಕ್ಯದಂತೆ ನಡೆಯಬೇಕೇ ಹೊರತು, ತ್ರಿಕಾಲಜ್ಞರಾದ ಎಲ್ಲಾ ಋಷಿಗಳೂ ದೇವತೆಗಳೂ ನಿಷೇಧಿಸಿರುವ ಬೀಜ ಸಂಸ್ಕಾರವನ್ನು ಮಾಡಿದ ಏಕಾದಶಿಯಂದು ಉಪವಾಸ ಮಾಡುವುದಲ್ಲ.

ಸೌರಮಾನದ ಪ್ರಕಾರ 365 $\frac{1}{4}$ ದಿನಗಳಿಗೆ ಒಂದು ವರ್ಷ. ಚಾಂದ್ರಮಾನದ ಪ್ರಕಾರ 354 ದಿನಗಳು. ಸಾವನ ವರ್ಷವೆಂದರೇ 360 ದಿನಗಳು. ಬೇರೆ ಬೇರೆ ಆಧಾರಗಳಿಗನುಸಾರವಾಗಿ ವರ್ಷವೆಂದರೆ ಇಷ್ಟಿಷ್ಟು ದಿನಗಳೆಂದು ಜ್ಯೋತಿಶ್ಶಾಸ್ತ್ರದಲ್ಲಿ ನಿರ್ಣಯಿಸಿರುತ್ತಾರೆ. ಸೂರ್ಯನ ಗತಿಯನ್ನು ಅನುಸರಿಸಿ ಸೌರಮಾನವೂ, ಚಂದ್ರನ ಗತಿಯನ್ನು ಅನುಸರಿಸಿ ಚಾಂದ್ರಮಾನವೂ ಹೇಳಲ್ಪಟ್ಟಿದೆ. ಧರ್ಮಶಾಸ್ತ್ರಜ್ಞರು "ಸೌರೋ ಮಾಸೋ ವಿವಾಹಾದೌ ಯಜ್ಞಾದೌ ಸಾವನಃ ಸ್ಮೃತಃ | ಆಬ್ದಿಕೇ ಪಿತೃಕಾರ್ಯೇ ಚ ಚಂದ್ರೋಮಾಸಃ ಪ್ರಶಸ್ಯತೇ" ಎಂದು ಹೇಳಿದ್ದಾರೆ. ಈ ವಚನದ ಪ್ರಕಾರ ವಿವಾಹ, ಉಪನಯನ, ಪೂಜಾ ವ್ರತ ನಿಯಮ ಯಾತ್ರಾದಿಗಳು ಸೌರಮಾಸದಲ್ಲಿಯೂ, ಯಜ್ಞ ದಾನ ಹೋಮಾದಿಗಳು ಸಾವನ ರೀತಿಯಲ್ಲಿಯೂ, ಪಿತೃ ಕಾರ್ಯಾದಿಗಳಿಗೆ ಚಾಂದ್ರ ಮಾಸವನ್ನೂ ಹೇಳಿದ್ದಾರೆ. ಅದರಂತೆಯೇ ಖಗೋಳಶಾಸ್ತ್ರಜ್ಞರೂ ಧರ್ಮಶಾಸ್ತ್ರಜ್ಞರೂ ಆದ ಋಷಿ ದೇವತಾದಿಗಳು ಧರ್ಮಶಾಸ್ತ್ರದಲ್ಲಿ ಉಕ್ತವಾದ ಕರ್ಮಾರ್ಹತಿಥಿಗಳಿಗೆ ಮಂದ ಸಂಸ್ಕಾರ ಮಾತ್ರವನ್ನೂ, ಉದಯಾಸ್ತಗಳಿಗೆ ಇನ್ನೂ ಹೆಚ್ಚಿನ ಸಂಸ್ಕಾರವನ್ನೂ, ಅದಕ್ಕಿಂತ ಅಧಿಕ ಸಂಸ್ಕಾರವನ್ನು ಗ್ರಹಣಾದಿಗಳಿಗೆ ಮಾಡಬೇಕೆಂದು ತಮ್ಮ ತಮ್ಮ ಗ್ರಂಥಗಳಲ್ಲಿ ಹೇಳಿರುವರು. ಹೀಗಿರುವಾಗ ದೃಕ್ಸಿದ್ಧಾಂತವಾದಿಗಳು ಹೇಳುವ "ಒಂದು

ಕಾಲದಲ್ಲಿ ಪರಾಶರ ಸಿದ್ಧಾಂತ, ವಸಿಷ್ಠ ಸಿದ್ಧಾಂತ - ಹೀಗೆ ಅನೇಕ ಗಣಿತ ಸಿದ್ಧಾಂತಗಳು ದೃಗ್ಗಣಿತಕ್ಕೆ ಅನುಗುಣವಾಗಿದ್ದವು. ಸೂರ್ಯ ಸಿದ್ಧಾಂತವೂ ಪ್ರಾರಂಭದಲ್ಲಿ ದೃಗ್ಗಣಿತವಾಗಿತ್ತು. ದೃಗ್ಗಣಿತವು ಅಗ್ರಾಹ್ಯವಾಗಿದ್ದರೆ ಸೂರ್ಯ ಸಿದ್ಧಾಂತವು ದೃಗ್ಗಣಿತವಾಗಿದ್ದ ಕಾಲದಲ್ಲಿ, ಅದನ್ನಾದರೂ ನಿತ್ಯಕರ್ಮಾನುಷ್ಠಾನಕ್ಕೆ ಹೇಗೆ ಅನುಸರಿಸುತ್ತಿದ್ದರು? ಹಾಗೆಯೇ ಆರ್ಯ ಗಣಿತವೂ ದೃಗ್ಗಣಿತವಾಗಿತ್ತು". ಇತ್ಯಾದಿ ವಾಕ್ಯಗಳು ಪ್ರಾಚೀನ ಸಿದ್ಧಾಂತಗಳ ಅರಿವಿಲ್ಲದೆ ಹೇಳಿದ ಮಾತುಗಳಾಗಿವೆ ಎನ್ನುವುದು ಸುಸ್ಪಷ್ಟವಾಗಿದೆ. ಅಂದರೆ ಇವರ ಅಭಿಪ್ರಾಯದಲ್ಲಿ ಒಂದು ಕಾಲದಲ್ಲಿ ಆ ಸಿದ್ಧಾಂತಗಳಲ್ಲಿ ಹೇಳಿದ ಗಣಿತದ ಪ್ರಕಾರವೇ ಗ್ರಹಣಾದಿಗಳಾಗುತ್ತಿತ್ತು. ಆದ್ದರಿಂದ ಅವೂ ದೃಗ್ಗಣಿತವೇ ಎಂದು ಹೇಳಿದಂತಾಗುತ್ತದೆ. ವಸಿಷ್ಠಾದಿಗಳು ತಮ್ಮ ಸಿದ್ಧಾಂತಗಳಲ್ಲಿ ಗ್ರಹಣಾದಿಗಳಿಗೆ ಉಪಯುಕ್ತವಾದ ಸಂಸ್ಕಾರಗಳನ್ನು ತಿಥ್ಯಾದಿಗಳಿಗೆ ಮಾಡುತ್ತಿರಲಿಲ್ಲವೆಂದು ಅವರ ವಚನಗಳಿಂದಲೇ ಸ್ಪಷ್ಟವಾಗುತ್ತಿರುವಾಗ, ಒಂದು ವೇಳೆ ಇವರು ಹೇಳುವಂತೆ ಅದು ದೃಗ್ಗಣಿತವೆಂದು ವಾದಕ್ಕಾಗಿ ಒಪ್ಪಿದರೂ, ಅವರುಗಳು ತಿಥ್ಯಾದಿ ಗಣಿತದಲ್ಲಿ ಮಾಂದ ಸಂಸ್ಕಾರವ ನ್ನುಳಿದು, ಇತರ ಅಧಿಕ ಸಂಸ್ಕಾರಗಳನ್ನು ಮಾಡದೆ ಇರುವ ಪ್ರಯುಕ್ತ, ಇವರ ಈಗಿನ ನೂತನ ದೃಕ್ಸಿದ್ಧಾಂತದ ಪ್ರಕಾರ ತಿಥ್ಯಾದಿಗಳಿಗೆ ಮಾಡುವ ಅಧಿಕ ಸಂಸ್ಕಾರಗಳು ತಪ್ಪು ಅಥವಾ ಅಂತಹ ತಿಥಿಗಳು ಧರ್ಮಶಾಸ್ತ್ರೋಕ್ತ ಕರ್ಮಗಳಿಗೆ ಅರ್ಹವಾದುದಲ್ಲ ವೆಂದು ಇವರೇ ಒಪ್ಪಿದಂತಾಗುತ್ತದೆ.

ದೃಕ್ಸಿದ್ಧಾಂತವಾದಿಗಳ ಲೇಖನದಲ್ಲಿ (ಶ್ರೀ ಪುತ್ತಿಗೆ ಮಠದಿಂದ ಮುದ್ರಿತವಾದ ಉಡುಪಿ ಶ್ರೀಕೃಷ್ಣ ಮುಖ್ಯಪ್ರಾಣ ಪಂಚಾಂಗದಲ್ಲಿ), "ಶ್ರೀ ಸತ್ಯಧ್ಯಾನ ತೀರ್ಥರೂ ದೃಷ್ಟ ಫಲಿತಗಳಾದ ಕರ್ಮಗಳಿಗೆ ದೃಗ್ಗಣಿತವನ್ನೇ ಅನುಸರಿಸಬೇಕೆಂದು ತಮ್ಮ ಪಂಚಾಂಗ ನಿರ್ಣಯದಲ್ಲಿ ಹೇಳಿದ್ದಾರೆ. ಮಾತ್ರವಲ್ಲ ಈ ವ್ರತವನ್ನು ದೃಗ್ಗಣಿತಕ್ಕೆ ವಿರುದ್ಧವಾಗಿ ಆಚರಿಸುವುದು ಭಗವದ್‌ದ್ರೋಹ ಬಗೆದಂತೆ . ಘೋರವಾದ ಬ್ರಹ್ಮ ಹತ್ಯಾದಿ ಪಾತಕಗಳಿಗಾದರೂ ಪ್ರಾಯಶ್ಚಿತ್ತವಿರಬಹುದು. ಆದರೆ ಈ ಭಗವದ್ ದ್ರೋಹಕ್ಕೆ ಪ್ರಾಯಶ್ಚಿತ್ತವೇ ಇಲ್ಲ. ಹೀಗೆಂದು ತಮಗೆ ಪ್ರಿಯಳಾದ ಭೂದೇವಿಗೆ ಶ್ರೀವರಾಹ ದೇವರು ಉಪದೇಶಿಸಿದ್ದಾರೆ." ಎಂದು ಉಕ್ತವಾಗಿದೆ. ಈ ಪಂಚಾಂಗ ನಿರ್ಣಯ ವಿಷಯದಲ್ಲಿ ಶ್ರೀಮದುತ್ತರಾದಿ ಮಠದಿಂದ ಗ್ರಂಥಕರ್ತರೊಬ್ಬರಿಗೆ ಬರೆದ

ಪತ್ರದಲ್ಲಿ ಈ ರೀತಿಯಾಗಿ ನಿರೂಪಿತವಾಗಿದೆ. "ಶ್ರೀ 108 ಶ್ರೀಮದುತ್ತರಾದಿ ಮಠಾಧೀಶ ಶ್ರೀಸತ್ಯಧ್ಯಾನ ತೀರ್ಥ ಸ್ವಾಮಿಗಳ ಸದಭಿಪ್ರಾಯವು. ಪಂಚಾಂಗ ವಿಷಯಕವಾದ ನಿರ್ಣಯವನ್ನು ತಿಳಿಯಲಪೇಕ್ಷಿಸುವವರಿಗೆ ನಾವು ತಿಳಿಸುವುದೇ ನೆಂದರೆ:- ನಾವು ಈ ವಿಷಯವಾಗಿ ಸಭೆ ಮಾಡಿಸಿ ಮೈಸೂರು, ತಂಜಾವರ, ಅನಂತ ಶಯನ ಮೊದಲಾದ ಕಡೆಗಳಿಂದ ಮೂಲ ಗ್ರಂಥಗಳನ್ನು ತರಿಸಿ, ಆ ಮೇಲೆ ಗಣಿತಜ್ಞರೂ, ಧರ್ಮಶಾಸ್ತ್ರಜ್ಞರೂ, ಆದ ವಿಧ್ವಾಂಸರೆದುರಿಗೆ ಆ ಮೂಲಗ್ರಂಥಗಳನ್ನು ಚೆನ್ನಾಗಿ ವಿಮರ್ಶಿಸಿ ಧರ್ಮಕಾರ್ಯಗಳನ್ನು ದೃಷ್ಟಾದೃಷ್ಟವೆಂದು ವಿಭಾಗಿಸಿ, ದೃಷ್ಟ ಫಲಕಗಳಾದ (ಗ್ರಹಣಾದಿ ನಿಮಿತ್ತಕ) ಕರ್ಮಗಳನ್ನು ದೃಕ್ಪಂಚಾಂಗದಂತೆಯೂ, ಅದೃಷ್ಟ ಫಲಕಗಳಿಂದ (ಶ್ರಾದ್ಧಾದಿ) ಕರ್ಮಗಳನ್ನು ಸೂರ್ಯಸಿದ್ಧಾಂತಾನುಸಾರಿ ಪಂಚಾಂಗದಂತೆಯೂ ಆಚರಿಸಬೇಕೆಂದು ನಿರ್ಣಯಿಸಿ, ಅದರಂತೆ ಗ್ರಂಥವನ್ನು ಸಹ ರಚಿಸಿ ಪ್ರಕಟಿಸಿರುವೆವು. ಈ ಗ್ರಂಥವನ್ನು ಅವಲೋಕಿಸಿದರೆ ಪಂಚಾಂಗ ಸ್ವೀಕರಿಸುವ ವಿಷಯದಲ್ಲುಂಟಾಗುವ ಸಂದೇಹಗಳೆಲ್ಲವೂ ದೂರವಾಗುವುವು". ಈ ನಿರ್ಧಾರದ ಪ್ರಕಾರ ಉತ್ತರಾದಿ ಮಠದ ಪಂಚಾಂಗದಲ್ಲಿ ಏಕಾದಶಿ ತಿಥಿಯನ್ನು ಸೂರ್ಯ ಸಿದ್ಧಾಂತದಂತೆ ಸಾಧಿಸುತ್ತಿದ್ದಾರೆಯೇ ಹೊರತು ದೃಗ್ಗಣಿತ ರೀತಿಯಲ್ಲಲ್ಲ. ಅಂದರೆ ಏಕಾದಶಿ ತಿಥಿಯನ್ನು ಅದೃಷ್ಟಫಲಕವೆಂದು ಪರಿಗಣಿಸಿದ್ದಾರೆ. ಅದನ್ನು ಇವರು ತಮ್ಮ ಲೇಖನದಲ್ಲಿ ದೃಷ್ಟ ಫಲಕವೆಂದು ತೀರ್ಮಾನಿಸಿರುವರೆಂದು ತಿಳಿಸಿ, ಭಯಂಕರವಾದ ಪರಿಣಾಮ ಉಳ್ಳವೆಂದು ಹೆದರಿಸಿಯೂ ಇದ್ದಾರೆ. ತಿಥಿಯು ಹೇಗೆ ಪ್ರತ್ಯಕ್ಷ ಸಿದ್ಧವಲ್ಲವೆನ್ನುವುದನ್ನು ಹಿಂದೆಯೇ ತಿಳಿಸಲಾಗಿದೆ. ಅದು ಪ್ರತ್ಯಕ್ಷ ಸಿದ್ಧವಲ್ಲ ವೆನ್ನುವುದು ಎಲ್ಲರ ಅನುಭವಕ್ಕೂ ಬಂದಿರುವ ವಿಷಯವೇ. ತಿಥಿಯನ್ನು ಆಗಮ ಗಳಿಂದ ಮಾತ್ರ ಅವುಗಳಲ್ಲಿ ಹೇಳಿದ ಗಣಿತ ಕ್ರಮದಿಂದ ತಿಳಿಯಬಹುದು. ಹಾಗಿ ದ್ದರೂ ಅದನ್ನು ದೃಷ್ಟ ಫಲಕಕ್ಕೆ ಸೇರಿಸಿ, ಗ್ರಹಣದಂತೆ ಪ್ರತ್ಯಕ್ಷ ಸಿದ್ಧವೆಂದು ಅಪಲಾಪಿಸಿದ್ದಾರೆ. ಇವರು ಹೆದರಿಸುವುದನ್ನು ನೋಡಿದರೆ ಪ್ರಾಯಶಃ ವಿದ್ಧೈಕಾದಶಿ ಉಪವಾಸಕ್ಕೆ ಹೇಳಿರುವ ಸಂತಾನ ಸಂಪತ್ತುಗಳ ನಾಶವನ್ನು ಪ್ರತ್ಯಕ್ಷ ಸಿದ್ಧವೆಂದೇ ತಿಳಿದಂತಿದೆ. ಆದರೆ ಏಕಾದಶಿ ಭೋಜನ ಮಾಡುವವರು, ವಿದ್ಧೈಕಾದಶಿ ಉಪವಾಸ ಮಾಡುವವರು ಸಂತಾನವಂತರೂ ಶ್ರೀಮಂತರೂ ಆಗಿರುವುದು ಕಂಡು ಬರುತ್ತದೆ. ವಿರುದ್ಧವಾಗಿ ಶುದ್ಧ ಏಕಾದಶಿ ಉಪವಾಸ ಮಾಡುವವರು ನಿರ್ಧನರಾಗಿರುವುದೂ

ಕಂಡು ಬಂದಿದೆ. ಕರ್ಮಗಳ ಫಲಗಳನ್ನು ಶಾಸ್ತ್ರಗಳಿಂದಲೇ ತಿಳಿಯಬೇಕು. ಪ್ರತ್ಯಕ್ಷವಾಗಿ ತೋರುವ ಗ್ರಹಣಾದಿಗಳು ದೃಷ್ಟವೆಂದೂ, ಅಪ್ರತ್ಯಕ್ಷವಾಗಿರುವ ಏಕಾದಶ್ಯಾದಿ ತಿಥಿಗಳು ಅದೃಷ್ಟಗಳೆಂದೂ, ಹಾಗೆಯೇ ಆಯಾ ಕರ್ಮಗಳ ಫಲಗಳು ದೃಷ್ಟಾದೃಷ್ಟ ಶಬ್ದಗಳಿಂದಲೇ ಶಾಸ್ತ್ರತಃ ವಿಶ್ಲೇಷಿಸಲ್ಪಡುತ್ತವೆ.

ದೃಕ್ಸಿದ್ಧಾಂತ ವಾದಿಗಳು ಶ್ಲಾಘಿಸುವ, ಹಾಗೆಯೇ ಪ್ರತ್ಯಕ್ಷ ಪ್ರಮಾಣವನ್ನೇ ಮುಖ್ಯವಾಗಿಟ್ಟುಕೊಂಡಿರುವ ನವೀನ ದೃಕ್ ಪಕ್ಷದಲ್ಲಿಯೂ ಚೈತ್ರ, ರೈವತಗಳೆಂಬ ಎರಡು ಅವಾಂತರ ಪಕ್ಷಗಳಿದ್ದು ಅವೆರಡರಲ್ಲಿ ಸಾಧಿಸಲಾಗಿರುವ ಸಂಕ್ರಾಂತಿಗಳಲ್ಲಿ 3-4ದಿನಗಳ ವ್ಯತ್ಯಾಸವೂ, ಪ್ರತಿ ನಿತ್ಯದ ಪಂಚಾಂಗದಲ್ಲಿಯೂ ಅನೇಕ ತರದ ವ್ಯತ್ಯಾಸಗಳೂ ಉಂಟಾಗುತ್ತಿವೆ. ಇದರಿಂದ ನೂತನ ದೃಕ್ಸಿದ್ಧಾಂತ ಶಾಸ್ತ್ರವೂ ನಿರ್ವಿವಾದ ಶಾಸ್ತ್ರವಲ್ಲವೆಂದು ಸಿದ್ಧವಾಗುತ್ತದೆ.

ನವೀನ ದೃಗ್ಗಣಿತದಲ್ಲಿ ಎಂಟು ಘಳಿಗೆ ವೃದ್ಧಿಯೂ, ಹತ್ತು ಘಳಿಗೆ ಕ್ಷಯವೂ ಬರುವುದನ್ನು ಸಮರ್ಥಿಸಲು, ಶ್ರೀವಾದಿರಾಜರು ಏಕಾದಶಿ ನಿರ್ಣಯದಲ್ಲಿ ಹೇಳಿರುವ ವಚನವನ್ನು ವಿಪರೀತವಾಗಿ ಕಲ್ಪಿಸಿದ್ದಾರೆ. "ಏಕ ದ್ವಿತ್ರ್ಯಾತ್ಮಿಕಾ ವೃದ್ಧಿಃ ಸಮವೃದ್ಧಿಃ" ಅಂದರೆ ಒಂದು, ಎರಡು, ಮೂರು ಘಳಿಗೆಗಳ ವೃದ್ಧಿಯು ಸಮವೃದ್ಧಿ ಎಂದೂ, "ಷಟ್ ಪಂಚ ಘಟಿಕಾವೃದ್ಧಿರತಿವೃದ್ಧಿರಿಹೋಚ್ಯತೇ" ಅಂದರೆ ಆರು, ಐದು ಘಳಿಗೆಗಳ ವೃದ್ಧಿಯು ಅತಿವೃದ್ಧಿಯೆಂದೂ, ನಿರ್ದಿಷ್ಟವಾಗಿ ಇಷ್ಟಿಷ್ಟೇ ಎಂದು ತಮ್ಮ ಏಕಾದಶಿ ನಿರ್ಣಯ ಗ್ರಂಥದಲ್ಲಿ ತಿಳಿಸಿದ್ದಾರೆ. ಇಷ್ಟು ಸ್ಪಷ್ಟವಾಗಿ ಬೇರೆ ರೀತಿ ವ್ಯಾಖ್ಯಾನ ಮಾಡಲು ಬಾರದಿರುವಂತೆ ತಿಳಿಸಿದ್ದಾರೆ."ಅತಿವೃದ್ಧಾವಷ್ಟಯುಗಂ" ಎನ್ನುವಲ್ಲಿ ಅತಿವೃದ್ಧಿ ಇರುವಾಗ, ಅಷ್ಟಯುಗಂ = ಹದಿನಾರು ಲಿಪ್ತಿಗಳು ವೇಧವೆಂದು ತಿಳಿಸಿದ್ದಾರೆ. ಹಾಗಿದ್ದರೂ ಇವರ ಲೇಖನದಲ್ಲಿ "ಅತಿವೃದ್ಧಿ ಅಷ್ಟಯುಗಂ" ಎನ್ನುವಲ್ಲಿ 'ಅತಿವೃದ್ಧಿ' ಪದಕ್ಕೆ 'ಅತಿಶಯಿತ ವೃದ್ಧಿ' ಎಂದು ವಿಪರೀತಾರ್ಥವನ್ನು ಕಲ್ಪಿಸಿರುವುದು ಸೋಜಿಗದ ಸಂಗತಿಯಾಗಿದೆ. "ವೃದ್ಧಿಕ್ಷಯೌ ಸ್ತಃ ಪರಮೌ ತಿಥೌ ಸದಾ ವ್ಯರ್ಥಾರಸಾ ಸಾಂಘ್ರಿರಸಾಶ್ಚ ನಾಡಿಕಾ" ಎಂದು ಕಾಳಿದಾಸನು ಹೇಳಿರುವನು. ಇದರ ತಾತ್ಪರ್ಯ:- ಯಾವಾಗಲೂ ತಿಥಿಯ ಪರಮ ವೃದ್ಧಿಯು (ಅಲ್ಪಾಂಶವನ್ನು ಬಿಟ್ಟು) $5^{1}/_{2}$ ಘಳಿಗೆಗಳು ಮತ್ತು ಕ್ಷಯವು $6^{1}/4$ ಘಳಿಗೆಗಳು. ಪೂರ್ಣಾಂಕದಲ್ಲಿ ವೃದ್ಧಿಯನ್ನು ಪರಿಗಣಿಸಿದಾಗ 5 ಅಥವಾ 6 ಘಳಿಗೆ ಆಗುತ್ತದೆ. ಹೀಗೆ ಪ್ರಾಚೀನರ ವಚನವೂ ಇದೆ. "ಅತಿವೃದ್ಧಿ

ಪಕ್ಷದಲ್ಲಿನ ಆರು, ಐದು ಘಳಿಗೆಗಳು'' ಎಂದು ಹೇಳಿರುವ ಶ್ರೀ ವಾದಿರಾಜರ ವಚನವು, ಪ್ರಾಚೀನರ ವಚನವೂ ಏಕರೀತಿಯಾಗಿಯೇ ಇವೆ. ಈ ವಿಚಾರದಲ್ಲಿ ಇನ್ನೂ ಅನೇಕ ವಚನಗಳಿವೆ. ಇದಕ್ಕೆ ವಿರುದ್ಧವಾಗಿ ನವೀನ ದೃಕ್ಸಿದ್ಧಾಂತದ ಪ್ರಕಾರ ಸಾಧಿಸಿದ ತಿಥಿಯು 8 ಘಳಿಗೆ ವೃದ್ಧಿ, 10 ಘಳಿಗೆ ಕ್ಷಯವಿರುವುದರಿಂದ, ಅವುಗಳು ಕರ್ಮಾರ್ಹ ತಿಥಿಗಳಿಗೆ ಅಗ್ರಾಹ್ಯವೇ ಆಗಿದೆ.

ಸಂಕ್ರಾಂತಿ ವಿಷಯದಲ್ಲಿ ರಾಶಿ ಸಂಕ್ರಾಂತಿ ಮತ್ತು ಅಯನ ಸಂಕ್ರಾಂತಿ ಎನ್ನುವ ಎರಡು ಪ್ರಕಾರದ ಸಂಕ್ರಮಣಗಳು ಧರ್ಮಶಾಸ್ತ್ರಗಳಲ್ಲಿ ಉಕ್ತವಾಗಿವೆ. ಸೂರ್ಯನು ಚಲನೆಯಲ್ಲಿ (ಸಾಯನ ರೀತಿಯಲ್ಲಿ) ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಈಗ ಸುಮಾರು 23 ದಿನಗಳ ಮುಂಚಿತವಾಗಿ ಪ್ರವೇಶಿಸುವುದನ್ನು ಮೇಷಾಯನ, ವೃಷಾಯನ ಇತ್ಯಾದಿ ಹೆಸರುಗಳಿಂದಲೂ, ನಿರಯವ ರೀತಿಯಿಂದ ಮೇಷ ಸಂಕ್ರಮಣ, ವೃಷಭ ಸಂಕ್ರಮಣ ಇತ್ಯಾದಿ ಹೆಸರುಗಳಿಂದಲೂ, ಪಂಚಾಂಗಗಳಲ್ಲಿ ನಮೂದಿಸುತ್ತಾರೆ. ದೃಕ್ಸಿದ್ಧಾಂತ ವಾದಿಗಳಲ್ಲಿ ಏಕಾದಶಿಯನ್ನು ದೃಗ್ಗಣಿತ ಪ್ರಕಾರವೇ ಆಚರಿಸಬೇಕೆನ್ನುವ ಕೆಲವರು, ಸಂಕ್ರಾಂತಿಯನ್ನು (ನಿರಯನ) ರಾಶಿ ಸಂಕ್ರಾಂತಿಯಂದೇ ಆಚರಿಸಬೇಕೆನ್ನುತ್ತಾರೆ. ಧರ್ಮಶಾಸ್ತ್ರದಲ್ಲಿಯೇ ಹೇಳಿರುವುದರಿಂದ ಅದು ತಪ್ಪಲ್ಲವೆನ್ನುತ್ತಾರೆ. ಧರ್ಮಶಾಸ್ತ್ರ ಪ್ರವರ್ತಕರಾದ ವಸಿಷ್ಠಾದಿ ಋಷಿಗಳೇ ಬೀಜ ಸಂಸ್ಕಾರ ರಹಿತವಾದ ತಿಥಿಯೇ ಕರ್ಮಾರ್ಹವಾದುದೆಂದು ಹೇಳುವಾಗ, ಇವರುಗಳು ದೃಗ್ಗಣಿತ ರೀತಿಯಿಂದಲೇ ಏಕಾದಶಿಯನ್ನು ಆಚರಿಸಬೇಕೆಂದು ಹೇಳುವುದು ಎಷ್ಟು ಅಸಮಂಜಸವಾಗಿದೆ ಎನ್ನುವುದನ್ನು ತಿಳಿಯಬಹುದಾಗಿದೆ. ಇನ್ನು ಕೆಲವರು ಸಂಕ್ರಾಂತಿಯನ್ನು ಸಾಯನ ಸಂಕ್ರಮಣಗಳ ದಿನವೇ ಆಚರಿಸಬೇಕೆಂದು ಹೇಳುತ್ತಾರೆ. ಇವರು ಹೇಳುವುದು ಆರ್ಷಪ್ರೋಕ್ತ ವಚನಗಳಿಗೆ ವಿರೋಧಿಯಾಗಿರುವುದು ಮಾತ್ರವಲ್ಲದೆ, ಶಿಷ್ಟರ ಆಚರಣೆಯಿಂದಲೂ ಅದು ತಪ್ಪು ಎಂದು ತಿಳಿಯುತ್ತದೆ. ಶ್ರೀಮದಾಚಾರ್ಯರ ಅವತಾರ ಕಾಲ ಕ್ರಿ.ಶ. 1238 ಎಂದು ಹೇಳಲಾಗಿದೆ. ಶ್ರೀ ಮದಾಚಾರ್ಯರ ಕಾಲದಲ್ಲಿ ಅಯನಾಂಶವು 11°-45'-30'' ಇರುವುದರಿಂದ ಸಾಯನ-ನಿರಯನ ಸಂಕ್ರಮಣಗಳಿಗೆ 12 ದಿನ ವ್ಯತ್ಯಾಸವಿತ್ತೆಂದು ತಿಳಿದು ಬರುತ್ತದೆ. ಇಂದು (1993ನೇ ಇಸವಿ) ಅಯನಾಂಶವು 22°-18'-22'' ಇರುವುದರಿಂದ, ಸಾಯನ-ನಿರಯನ ಸಂಕ್ರಮಣಗಳಿಗೆ 23 ದಿನ

ವ್ಯತ್ಯಾಸವಿರುತ್ತದೆ. ಸಾಯನ ಸಂಕ್ರಮಣವನ್ನು ಆಚರಿಸುವುದೇ ಯಥಾರ್ಥ ಮಾರ್ಗವಾಗಿದ್ದರೆ, ಶ್ರೀಮದಾಚಾರ್ಯರು ಹಾಗೆಯೇ ಆಚರಿಸಿ, ಶಿಷ್ಯರಿಗೆ ಬೋಧಿಸಿ, ಆದೇಶವಿತ್ತು ಆ ಸಂಪ್ರದಾಯವನ್ನು ತರುತ್ತಿದ್ದರು. ಆ ಸಂಪ್ರದಾಯ ಬಾರದೆ ಇರುವುದರಿಂದಲೂ, ನಿರಯನ ಸಂಕ್ರಮಣ ಆಚರಿಸಿರುವುದು ಸಂಪ್ರದಾಯದಲ್ಲಿ ರುವುದರಿಂದಲೂ ದೃಗ್ಗಣಿತ ರೀತಿಯ ಆಚರಣೆಯು ಧರ್ಮಶಾಸ್ತ್ರೋಕ್ತ ಕರ್ಮಾಚರಣೆಯಲ್ಲಿ ಅರ್ಹವಲ್ಲವೆಂದು ತಿಳಿಯುತ್ತದೆ. ಗ್ರಹಣದ ವಿಷಯವಾದರೋ, ಅದು ಬೇರೆ ರೀತಿಯೇ ಆಗಿರುತ್ತದೆ. ಏಕೆಂದರೆ ಗ್ರಹಣವು ಕಾಣಿಸುವ ದೇಶಗಳಲ್ಲಿ ಮಾತ್ರ ಆಚರಣೆ. ಯಾವ ದೇಶದಲ್ಲಿ ಗ್ರಹಣವು ಕಾಣಿಸುವುದಿಲ್ಲವೋ ಆ ದೇಶದಲ್ಲಿ ಗ್ರಹಣ ಕಾಲಕ್ಕೆ ಸಂಬಂಧಿಸಿದ ಸ್ನಾನ ದಾನಾದಿ ಕರ್ಮಗಳು ಆಚರಿಸಲ್ಪಡುವುದಿಲ್ಲ.

"ಏಕಾದಶಿ ಉಪವಾಸವನ್ನು ಆಧುನಿಕ ದೃಗ್ಗಣಿತಾನುಸರಿಯಾಗಿ ಮಾಡುವುದೇ ಪ್ರಮಾಣ ಸಮ್ಮತ. ಆಚಾರ್ಯರಿಗೂ ಪ್ರಿಯ" ಎಂದು ಹೇಳಿರುವ ಮಾತು ಎಷ್ಟರ ಮಟ್ಟಿಗೆ ಸತ್ಯವೆನ್ನುವುದನ್ನು ಪರೀಕ್ಷಿಸೋಣ. ಶ್ರೀಮದಾಚಾರ್ಯರು ತಿಥಿ ನಿರ್ಣಯವೆಂಬ ಗ್ರಂಥವನ್ನು ಬರೆದಿರುತ್ತಾರೆ. ಅಖಿಲ ಭಾರತ ಮಾಧ್ವಮಹಾ ಮಂಡಲದವರು 1974ರಲ್ಲಿ ಮುದ್ರಿಸಿದ ಸರ್ವ ಮೂಲಗ್ರಂಥಗಳಲ್ಲಿ ಈ ಗ್ರಂಥವೂ ಸೇರಿದೆ. ಈ ಗ್ರಂಥದೊಂದಿಗೆ ಶಾಲೀವಾಹನ ಶಕ 1896 ಪ್ರಮಾದಿ ನಾಮ ಸಂವತ್ಸರ ಮಾಘ ಶುದ್ಧನವಮಿಯಂದು (1974ನೇ ಫೆಬ್ರವರಿ 1ನೇ ತಾರೀಖು) ನವಮಿ ತಿಥಿ ಎಷ್ಟು ಘಳಿಗೆಗಳ ಕಾಲವಿತ್ತೆನ್ನುವುದನ್ನು ಈ ಗ್ರಂಥದ ಗಣಿತದ ಪ್ರಕಾರವೇ ಮಾಡಿ ಅದನ್ನೂ ಮುದ್ರಿಸಿದ್ದಾರೆ. ಈ ಗಣಿತದ ಪ್ರಕಾರ ಅಂದು ಸೂರ್ಯೋದಯದಿಂದ 31ಘಳಿಗೆ ನವಮಿ ತಿಥಿ ಇತ್ತೆಂದು ತಿಳಿಯುತ್ತದೆ. ಆ ವರ್ಷದ ಆರ್ಯಭಟೀ ರೀತ್ಯಾ ತಯಾರಿಸಿದ ಪಂಚಾಂಗದಲ್ಲಿ ಅಂದು ನವಮಿ ತಿಥಿಯು 31 ಘಳಿಗೆಯೆಂದೇ ಮುದ್ರಿತವಾಗಿದೆ. ಹಾಗೆಯೇ ಆ ವರ್ಷದ ನವೀನ ದೃಗ್ಗಣಿತ ರೀತ್ಯಾ ತಯಾರಿಸಿದ ಪಂಚಾಂಗದಲ್ಲಿ ನವಮಿ ತಿಥಿಯು $40^3/4$ ಘಳಿಗೆ ಎಂದು ಮುದ್ರಿತವಾಗಿದೆ. ಆದರಿಂದ ಆರ್ಯಭಟ ರೀತಿ ಗಣಿತದ ಫಲಿತಾಂಶವೂ ಶ್ರೀಮದಾಚಾರ್ಯರ ತಿಥಿ ನಿರ್ಣಯ ಗ್ರಂಥದ ಗಣಿತದಿಂದ ಬರುವ ಫಲಿತಾಂಶವೂ ಒಂದೇ ಆಗಿದೆ ಎಂದು ತಿಳಿದು ಬರುತ್ತದೆ. ಆದೇ ನವೀನ ದೃಕ್ಸಿದ್ಧಾಂತದ ಪ್ರಕಾರ ಬರುವ ತಿಥಿಯ ಕಾಲವು $9\ ^3/4$ ಘಳಿಗೆ ಅಧಿಕವಾಗಿದೆ. ಆದ್ದರಿಂದ ದೃಗ್ಗಣಿತದ ಪ್ರಕಾರ ಬರುವ ತಿಥಿಯ

ಕಾಲವು ಆಚಾರ್ಯರ ತಿಥಿ ನಿರ್ಣಯಕ್ಕೆ ವಿರುದ್ಧವಾಗಿದೆ. ಶ್ರೀಮದಾಚಾರ್ಯರ ನಿರ್ಣಯಕ್ಕೆ ವಿರೋಧವಾದುದು ಅವರಿಗೆ ಪ್ರಿಯವಾಗುತ್ತದೆಯೇ? ಖಂಡಿತಾ ಇಲ್ಲ.

ಆರ್ಯಭಟ್ಟನ ಕಾಲವು ಕ್ರಿ.ಶ. 519 ಎಂದು ಅವನ ಗ್ರಂಥದಿಂದಲೇ ತಿಳಿಯುತ್ತದೆ. ಶ್ರೀಮದಾಚಾರ್ಯರ ಕಾಲವು ಕ್ರಿ.ಶ. 1238. ಆದರಿಂದ ಅವನು ಆಚಾರ್ಯರ ಕಾಲಕ್ಕಿಂತಲೂ ಸುಮಾರು 700 ವರ್ಷಗಳ ಹಿಂದಿನವನು. ಸುಮಾರು 1400 ವರ್ಷಗಳ ನಂತರವೂ ಅವನ ಗಣಿತ ಪ್ರಕಾರ ಮಾಡಿದಾಗ ಬರುವ ತಿಥಿಯ ಕಾಲವು, ಶ್ರೀಮದಾಚಾರ್ಯರ ತಿಥಿ ನಿರ್ಣಯ ಗ್ರಂಥದಲ್ಲಿನ ಗಣಿತದ ಪ್ರಕಾರವೇ ಇದೆ. ಇಂದು ಗ್ರಹಣವು ಅದರ ಪ್ರಕಾರ ಆಗುತ್ತಿಲ್ಲವೆಂದರೆ, ಅಪರೂಪಕ್ಕೆ ಸಂಭವಿಸುವ ಗ್ರಹಣಗಳಿಗೆ ಅಗತ್ಯವಾದ ಕಾಲಾನುಸಾರಿಯಾದ ಸಂಸ್ಕಾರಗಳನ್ನು ಯಂತ್ರ ವೇಧಾದಿಗಳಿಂದ ತಿಳಿದು ಮಾಡಬೇಕು. ಅದನ್ನು ಕಂಡು ಹಿಡಿಯುವ ಸಾಮರ್ಥ್ಯವುಳ್ಳವರು ಇಲ್ಲದ ಮಾತ್ರಕ್ಕೆ ತಿಥ್ಯಾದಿಗಳ ಗಣನೆಯು ಅಗ್ರಾಹ್ಯ ವಾಗುವುದಿಲ್ಲ. ಗ್ರಾಹ್ಯವೇ ಆಗಿರುತ್ತದೆ. ಆದ್ದರಿಂದ ನವೀನ ದೃಕ್ಸಿದ್ಧಾಂತ ಮಾರ್ಗದಿಂದ ಸಾಧಿಸಿದ ಗ್ರಹಸ್ಫುಟ ಮತ್ತು ಗ್ರಹಣಗಳ ಕಾಲವು ಉಪಯೋಗವಾಗ ಬಹುದೇ ಹೊರತು ತಿಥ್ಯಾದಿಗಳಲ್ಲ. ಆರ್ಯಭಟೀಯ ರೀತಿಯಲ್ಲಿ ತಿಥ್ಯಾದಿಗಳಿಗೆ ಅಧಿಕ ಸಂಸ್ಕಾರವಿಲ್ಲದಿರುವ ಕಾರಣ, ಶ್ರೀಮದಾಚಾರ್ಯರ ತಿಥಿ ನಿರ್ಣಯ ಗ್ರಂಥದ ಗಣಿತಕ್ಕನುಸಾರಿಯಾಗಿಯೇ ಫಲಿತಾಂಶ ಬರುತ್ತಿದೆ. ತಿಥಿ ನಿರ್ಣಯ ಗ್ರಂಥದ ಗಣಿತದಲ್ಲಿ ಸೂರ್ಯಚಂದ್ರರ ಸ್ಫುಟವನ್ನು ಮಾಡುವಾಗ ಅಧಿಕ ಸಂಸ್ಕಾರಗಳು ಅಂದರೆ ಬೀಜ ಸಂಸ್ಕಾರಗಳನ್ನೂ ಮಾಡಿಲ್ಲ. ಆರ್ಷ ಪ್ರೋಕ್ತ ಗ್ರಂಥಗಳಲ್ಲಿ ಉಕ್ತವಾದ ಮಂದ ಸಂಸ್ಕಾರವೇ ಉಕ್ತವಾಗಿದೆ. ಆದ್ದರಿಂದ ಸ್ವದೇಶೋಚಿತ (ದೇಶಾಂತರ, ಚರ) ಸಂಸ್ಕಾರಗಳ ಹೊರತು ಬೀಜ ಸಂಸ್ಕಾರವನ್ನೇನೂ ಮಾಡದ ಗ್ರಹಗಳಿಂದಲೇ ತಿಥ್ಯಾದಿಗಳನ್ನು ಸಾಧಿಸಬೇಕು. ತಿಥಿ ನಿರ್ಣಯ ಗ್ರಂಥದ ಗಣಿತ ಕ್ರಮಕ್ಕೂ ಆರ್ಯ ಭಟ್ಟನ ಗಣಿತ ಕ್ರಮಕ್ಕೂ ವ್ಯತ್ಯಾಸವಿದೆ. ತಿಥಿ ಸಾಧನೆಯಲ್ಲಿ ಅನ್ಯ ಬೀಜ ಸಂಸ್ಕಾರ ಗಳನ್ನು ಮಾಡದೆ ಇರುವುದರಿಂದ ಒಂದೇ ರೀತಿ ಫಲಿತಾಂಶ ಬರುತ್ತದೆ. ಇದರಿಂದ ಗ್ರಹಯೋಗ, ಗ್ರಹಣಗಳ ವಿಚಾರದಲ್ಲಿ ದೃಗ್ಗಣಿತವು ಉಪಯೋಗವಾಗಬಲ್ಲುದೇ ಹೊರತು ತಿಥ್ಯಾದಿ ಸಾಧನೆಯಲ್ಲಲ್ಲ. ಪ್ರಾಯಶಃ ಇದೇ ಕಾರಣದಿಂದ ಗ್ರಹಯೋಗ, ಗ್ರಹಣಾದಿಗಳು ನೂತನ ದೃಕ್ಸಿದ್ಧಾಂತ ರೀತಿಯಾಗಿಯೂ ನಿತ್ಯ ಪಂಚಾಂಗವು

ಆರ್ಯಭಟ ಅಥವಾ ಸೂರ್ಯ ಸಿದ್ಧಾಂತಾನುಸಾರಿಯಾಗಿಯೂ, ಅನೇಕ ದಶಕಗಳಿಂದ ಎಲ್ಲಾ ಪಂಚಾಂಗಗಳೂ ತಯಾರಾಗುತ್ತಿದೆ ಎಂದು ತಿಳಿಯ ಬಹುದಾಗಿದೆ.

ಕಲ್ಪಾಂತರದ ವರೆಗಿನ ಕರ್ಮಗಳಿಗೆ ಯೋಗ್ಯವಾದ ಕಾಲ ಸ್ವರೂಪವನ್ನು ಗ್ರಹಗತಿ ಸ್ವರೂಪವನ್ನೂ ತತ್ವತಃ ತಿಳಿದ ತ್ರಿಕಾಲಜ್ಞರಾದ ಋಷಿಗಳು ಅದಕ್ಕೆ ಉಚಿತವಾದ ಗಣಿತದ ಕ್ರಮವನ್ನು ತಮ್ಮ ಗ್ರಂಥಗಳಲ್ಲಿ ನಿರೂಪಿಸಿ, ಅಪರೂಪಕ್ಕೆ ಸಂಭವಿಸುವ ಗ್ರಹಣಾದಿಗಳಿಗೆ, ಆಯಾಕಾಲದಲ್ಲಿ ಆ ಗಣಿತ ಮಾರ್ಗದಿಂದಲೇ ಯೋಗ್ಯ ಸಂಸ್ಕಾರ ಮೂಲಕ ತಿಳಿದುಕೊಳ್ಳುವಂತೆ ಉಪದೇಶಿಸಿರುತ್ತಾರೆ. ಆದ್ದರಿಂದ ಅವರ ಸಿದ್ಧಾಂತಗಳು ಚಿರಕಾಲ ಉಪಯೋಗದಲ್ಲಿರುವಂತಹದು. ಹಾಗೆಯೇ ಋಜುವರೇಣ್ಯರುಗಳಾದ ಶ್ರೀಮದಾಚಾರ್ಯರು ಮತ್ತು ಶ್ರೀವಾದಿರಾಜರು ರಚಿಸಿರುವ **'ತಿಥಿ ನಿರ್ಣಯ'** ಮತ್ತು **'ಏಕಾದಶಿ ನಿರ್ಣಯ'** ಗ್ರಂಥಗಳು ಚಿರಕಾಲದ ಉಪಯೋಗಕ್ಕಾಗಿಯೇ ರಚಿತವಾಗಿರುವುವು. ನೂತನ ದೃಕ್ಸಿದ್ಧಾಂತದ ಪ್ರಕಾರ ಮತ್ತು ಅವರ ಲೇಖನದಲ್ಲಿ ಬರೆದಿರುವಂತೆ (ಅಂದರೆ "ಒಂದೇ ಗಣಿತ ಪದ್ಧತಿಯನ್ನು ದೀರ್ಘಕಾಲಿಕವಾಗಿ ಆಧರಿಸಬಾರದು" ಎಂದಿರುವಂತೆ) ಪಂಚಾಂಗಗಳು ರಚಿತವಾದರೆ, ಈ ಎಲ್ಲಾ ಗ್ರಂಥಗಳು ನಿರುಪಯುಕ್ತವಾಗುವುವು. ಆದ್ದರಿಂದ ನಿತ್ಯಪಂಚಾಂಗ ವಿಚಾರದಲ್ಲಿ ಹೇಗೆ ದೃಗ್ಗಣಿತವು ಅಗ್ರಾಹ್ಯವೆಂದು ಪ್ರದರ್ಶಿಸಲು, ಪ್ರಕೃತ ದೀರ್ಘ ವಿಮರ್ಶೆಯು ಅವಶ್ಯಕವಾಯಿತು.

30-7-1993
ತುಮಕೂರು

ಬಿ.ಪಿ. ನಾಗಭೂಷಣ ರಾವ್. ಬಿ.ಇ. (ಮೆಕ್)
"ಪದ್ಮಪ್ರಭಾ" ಬಿ.ಎನ್.ಪಿ. ಕಾಂಪೌಂಡ್
ತುಮಕೂರು.

ಶ್ರೀವಾದಿರಾಜಯತಿಕೃತ "ಏಕಾದಶೀ ನಿರ್ಣಯ"

ಏಕಾದಶೀಂ ವೃಥಾ ಘ್ನಂತಿ ಕೇಚಿದಾಸ್ಮಾಕ ಪಂಡಿತಾಃ |
ತೇಷಾಂ ಲುಪ್ತ್ಯೈ ಕರ್ಮಕ್ಲೃಪ್ತ್ಯೈ ಕೃಷ್ಣಪ್ರೀತ್ಯೈ ಯತಾಮಹೇ || ೧ ||

ನಮ್ಮ ಕೆಲವು ಪಂಡಿತರು ಏಕಾದಶೀ (ಉಪವಾಸವನ್ನು) ವ್ಯರ್ಥವಾಗಿ ಹಾಳು ಮಾಡುತ್ತಾರೆ. ಶ್ರೀಕೃಷ್ಣನ ಪ್ರೀತಿಗಾಗಿ, ಅವರನ್ನು ನಿರಾಕರಿಸಿ, ಏಕಾದಶೀ (ಉಪವಾಸ) ನಿರ್ಣಯವನ್ನು ಮಾಡಲು ಪ್ರಯತ್ನಿಸುತ್ತೇವೆ. || ೧ ||

ಅರುಣೋದಯ ವೇಲಾಯಾಂ ದಶಮೀ ಯದಿ ದೃಶ್ಯತೇ |
ಪಾಪಮೂಲಂ ತದಾ ಜ್ಞೇಯಂ ಏಕಾದಶ್ಯುಪವಾಸನಮ್ || ೨ ||

ಅರುಣೋದಯ ವೇಳೆಯಲ್ಲಿ ದಶಮಿ ತಿಥಿಯು ಕಂಡು ಬಂದರೆ, ಆಗ ಏಕಾದಶೀ ಉಪವಾಸವು ಪಾಪಕ್ಕೆ ಕಾರಣವಾಗುವುದೆಂದು ತಿಳಿಯಬೇಕು. || ೨ ||

ಚತಸ್ರೋ ಘಟಿಕಾಃ ಪ್ರಾತರರುಣೋದಯ ಉಚ್ಯತೇ |
ಇತ್ಯಾಚಾರ್ಯವಚಃ ಸ್ಮಾರ್ತಂ ತದ್ವಿರೋಧೋಽಸ್ತಿ ನಃ ಕಿಲ || ೩ ||
ಇತಿ ವಿಪ್ರತಿಪನ್ನಾನಾಂ ಉತ್ತರಂ ದಾತುಮಾರಭೇ ||

ಪ್ರಾತಃ ಕಾಲಕ್ಕಿಂತ (ಸೂರ್ಯೋದಯಕ್ಕಿಂತ) ಮುಂಚಿನ ನಾಲ್ಕು ಘಳಿಗೆಗಳ ಕಾಲವು ಅರುಣೋದಯವೆಂದು ಹೇಳಲ್ಪಟ್ಟಿದೆ. ಹೀಗೆ ಹೇಳಿರುವ ಆಚಾರ್ಯರ ವಚನವು ಸ್ಮೃತಿ ಮೂಲಕವಾದುದು. ಈ ವಚನದ ವಿರೋಧವು ನಮಗೆ ಬರುತ್ತದೆಂದು ವಿರೋಧ ಹೇಳುವವರಿಗೆ ಉತ್ತರವನ್ನು ಕೊಡಲು ಪ್ರಾರಂಭಿಸುತ್ತೇವೆ.

ಟಿಪ್ಪಣಿ:- ಸೂರ್ಯೋದಯದ ನಾಲ್ಕು ಘಳಿಗೆ ಪೂರ್ವದಲ್ಲಿ ಹ್ರಾಸ ಪಕ್ಷದಿಂದ ಅತಿವೃದ್ಧಿ ಪಕ್ಷದ ವರೆಗೆ ಕ್ರಮವಾಗಿ 5 ವಿಘಳಿಗೆ, 10 ವಿಘಳಿಗೆ, 1 ಘಳಿಗೆ, 1 ಘಳಿಗೆ 20 ವಿಘಳಿಗೆ ಕಾಲ ದಶಮೀವೇಧವೆಂದು ಹೇಳುತ್ತೇವೆ. ಮೇಲಿನ ಆಚಾರ್ಯರ ಶ್ಲೋಕದಲ್ಲಿ ಈ ವಿಚಾರವನ್ನು ಹೇಳದಿದ್ದರೂ, ಅದರಂತೆ ಆಚರಿಸುವ ನಮಗೆ ಆಚಾರ್ಯರ ವಚನವು ವಿರೋಧವಲ್ಲವೆಂದು ಹೇಳಿ, ಮುಂದಿನ ಶ್ಲೋಕಗಳಿಂದ ತಮ್ಮ ನಿಲುವನ್ನು ಸಮರ್ಥಿಸುತ್ತಾರೆ.

ಸ್ಯಾದೇತದ್ಯದಿ ಮಧ್ವೋಕ್ತೇ ಚತುಷ್ಕೇ ದಶಮೀ ಸ್ಪೃಶಿ || ೪ ||
ಉಪವಾಸಂ ಪರದಿನೇ ಕುರ್ಮಸ್ತನ್ಮಾರ್ಗಗಾ ವಯಂ |

(ಅರುಣೋದಯದ) ನಾಲ್ಕು ಘಳಿಗೆಗಳಿಗೆ ದಶಮೀ ಸ್ಪರ್ಶವು ಇರುವಾಗ ಉಪವಾಸ ಮಾಡಿದರೆ, ಆಗ ಮಧ್ವರ ವಚನ ವಿರೋಧವು ನಮಗೆ ಬಂದೀತು. ಆದರೆ ಅವರನ್ನು ಅನುಸರಿಸುವ ನಾವು ಮಾರನೆಯ ದಿವಸವೇ ಉಪವಾಸವನ್ನು ಮಾಡುತ್ತೇವೆ.

ತತ್ಪೂರ್ವಘಟಿಕಾಮಾತ್ರ ವೇಧೇಽಪಿ ತ್ಯಜತಾಂ ತಿಥಿಂ || ೫ ||
ತತ್ತ್ಯಾಗಃ ಸುತರಾಂ ಯಸ್ಮಾದಸ್ಮಾಕಮಕುತೋ ಭಯಂ |

(ನಾಲ್ಕು ಘಳಿಗೆಯ ಅರುಣೋದಯದ) ಪೂರ್ವದಲ್ಲಿ ಒಂದು ಘಳಿಗೆ ಕಾಲ ವೇಧವಿರುವಾಗಲೂ, ಆ ತಿಥಿಯನ್ನು ಸಂಪೂರ್ಣವಾಗಿ ತ್ಯಜಿಸುವ ನಮಗೆ, ಆದರ ತ್ಯಾಗದಿಂದ ಯಾವುದರ ಭಯವೂ ಇಲ್ಲ.

ಅನುಕ್ತೋಽಯಂ ಕುತಃ ಪಂಥಾ ಇತಿ ಶಂಕಾಂತರಂ ಯದಿ || ೬ ||
ತರ್ಹ್ಯನುಕ್ತಿ ವಿರೋಧೋಽಯಂ ತತ್ರಾಪ್ಯುತ್ತರಮಾರಭೇ |

ಆಚಾರ್ಯರು ಪೂರ್ವಕಾಲದ (ಅರುಣೋದಯ ಕಾಲದ ಪೂರ್ವ ಕಾಲದ) ವೇಧವನ್ನು ಹೇಳದಿರುವುದರಿಂದ ಅನುಕ್ತ ದೋಷ ಬರುವುದೆಂದು ಶಂಕಿಸಿದರೆ, ಅದಕ್ಕೂ ಉತ್ತರವನ್ನು ಕೊಡಲು ಆರಂಭಿಸುತ್ತೇವೆ.

ಟಿಪ್ಪಣಿ:- ಸೂರ್ಯೋದಯಕ್ಕೆ 4 ಘಳಿಗೆಗಳಿಗಿಂತ ಪೂರ್ವದಲ್ಲಿ ವೇಧವಿದೆ ಯೆಂದು ಆಚಾರ್ಯರ ವಚನದಲ್ಲಿ ಹೇಳಿಲ್ಲವೆಂಬುದಾಗಿ ಆಪಾದನೆ. ಅದಕ್ಕೂ ಉತ್ತರವನ್ನು ಕೊಡುತ್ತೇವೆ ಎಂದಿದ್ದಾರೆ.

ಪ್ರಮಾಣಾನ್ಯೇವ ಸಂಗೃಹ್ಣನ್ನಾಚಾರ್ಯಃ ಸ್ವಾಶಯಂ ತ್ವಿಮಮ್|| ೭ ||
ಶಿಷ್ಯಾಯೋಪಾದಿಶನ್ ಗ್ರಂಥೇ ನ ಬಬಂಧ ಸದಗ್ರಣೀಃ |

ಸಜ್ಜನಾಗ್ರೇಸರರಾದ ಶ್ರೀಮದಾಚಾರ್ಯರು (ಕೃಷ್ಣಾಮೃತ ಮಹಾರ್ಣವ ಗ್ರಂಥದಲ್ಲಿ ದಶಮಿ ವೇಧದ ವಿಷಯದಲ್ಲಿ) ಪ್ರಮಾಣಗಳನ್ನು ಸಂಗ್ರಹಿಸಿರುವರು. ಅರುಣೋದಯಕ್ಕಿಂತ ಹಿಂದಿನ ವೇಧದ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು

ಶಿಷ್ಯರಿಗೆ ಉಪದೇಶಿಸಿದರು. (ಪ್ರತ್ಯೇಕವಾಗಿ) ತಮ್ಮ ಗ್ರಂಥದಲ್ಲಿ ಸೇರಿಸಲಿಲ್ಲ.

ಟಿಪ್ಪಣಿ :- ಸೂರ್ಯೋದಯಕ್ಕೆ 4 ಘಳಿಗೆ ಪೂರ್ವದಲ್ಲಿ ವೇಧದ ವಿಚಾರವು ಗ್ರಂಥದಲ್ಲಿ ಆಚಾರ್ಯರಿಂದ ಸೇರಿಸಲ್ಪಡದ ಮಾತ್ರಕ್ಕೇ ಅದು ಅಪ್ರಮಾಣವಲ್ಲ. ಪ್ರಮಾಣಗಳಿದ್ದು ಅವುಗಳನ್ನು ಶಿಷ್ಯರಿಗೆ ಉಪದೇಶಿಸಿದ್ದಾರೆಂದು ಶಿಷ್ಯರು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾರೆ.

ಕೃಷ್ಣಾಷ್ಟಮೀ ಕಲ್ಪಕರ್ತ್ರಾ ಮಧ್ವೇನಾದರ್ಶಿತಂ ಯಥಾ || ೮ ||
ತಿಥ್ಯಂತೇ ಪಾರಣಂ ಶುಷ್ಕಾದಾಚಾರಾತ್ತದ್ವದಸ್ತ್ವಿದಂ |

ಹೇಗೆ "ತಿಥ್ಯಂತೇ ಪಾರಣಂ" (ತಿಥಿಯ ಅಂತ್ಯದಲ್ಲಿ ಪಾರಣೆ ಮಾಡುವ ಆಚರಣೆಯು) ಪ್ರಯೋಜನವಿಲ್ಲವಾದ್ದರಿಂದ, ಜಯಂತೀ ಕಲ್ಪಕರ್ತೃಗಳಾದ ಆಚಾರ್ಯರು ತಮ್ಮ ಗ್ರಂಥದಲ್ಲಿ ತೋರಿಸದಿದ್ದರೂ (ಅನುಕ್ತವು ದೋಷವಲ್ಲವೆಂದು ಒಪ್ಪಿ ಆಚರಿಸುವಂತೆ) ಇದೂ (56ನೇ ಘಳಿಗೆ ಸಹಾ ವೇಧ ಎಂದು ತಿಳಿದು ಆಚರಿಸುವುದು) ಆಗಿರಲಿ.

ಟಿಪ್ಪಣಿ:- ಘಟ್ಟದ ಮೇಲಿನ ಕೆಲವು ಮಾಧ್ವಮಠಗಳಲ್ಲಿ ಕೃಷ್ಣಾಷ್ಟಮೀ ವ್ರತಾಚರಣೆಯ ಸಂದರ್ಭದಲ್ಲಿ ಅಷ್ಟಮೀ ತಿಥಿಯ ಅಂತ್ಯದಲ್ಲಿ ಪಾರಣೆ ಮಾಡುವ ಆಚರಣೆಯಿದೆ. ಈ ಆಚಾರವನ್ನು ಶುಷ್ಕಾಚಾರವಾದ್ದರಿಂದ ಜಯಂತೀ ಕಲ್ಪ ಗ್ರಂಥ ಕರ್ತೃಗಳಾದ ಆಚಾರ್ಯರು ಗ್ರಂಥದಲ್ಲಿ ಹೇಳಲಿಲ್ಲ. ಆದರೂ ಅವರು ಆಚರಿಸುತ್ತಿದ್ದಾರೆ. ಆದ್ದರಿಂದ ಗ್ರಂಥದಲ್ಲಿ ಹೇಳದಿರುವುದು ದೋಷವಲ್ಲವೆಂಬುದನ್ನು ಅವರು ಒಪ್ಪಿದ್ದಾರೆ. ಅದರಂತೆ ಅರುಣೋದಯದ ಪೂರ್ವಕಾಲದ ವೇಧದ ವಿಚಾರವು ಆಗಲಿ. ಗ್ರಂಥದಲ್ಲಿ ಹೇಳದಿರುವುದು ದೋಷವಲ್ಲವೆಂದು ಅಭಿಪ್ರಾಯ.

ಸಾಮ್ಯಮಾತ್ರವಿವಕ್ಷಾಯಾಮಗ್ರೇ ಪ್ರವವೃತೇ ಸ್ಮೃತಿಃ || ೯ ||
ದ್ವಿಮುಹೂರ್ತಮನಾಧ್ಯಾಯ ಇತಿ ಸಾಮ್ಯ ವಚೋ ಯಥಾ |
ನ್ಯಾಯ ಪ್ರಾಪ್ತೋ ವಿಶೇಷೋಽಯಂ ನಾಂಗೀಕಾರ್ಯಃ ಕಥಂ ಬುಧೈಃ || ೧೦ ||

ಹೇಗೆ "ದ್ವಿಮುಹೂರ್ತಂ ಅನಾಧ್ಯಾಯ" ಎನ್ನುವ ಅನಧ್ಯಾಯದ ಸ್ಮೃತಿಯು

ಸಾಮ್ಯ ಪಕ್ಷವನ್ನು ಮಾತ್ರ ಹೇಳುತ್ತದೋ, ಹಾಗೆಯೇ (ಅರುಣೋದಯ ವೇಧವನ್ನು ಹೇಳುವ) ಸ್ಮೃತಿಯು ಸಾಮ್ಯ ಪಕ್ಷವನ್ನು ಮಾತ್ರ ಹೇಳಿದೆ. ಪಕ್ಷದಲ್ಲಿ ವೃದ್ಧಿ, ಸಮ, ಹ್ರಾಸವೆಂದು ಮೂರು ಪ್ರಭೇದಗಳು ನ್ಯಾಯ ಪ್ರಾಪ್ತಗಳು. ಆದ್ದರಿಂದ ಜ್ಞಾನಿಗಳು ಇದನ್ನು ಏಕೆ ಅಂಗೀಕರಿಸುವುದಿಲ್ಲ? (ಅಂದರೆ ಅಂಗೀಕರಿಸುತ್ತಾರೆಂದು ಭಾವ).

ಟಿಪ್ಪಣಿ:- ವೃದ್ಧಿ, ಹ್ರಾಸ, ಸಮ ಪಕ್ಷಗಳಲ್ಲಿನ ತಿಥಿಗಳು ಏಕರೀತಿ ಇರುವುದಿಲ್ಲ. ಅಧಿಕ, ಕಡಿಮೆ ವ್ಯಾಪ್ತಿಯುಳ್ಳವಾಗಿದ್ದರೂ, ಸ್ಮೃತಿ ವಾಕ್ಯವಾದ "ದ್ವಿಮುಹೂರ್ತಮನಧ್ಯಾಯ" ಎನ್ನುವ ವಾಕ್ಯದಲ್ಲಿ ಸಮಪಕ್ಷದ ತಿಥಿಯ ವ್ಯಾಪ್ತಿಯನ್ನು ಹೇಳಿ, ಉಳಿದೆರಡರ ವ್ಯಾಪ್ತಿಯನ್ನು ಹೇಳದಿರುವಂತೆ, ಆಚಾರ್ಯರ ವಚನದಲ್ಲಿಯೂ ಹೇಳಿಲ್ಲ. ಈ ವ್ಯತ್ಯಾಸಗಳು ನ್ಯಾಯವಾಗಿ ಪ್ರಾಪ್ತವಾಗುವುದರಿಂದ ಜ್ಞಾನಿಗಳು ಅಂಗೀಕರಿಸಬೇಕೆಂದು ಹೇಳಿದ್ದಾರೆ.

ನ ಹಿ ವೃದ್ಧೌ ಕ್ಷಯೇ ಸಾಮ್ಯೇ ತಿಥೀನಾಮೇಕರೂಪತಾ |
ವೃದ್ಧೌ ಸಾಮ್ಯೇ ಕ್ಷಯೇ ಚೋಷಸ್ತ್ರಿಚತುಃಪಂಚನಾಡಿಕಾಃ || ೧೧ ||
ಇತ್ಯಾದಿ ಸ್ಮೃತಿವಾಕ್ಯೇಷು ವೈರೂಪ್ಯಸ್ಯೈವ ದರ್ಶನಾತ್ |

ತಿಥಿಗಳು ವೃದ್ಧಿಯಲ್ಲಿಯೂ, ಸಾಮ್ಯದಲ್ಲಿಯೂ, ಕ್ಷಯದಲ್ಲಿಯೂ ಒಂದೇ ರೂಪವುಳ್ಳವಾಗಿರುವುದಿಲ್ಲ. "ವೃದ್ಧೌ ಸಾಮ್ಯೇ ಕ್ಷಯೇ ಚೋಷಸ್ತ್ರಿಚತುಃ ಪಂಚನಾಡಿಕಾಃ" ಇತ್ಯಾದಿ (ಅನಧ್ಯಾಯ) ಸ್ಮೃತಿ ವಾಕ್ಯಗಳಲ್ಲಿ ತಿಥಿಗಳ ವೈರೂಪ್ಯವು ತೋರಿಸಲ್ಪಟ್ಟಿದೆ.

ಟಿಪ್ಪಣಿ:- ಶ್ಲೋಕದಲ್ಲಿ ಉದಾಹರಿಸಿರುವ ಸ್ಮೃತಿಯ ಅರ್ಥ :- ತಿಥಿಗಳ ವೃದ್ಧಿ ಪಕ್ಷದಲ್ಲಿ ಉಷಃ ಕಾಲದ ಮೂರು ಘಳಿಗೆ, ಕ್ಷಯ ಪಕ್ಷದಲ್ಲಿ ನಾಲ್ಕು ಘಳಿಗೆ, ಸಾಮ್ಯ ಪಕ್ಷದಲ್ಲಿ ಐದು ಘಳಿಗೆ ವ್ಯಾಪ್ತಿ ಇರುವ ದಿವಸದಲ್ಲಿ ಅನಧ್ಯಾಯವನ್ನು ಆಚರಿಸಬೇಕು. ಆದ್ದರಿಂದ ವೃದ್ಧಿ ಕ್ಷಯ ಮತ್ತು ಸಾಮ್ಯ ಪಕ್ಷಗಳಲ್ಲಿ ತಿಥಿಗಳನ್ನು ಒಂದೇ ರೀತಿಯಾಗಿ ಪರಿಗಣಿಸಬಾರದು.

ಯತಃ ಏಕತ್ರ ನಿರ್ಣೀತಃ ಶಾಸ್ತ್ರಾರ್ಥೋ ಹ್ಯಪರತ್ರ ಚ || ೧೨ ||
ಸಂಕ್ಷೇಪ ವಿಸ್ತರಾಭ್ಯಾಂ ಹಿ ಪ್ರವದಂತಿ ಮನೀಷಿಣಃ |

ಜ್ಞಾನಿಗಳು ಕೆಲವೊಮ್ಮೆ ಸಂಕ್ಷೇಪವಾಗಿಯೂ, ಕೆಲವೊಮ್ಮೆ ವಿಸ್ತಾರವಾಗಿಯೂ ಹೇಳುತ್ತಾರೆ. ಆದ್ದರಿಂದ ಒಂದು ಕಡೆ ನಿರ್ಣೀತವಾದ ಶಾಸ್ತ್ರಾರ್ಥವನ್ನು ಇನ್ನೊಂದು ಕಡೆಯೂ ಅನ್ವಯಿಸಬೇಕು.

ಯಥಾ ಸಾಮಾನ್ಯ ಶಬ್ದಾರ್ಥಂ ಚತುಷ್ಪದವಿಬೋಧಿತಮ್ || ೧೩ ||
ಆದಾಯ ಕಾಲಭೇದೇನ ವಿಶೇಷಂ ಚ ವದದ್ವಚಃ |
ನ ವಿರುದ್ಧಂ ತಥಾಽಽರ್ಯೋಕ್ತ ಸಾಮಾನ್ಯವಚನಂ ತ್ವಿದಮ್ || ೧೪ ||

(ಅನಧ್ಯಾಯದಲ್ಲಿ) ಹೇಗೆ "ಚತುಃ" ಪದವು ತಿಳಿಸುವ ಸಾಮಾನ್ಯ ಶಬ್ದಾರ್ಥವು. ಕಾಲಭೇದದಿಂದ (ವೃದ್ಧಿ, ಹ್ರಾಸ ಪಕ್ಷಗಳಲ್ಲಿ) ವಿಶೇಷಾರ್ಥವನ್ನು ತಿಳಿಸುತ್ತದೋ, ಹಾಗೆಯೇ(ವೇಧದ ವಿಷಯದಲ್ಲೂ) ವಿಶೇಷಾರ್ಥವನ್ನುಳ್ಳ ಆಚಾರ್ಯರ ಈ ಸಾಮಾನ್ಯ ವಚನವು ವಿರೋಧವಲ್ಲ.

ಟಿಪ್ಪಣಿ:- ಅನಧ್ಯಾಯದಲ್ಲಿ ಸಾಮಾನ್ಯವಾಗಿ "ಚತುಃ" ಶಬ್ದದಿಂದ ನಾಲ್ಕು ಘಳಿಗೆ ವ್ಯಾಪ್ತಿಯನ್ನು ಹೇಳಿ, ವೃದ್ಧಿ ಮತ್ತು ಹ್ರಾಸ ಪಕ್ಷವೆಂಬ ಕಾಲಭೇದವನ್ನಿಟ್ಟು ಕೊಂಡು,"ತ್ರಿ" ಮತ್ತು "ಪಂಚ"ವೆಂಬ ಎರಡು ಶಬ್ದಗಳಿಂದ, ಮೂರು ಮತ್ತು ಐದು ಘಳಿಗೆಗಳ ವ್ಯಾಪ್ತಿಯೆಂಬ ವಿಶೇಷವನ್ನು ಹೇಳುವ ಮಾತಿಗೆ ವಿರೋಧವಿಲ್ಲ ದಿರುವಂತೆಯೇ, "ಚತಸ್ರೋ ಘಟಿಕಾಃ" ಎನ್ನುವ ಆಚಾರ್ಯರ ಸಾಮಾನ್ಯ ವಚನವು, ಅರುಣೋದಯದ ಪೂರ್ವ ವೇಧವನ್ನು ಹೇಳುವ ವಿಶೇಷ ವಚನಗಳಿಗೆ ವಿರೋಧವಾಗುವುದಿಲ್ಲ.

ಸಾಮ್ಯೇ ಹ್ರಾಸೇ ಸಮಾದಾಯ ವೃದ್ಧಿಮಾತ್ರಪ್ರಭೇದಕಮ್ |
ವಿಶೇಷಂ ದರ್ಶಯದ್ವಾಕ್ಯಂ ವಿರುದ್ಧಂ ನೈವ ಧೀಮತಃ || ೧೫ ||
ನ ಹಿ ದ್ವಿಲಿಪ್ತಿಕಾ ಮಾತ್ರಂ ತತ್ಕಾಲತ್ವಾವಬೋಧಕಮ್ ||

ತಿಥಿಯ ಸಾಮ್ಯದಲ್ಲಿಯೂ, ಹ್ರಾಸದಲ್ಲಿಯೂ ಒಂದು ರೀತಿಯಲ್ಲಿ ಹೇಳಿ, ವೃದ್ಧಿ ಪಕ್ಷದಲ್ಲಿ ಪ್ರಭೇದಗಳನ್ನು ವಿಶೇಷವಾಗಿ ಹೇಳುವ ಜ್ಞಾನಿಯ ವಾಕ್ಯವು ಪೂರ್ವಾಪರ ವಿರುದ್ಧವಲ್ಲ. ಸಾಮ್ಯಪಕ್ಷದಲ್ಲಿ ಎರಡು ಲಿಪ್ತಿಗಳ (10ವಿಘಳಿಗೆ) ವೇಧ ಕಾಲವನ್ನು ಹೇಳುವ ವಾಕ್ಯವು ಎಲ್ಲಾ ಕಾಲಕ್ಕೂ ಅನ್ವಯಿಸಿ ಹೇಳಿರುವುದಲ್ಲ.

ಟಿಪ್ಪಣಿ:- ತ್ರಿವಿಕ್ರಮ ಪಂಡಿತಾಚಾರ್ಯರ ವಚನದ ಪ್ರಕಾರ ವೇಧಗಳು ಈ ರೀತಿಯಾಗಿವೆ.

ಸಾಮ್ಯದಲ್ಲಿ 10 ವಿಘಳಿಗೆ.
ಹ್ರಾಸದಲ್ಲಿ 5 ವಿಘಳಿಗೆ.
ಸಮವೃದ್ಧಿಯಲ್ಲಿ 1 ಘಳಿಗೆ.
ಅತಿವೃದ್ಧಿಯಲ್ಲಿ 1 ಘಳಿಗೆ 20 ವಿಘಳಿಗೆ.

ಸಾಮ್ಯ ಮತ್ತು ಹ್ರಾಸ ಪಕ್ಷಗಳಲ್ಲಿ ವೇಧವು ಇರಬಹುದೆಂಬ ಶಂಕೆಯಿಂದ ಲಿಪ್ತಿ ಮಾತ್ರ ವೇಧದ ಪರಿಹಾರವನ್ನು ಹೇಳಲಾಗಿದೆ ಎಂದು 52 ಮತ್ತು 53ನೇ ಶ್ಲೋಕಗಳಲ್ಲಿ ಹೇಳಲ್ಪಟ್ಟಿದೆ.

ಘಟಿಕಾ ತ್ರಿಕಮಾತ್ರಂ ತು ವೃದ್ಧೌ ಹ್ರಾಸೇ ತು ಪಂಚಕಂ || ೧೬ ||
ಕಸ್ಮಾದನಾಧ್ಯಾಯತಾಯಾಂ ಹೇತುರಿತ್ಯೇವ ಚಿಂತ್ಯತಾಂ |

ವೃದ್ಧಿಯಲ್ಲಿ 3 ಘಳಿಗೆ, ಹ್ರಾಸದಲ್ಲಿ 5ಘಳಿಗೆ ತಿಥಿ ವ್ಯಾಪ್ತಿಯು ಅನಧ್ಯಾಯ ವಾಗಲು ಕಾರಣವೇನೆಂಬುದನ್ನು ಚಿಂತಿಸಿರಿ.

ಟಿಪ್ಪಣಿ :- ವೃದ್ಧಿ, ಹ್ರಾಸ, ಸಮ ಪಕ್ಷಗಳಲ್ಲಿ ವ್ಯತ್ಯಾಸ ಬರಲು ಕಾರಣವನ್ನು ಆಲೋಚಿಸಬೇಕೆಂದು ಹೇಳಿದ್ದಾರೆ.

ವೃದ್ಧಾವುನ್ಮುಖತಾ ತಿಥ್ಯಾಃ ಹ್ರಾಸೇಽ ವಾಙ್ಮುಖತಾ ತಥಾ || ೧೭ ||
ಅತಸ್ತ್ರಿಕಂ ವೃದ್ಧಿಗತಂ ಭವಿಷ್ಯತಿ ಚತುಷ್ಟಯಂ |
ಹ್ರಾಸೇ ತಥಾ ಪಂಚಕಂ ಸ್ಯಾದಿತಿ ಕೃತ್ಸ್ನೈವ ಚೋದನಾ || ೧೮ ||

ತಿಥಿಗಳು ವೃದ್ಧಿಯಲ್ಲಿ ಅಧಿಕವಾಗುವುದರಿಂದಲೂ, ಹ್ರಾಸದಲ್ಲಿ ಕಡಿಮೆ ಯಾಗುವುದರಿಂದಲೂ, ವೃದ್ಧಿಯಲ್ಲಿ (ಅನಧ್ಯಾಯವಾಗಲು ತಿಥಿಯ ವ್ಯಾಪ್ತಿಯೂ) ಮೂರು ಘಳಿಗೆಯೂ, ಸಮಪಕ್ಷದಲ್ಲಿ ನಾಲ್ಕು ಘಳಿಗೆಯೂ, ಹಾಗೆಯೇ ಹ್ರಾಸ ಪಕ್ಷದಲ್ಲಿ ಐದು ಘಳಿಗೆಯೂ ಆಗುತ್ತದೆ. ವಿಧಿ ವಾಕ್ಯಗಳು ಈ ರೀತಿಯಾಗಿಯೇ ಇರುವುವು.

ಟಿಪ್ಪಣಿ:- "ವೃದ್ಧೌ ಸಾಮ್ಯೇ ಕ್ಷಯೇ ಚೋಷಸ್ತ್ರಿಚತುಃಪಂಚನಾಡಿಕಾಃ" ಇತ್ಯಾದಿಗಳು ವಿಧಿ ವಾಕ್ಯಗಳು.

ಏವಂ ಸತಿ ಮಹಾವೃದ್ಧೌ ದಶಮೀ ಪೃಷ್ಠಗಾऽಪಿ ಯಾ |
ಸ್ಯಾದೇವ ಸಪ್ತಮಸ್ಯಾಂತಪರ್ಯಂತಾ ನ್ಯಾಯಸಾಮ್ಯತಃ || ೧೯ ||

ಹೀಗಿರಲು ಮಹಾವೃದ್ಧಿ ಇರುವಾಗ ಸೂರ್ಯೋದಯಕ್ಕಿಂತ ಹಿಂದಿನ 6ನೇ ಘಳಿಗೆಯಲ್ಲಿ (ಅಂದರೆ ಹಿಂದಿನ ದಿನದ ಸೂರ್ಯೋದಯದಿಂದ 55ನೇ ಘಳಿಗೆಯಲ್ಲಿರುವ) ದಶಮೀ ತಿಥಿಯು, ಏಳನೇ ಘಳಿಗೆ ಕೊನೆಯವರೆವಿಗೂ (ಹಿಂದಿನ ದಿನದ ಸೂರ್ಯೋದಯದಿಂದ 54ನೇ ಘಳಿಗೆ ಕೊನೆಯವರೆವಿಗೂ) ನ್ಯಾಯ ಸಾಮ್ಯದಿಂದ ಇರುವುದಾಗುತ್ತದೆ.

ಟಿಪ್ಪಣಿ:-

ಇಂದಿನ ಸೂರ್ಯೋದಯದ ಪೂರ್ವದಲ್ಲಿ	ಹಿಂದಿನ ದಿನದ ಸೂರ್ಯೋದಯದಿಂದ	ವೇಧಗಳ ಕಾಲ	ಘ.	ವಿ.ಘ
7ನೇ ಘಳಿಗೆ	54ನೇ ಘಳಿಗೆ	ಮಹಾವೃದ್ಧಿ	54	40
6ನೇ ಘಳಿಗೆ	55ನೇ ಘಳಿಗೆ			
5ನೇ ಘಳಿಗೆ	56ನೇ ಘಳಿಗೆ	ಸಮವೃದ್ಧಿ	55	-
4ನೇ ಘಳಿಗೆ	57ನೇ ಘಳಿಗೆ	ಸಮಪಕ್ಷ	56	50
		ಹ್ರಾಸ ಪಕ್ಷ	56	55
3ನೇ ಘಳಿಗೆ	58ನೇ ಘಳಿಗೆ			
2ನೇ ಘಳಿಗೆ	59ನೇ ಘಳಿಗೆ			
1ನೇ ಘಳಿಗೆ	60ನೇ ಘಳಿಗೆ			

ವೇಧಗಳ ಮೇಲ್ಮುಖ (ಆರೋಹ) ↑ ವೇಧಗಳ ಕೆಳಮುಖ (ಅವರೋಹ) ↓

ಹ್ರಾಸದಿಂದ ಮಹಾವೃದ್ಧಿ ಮೇಲ್ಮುಖವಾಗಿಯೂ, ಮಹಾವೃದ್ಧಿಯಿಂದ ಹ್ರಾಸ ಕೆಳಮುಖವಾಗಿಯೂ ಇರುತ್ತದೆ.

ಇಂದಿನ ಸೂರ್ಯೋದಯ

1ನೇ ಘಳಿಗೆ
2ನೇ ಘಳಿಗೆ
3ನೇ ಘಳಿಗೆ
4ನೇ ಘಳಿಗೆ
5ನೇ ಘಳಿಗೆ

ತಥಾ ಚ ಶ್ರೀಮದಾಚಾರ್ಯವಚನೋಲ್ಲಂಘನಾದ್ಭಯಂ |
ಅನಾಶ್ರಿತಾಪ್ತ ತಚ್ಛಿಷ್ಯವಚನಸ್ಯ ಭವೇತ್ತವ || ೨೦ ||
ನಾಸ್ಮಾಕಂ ತತ್ಕೃಪಾಭಾಜಾಂ ತಚ್ಛಿಷ್ಯಕರುಣಾಬಲಾತ್ |

ಆದುದರಿಂದ ಶ್ರೀಮದಾಚಾರ್ಯರ ಆಪ್ತ ಶಿಷ್ಯನ (ತ್ರಿವಿಕ್ರಮ ಪಂಡಿತಾಚಾರ್ಯರ) ವಚನವನ್ನು ಅನುಸರಿಸದೆ ಅನಾಥನಾದ ನಿನಗೆ ಆಚಾರ್ಯರ ಮಾತನ್ನು ಉಲ್ಲಂಘಿಸಿದ ಭಯವುಂಟಾಗಬಹುದು. ಅವರ ಶಿಷ್ಯನ ಕರುಣಾ ಬಲದಿಂದ ಶ್ರೀಮದಾಚಾರ್ಯರ ಕೃಪಾಪಾತ್ರರಾದ ನಮಗೆ ಭಯವಿಲ್ಲ.

ಕಿಂ ಚ ಪಂಚಾಶತಃ ಷಷ್ಠ್ಯಘಟಿಕಾ ವ್ಯಾಪಿನೀ ಯದಾ || ೨೧ ||
ದಶಮೀ ತದ್ದಿನಂ ತ್ವಂ ಚ ಮುಂಚಸ್ಯೇವಾವಿಶಂಕಿತಃ |
ಅತೋ ವೇಲಾಪದಂ ಹ್ಯೇತತ್ಪೂರ್ವಕಾಲಸ್ಯ ವಾಚಕಮ್ || ೨೨ ||
ಅನಿಚ್ಛತಾಽಪಿ ಸ್ವೀಕಾರ್ಯಂ ನೀರಾದೇರಪ್ರಸಕ್ತಿತಃ |

ಮತ್ತೆ ದಶಮಿ ತಿಥಿಯು (ಸೂರ್ಯೋದಯದಿಂದ) 56 ಘಳಿಗೆ ವ್ಯಾಪಿಸಿದ್ದರೆ, ಸಂದೇಹ ಪಡದೆ ನೀನು ಆ ದಿನವನ್ನು ಬಿಟ್ಟು ಬಿಡುತ್ತೀಯೆ. "ವೇಲಾ" ಪದಕ್ಕೆ ನೀರು, ಸಮುದ್ರ ತೀರ ಮೊದಲಾದ ಅರ್ಥಗಳಿಗೆ ಪ್ರಸಕ್ತಿಯಿಲ್ಲದಿರುವುದರಿಂದ ಅದು "ಪೂರ್ವಕಾಲವನ್ನೇ" ತಿಳಿಸುತ್ತದೆಂದು, ಇಚ್ಛೆ ಇಲ್ಲದೇ ಇದ್ದರೂ (ನೀನು) ಒಪ್ಪಲೇ ಬೇಕಾಗಿದೆ.

ಟಿಪ್ಪಣಿ:- "ವೇಲಾ" ಪದಕ್ಕೆ ಅರ್ಥವನ್ನೂ ನಿಶ್ಚಯಿಸುತ್ತಾರೆ. ಅದು "ಪೂರ್ವಕಾಲ"ವನ್ನೇ ತಿಳಿಸುತ್ತದೆ ಎಂದಿದ್ದಾರೆ.

ನೋ ಚೇನ್ಮಧ್ವೋಕ್ತ್ಯವಜ್ಞಾತಾ ಪೂರ್ವಕಾಲೇಽಪಿ ತಾಂ ತ್ಯಜನ್|| ೨೩ ||
ಭಯಭಾಕ್ ಸ್ಯಾಸ್ಸನಃ ಕಾಲಸ್ಸಪ್ತಮೀ ಘಟಿಕಾ ಯತಃ |

(ವೇಲಾ ಪದಕ್ಕೆ ಪೂರ್ವಕಾಲವೆಂಬ ಅರ್ಥವನ್ನು) ಒಪ್ಪದಿದ್ದರೆ, ಮಧ್ವೋಕ್ತಿಯನ್ನು ತಿರಸ್ಕರಿಸುವವನೂ ಭಯ ಹೊಂದಿದವನೂ ಆಗಬೇಕಾಗುತ್ತದೆ. ಆ ಕಾಲವು ನಮಗೆ 7ನೇ ಘಳಿಗೆಯಾಗಿರುತ್ತದೆ. (ಸೂರ್ಯೋದಯಕ್ಕಿಂತ ಮುಂಚಿನ 7ನೇ ಘಳಿಗೆಯಾಗಿರುತ್ತದೆ).

ಟಿಪ್ಪಣಿ:- ಏಳನೇ ಘಳಿಗೆ ಹಿಂದಿನ ದಿನದ ಸೂರ್ಯೋದಯದಿಂದ 54ನೇ ಘಳಿಗೆ.

ವೃಥಾ ಸಾಮಾನ್ಯ ಶಬ್ದಸ್ಯ ವಿಶೇಷಾರ್ಥಪರಿಗ್ರಹಾತ್ || ೨೪ ||
ಕಥಂ ನಾರ್ಯೋಕ್ತಮಾರ್ಗೇಣ ಶ್ರೇಯಾಂಸ್ತಸ್ಯ ಪರಿಗ್ರಹಃ |

ವಿಶೇಷಾರ್ಥ ವಿವಕ್ಷೆಯಿಲ್ಲದ ಸಾಮಾನ್ಯಾರ್ಥ ವಾಚಕ ಶಬ್ದವು ವ್ಯರ್ಥ. ಆರ್ಯೋಕ್ತ ಮಾರ್ಗದಿಂದ "ವೇಲಾ" ಪದಕ್ಕೆ ಪೂರ್ವಕಾಲವೆಂದು ಸ್ವೀಕರಿಸುವುದೇ ಅತಿ ಪ್ರಶಸ್ತವಾಗಿದೆ.

ಪೂರ್ವಾಪರತ್ವಂ ಷಷ್ಠ್ಯರ್ಥಸ್ಸಂಬಂಧಃ ಸಹಭಾವಿತಾ || ೨೫ ||
ಆನಂತರ್ಯಂ ಚೇತಿ ವಾಚಾ ಜಯಾರ್ಯಸ್ಯೈವ ನಿಶ್ಚಿತಮ್ |

(ಪೂರ್ವತ್ವ ಮತ್ತು ಅಪರತ್ವ), ಸಂಬಂಧ ಸಾಮಾನ್ಯ ಸಹಿತತ್ವ ಮತ್ತು ಆನಂತರ್ಯಾರ್ಥಗಳಲ್ಲಿ ಕೂಡಾ ಷಷ್ಠೀ ವಿಭಕ್ತಿಯ ಅರ್ಥ ಉಂಟು ಎಂದು ಶ್ರೀಜಯಾರ್ಯರ ವಚನದಿಂದಲೇ ಸಿದ್ಧವಾಗುತ್ತದೆ.

ಟಿಪ್ಪಣಿ:- "ಏಕಶತಂ ಷಷ್ಠ್ಯರ್ಥಾಃ" ಎಂಬ ಮಹಾಭಾಷ್ಯ ವಚನವು ಪ್ರಸಿದ್ಧವು" ಅಂದರೆ ಷಷ್ಠೀ ವಿಭಕ್ತಿಗೆ ನೂರ ಒಂದು ಅರ್ಥಗಳಿವೆ ಎಂದರ್ಥ. ಆ ನೂರ ಒಂದು ಅರ್ಥಗಳಲ್ಲಿ ಶ್ರೀವಾದಿರಾಜರು ಉದಾಹರಿಸಿ ಹೇಳಿದ ಪೂರ್ವತ್ವ ಅಪರತ್ವಾದಿಗಳು ಇರುತ್ತವೆ. ಇಲ್ಲಿ ಅರುಣೋದಯಸ್ಯ ವೇಲಾ - ಅರುಣೋದಯ ವೇಲಾ" ಎಂದು ಷಷ್ಠೀ ತತ್ಪುರುಷ ಸಮಾಸವು. ಇಲ್ಲಿ ಷಷ್ಠ್ಯರ್ಥವು ಪೂರ್ವತ್ವದಲ್ಲಿ ಉಂಟು. ಅತ್ರ ಪೂರ್ವತ್ವಂ ಷಷ್ಠ್ಯರ್ಥಃ "ಅತೋ ವೇಲಾಪದಂ ಹ್ಯೇತತ್ ಪೂರ್ವಕಾಲಸ್ಯ ವಾಚಕಮ್" ಎಂದು ೨೨ ನೇ ಶ್ಲೋಕದಲ್ಲಿ ಹೇಳಿದ್ದನ್ನು ಪುನಃ ದೃಢೀಕರಿಸಿದ್ದಾರೆ. ಇಲ್ಲಿ ವೇಲಾ ಶಬ್ದದಿಂದ ಅರುಣೋದಯದ ಪೂರ್ವಕಾಲವೆಂದೇ ಅರ್ಥ ನಿಶ್ಚಿತವಾಗುತ್ತದೆ.

ಶಿಷ್ಟಾಚಾರಾತ್ ಸ್ಮೃತಿಃ ಕಲ್ಪ್ಯಾದೃಷ್ಟಾ ಸಾಮಾನ್ಯವಾಗಸೌ || ೨೬ ||
ತನ್ಮೂಲಾರ್ಥಂ ತ್ಯಜೇನ್ನೈವ ನಿರ್ಮೂಲಂ ತದ್ವಿರೋಧಿನಮ್ |

ಶಿಷ್ಟಾಚಾರದ ಮೂಲಾರ್ಥವನ್ನು ಸರ್ವಥಾ ಬಿಡಬಾರದು. ಮೂಲಾರ್ಥಕ್ಕೆ ವಿರೋಧಿಯಾದ, ಬೇರೆ ಯಾವ ಪ್ರಮಾಣವೂ ಇಲ್ಲದ ಆಚಾರವನ್ನು ಬಿಡಬೇಕು.

ಟಿಪ್ಪಣಿ:- ಅರುಣೋದಯಕ್ಕಿಂತಲೂ ಪೂರ್ವದ ದಶಮಿವೇಧವನ್ನು ಆಚರಿಸುವ ಶಿಷ್ಟಾಚಾರಕ್ಕೆ ಶ್ರೀಮದಾಚಾರ್ಯರ ಸಾಕ್ಷಾತ್ ಶಿಷ್ಯರಾದ ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರ ವಚನವು ಮೂಲ (ಪ್ರಮಾಣ)ವಾಗಿದೆ. ಈ ಪ್ರಮಾಣದ ಅರ್ಥವನ್ನು ಸರ್ವಥಾ ಬಿಡಬಾರದು. ಈ ಪ್ರಮಾಣಕ್ಕೆ ವಿರೋಧಿಯಾದ ಅನ್ಯ ಪ್ರಮಾಣವಿಲ್ಲದ, ಆಚಾರವನ್ನು ಬಿಡಬೇಕು.

ಯತೋ ಮುಹೂರ್ತಶಬ್ದೋಽಯಂ ಸಾಧಿಕೇ ಘಟಿಕಾ ದ್ವಯೇ|| ೨೭ ||
ಅಪಿ ಶಕ್ತಸ್ತತೋಽಸ್ಮಾಕಂ ನ ವಿರೋಧ್ಯಪರಂ ವಚಃ |

4 ಘಳಿಗೆಯನ್ನು ಹೇಳುವ ("ದ್ವಿಮುಹೂರ್ತಂ ಅನಧ್ಯಾಯಃ" ಎನ್ನುವ ವಚನದಲ್ಲಿ) ಮುಹೂರ್ತ ಶಬ್ದವು ಎರಡು ಘಳಿಗೆಯಷ್ಟು ಅಧಿಕ ಕಾಲವನ್ನು ಹೇಳಲು ಶಕ್ತವಾದ ಕಾರಣ (ತ್ರಿ ಚತುಃ ಪಂಚನಾಡಿಕಾಃ ಎಂಬ) ಮತ್ತೊಂದು ವಚನವು ನಮಗೆ ವಿರೋಧವಲ್ಲ.

ಕಿಂ ಚ ಟೀಕಾಕೃತೋಕ್ತೋಽರ್ಥೋ ಮೂಲಸ್ಯಾತಿಪ್ರಶಸ್ಯತೇ || ೨೮ ||
ನ ಹ್ಯಕ್ಷ್ಯಾದಿತ್ಯಯೋರೈಕ್ಯಾದಿತ್ಯಸ್ಯೈಕವಿಧತ್ವತಃ |
ಇತಿ ಟೀಕೋದಿತೋಽನ್ಯೋಽರ್ಥಃ ಪರಿತ್ಯಾಜ್ಯೋ ವಿಪಶ್ಚಿತಾ || ೨೯ ||

ಮೂಲಕ್ಕೆ ಟೀಕಾಕಾರರು ಹೇಳಿದ ಅರ್ಥವೇ ಅತಿ ಪ್ರಶಸ್ತವಾಗಿದೆ. ಅಂತರ ಉಪಪತ್ತೇಃ 1-2-13 ಎಂಬ ಸೂತ್ರದ ಭಾಷ್ಯದಲ್ಲಿ "ಅಕ್ಷ್ಯಾದಿತ್ಯಯೋರೈಕ್ಯಾತ್" ಎಂಬ ಭಾಷ್ಯಕಾರರ ಅವತಾರಿಕಾ ವಾಕ್ಯದಲ್ಲಿರುವ ಐಕ್ಯ ಶಬ್ದಕ್ಕೆ (ಏಕವಿಧತ್ವತಃ) 'ಏಕವಿಧವಾದುದರಿಂದ' ಎಂದು ತತ್ತ್ವಪ್ರಕಾಶಿಕಾ ಗ್ರಂಥದಲ್ಲಿ ಟೀಕಾಚಾರ್ಯರು ಹೇಳಿದ ಅರ್ಥವೇ ಪಂಡಿತಮಾನ್ಯವಾಗಿದೆ. ಆಪಾತತಃ ತೋರುವ ಅಭೇದವೆಂಬ ಅರ್ಥವು ತ್ಯಾಜ್ಯವಾಗಿದೆ.

ಏವಂ ಚೇನ್ಮಧ್ವಶಿಷ್ಯೇಣ ಸಾಕ್ಷಾಟ್ಟೀಕಾಕೃತಾ ಕೃತಾ |
ತ್ರಿವಿಕ್ರಮಾರ್ಯವರ್ಯೇಣ ಮರ್ಯಾದೇಯಂ ಕಿಮುಚ್ಯತೇ || ೩೦ ||

ಹೀಗಿರುವಾಗ ಸಾಕ್ಷಾತ್ ಮಧ್ವಶಿಷ್ಯರಾದ, ಪ್ರಾಚೀನ ಟೀಕಾಕಾರರಾದ ತ್ರಿವಿಕ್ರಮ ಪಂಡಿತರು ಮಾಡಿದ "ಅತಿವೃದ್ಧಾ ಅಷ್ಟಯುಗಂ" ಇತ್ಯಾದಿ ವೇಧದ ಅವಧಿ ವಿಷಯದಲ್ಲಿ ಹೇಳಲೇನಿದೆ?

ಟಿಪ್ಪಣಿ:- ಅತಿವೃದ್ಧಿಯಲ್ಲಿ ವೇಧದ ಕಾಲವು ಅಷ್ಟಯುಗ = 16 ಲಿಪ್ತಿ = 80 ವಿಘಳಿಗೆ ಎಂದೂ, ಸಮವೃದ್ಧಿಯಲ್ಲಿ 12 ಲಿಪ್ತಿ = 60 ವಿಘಳಿಗೆ = 1ಘಳಿಗೆ ಎಂದೂ; ಸಮಪಕ್ಷದಲ್ಲಿ 2 ಲಿಪ್ತಿ = 10 ವಿಘಳಿಗೆ, ಹ್ರಾಸದಲ್ಲಿ 1 ಲಿಪ್ತಿ = 5 ವಿಘಳಿಗೆ ಎಂದೂ ವೇಧದ ಅವಧಿಯನ್ನು ಹೇಳಿದ್ದಾರೆ.

ನ ಚ ತತ್ಕೃತಪದ್ಯತ್ವೇ ಶಂಕಾತ್ರೋತ್ಥಾತುಮರ್ಹತಿ |
ದೇಶಾಂತರಸ್ಥ ವಿದುಷಾಮೈತಿಹ್ಯಾಖ್ಯ ಪ್ರಮಾಣತಃ || ೩೧ ||

ದೇಶಾಂತರದಲ್ಲಿರುವ ವಿದ್ವಾಂಸರು ಐತಿಹ್ಯವನ್ನು ಅಂಗೀಕರಿಸಿದ್ದರಿಂದ ತ್ರಿವಿಕ್ರಮ ಪಂಡಿತರು ಈ ಪದ್ಯಗಳನ್ನು ಮಾಡಿರುವ ವಿಷಯದಲ್ಲಿ ಶಂಕೆಯು ಉದ್ಭವಿಸುವುದಿಲ್ಲ.

ಪಾಂತ್ವಸ್ಮಾನಿತಿ ಪದ್ಯಸ್ಯ ವಂದೇ ವಂದ್ಯಮಿತಿ ಸ್ತುತೇಃ |
ಅನ್ಯಥಾ ಮಧ್ವಕೃತಿತಾನಿರ್ಣಯಃ ಕಿಂ ಕೃತಸ್ತ್ವ || ೩೨ ||

ಐತಿಹ್ಯವನ್ನು ಪ್ರಮಾಣವೆಂದು ಒಪ್ಪದಿದ್ದಲ್ಲಿ "ಪಾಂತ್ವಸ್ಮಾನ್" ಎನ್ನುವ ಪದ್ಯವೂ, "ವಂದೇ ವಂದ್ಯಂ" ಎನ್ನುವ ಸ್ತುತಿಯೂ ಮಧ್ವರ ಕೃತಿಯೆಂಬ ನಿರ್ಣಯವು ನಿನ್ನಿಂದ ಹೇಗೆ ಮಾಡಲ್ಪಟ್ಟಿತು.

ಸಾಕ್ಷಾಚ್ಛ್ರೀಮಧ್ವಶಿಷ್ಯಾಣಾಂ ನವಾನಾಂ ಜಯಸನ್ಮುನೇಃ |
ಟೀಕಾಕಾರಸ್ಯ ಮಾರ್ಗೋಽಯಂ ಹೇಯೋ ವಾಚಾ ಕಥಂ ದ್ವಯೋಃ || ೩೩ ||

ಜಾನಂತ್ಯಮೀ ನ ಕಿಂ ಸರ್ವೇ ಕೃಷ್ಣಾಮೃತಮಹಾರ್ಣವಮ್ |
ನೈತಾದೃಶೀ ತಿಥಿಸ್ತೇಷಾಂ ಕಾಲೇ ಕಿಂ ಕಾಽಪಿ ನಾಭವತ್ || ೩೪ ||
ಗುರುವಸ್ತೇ ಕಿಂ ನು ಮೂಕಾಃ ಶಿಷ್ಯಾ ವಾ ದ್ರೋಹಿಣೋ ಗುರೋಃ |

ಸಾಕ್ಷಾತ್ ಶ್ರೀಮಧ್ವಾಚಾರ್ಯರ ಒಂಬತ್ತು ಮಂದಿ ಶಿಷ್ಯರ ಮತ್ತು

ಟೀಕಾಕಾರರಾದ ಜಯತೀರ್ಥ ಮುನಿಗಳ ಈ ಮಾರ್ಗವು ಇಬ್ಬರ ಮಾತಿನಿಂದ ಹೇಗೆ ತ್ಯಾಜ್ಯವಾದೀತು? ಇವರೆಲ್ಲರೂ ಕೃಷ್ಣಾಮೃತ ಮಹಾರ್ಣವನ್ನು ತಿಳಿದಿಲ್ಲವೇನು? ಅವರ ಕಾಲದಲ್ಲಿ ಇಂತಹ ತಿಥಿಯು ಬಂದಿಲ್ಲವೇನು? ಆ ಎಲ್ಲಾ ಗುರುಗಳು ಮೂಕರೇ? ಅಥವಾ ಗುರುಗಳಿಗೆ ದ್ರೋಹ ಬಗೆದ ಶಿಷ್ಯರೇ?

ಲಕ್ಷ್ಮೀನಾರಾಯಣ ಮುನೇರ್ವ್ಯಾಸತೀರ್ಥಾರ್ಯ ಯೋಗಿನಃ || ೩೫ ||
ವಿಬುಧೇಂದ್ರಮುನೇರ್ವಂಶೋ ಜಯತೀರ್ಥಾದಿರೇವ ಹಿ |

ಲಕ್ಷ್ಮೀನಾರಾಯಣ ಮುನಿಗಳ, ವ್ಯಾಸ ತೀರ್ಥರ, ವಿಬುಧೇಂದ್ರ ಮುನಿಗಳ ವಂಶವು ಜಯತೀರ್ಥರಿಂದಲೇ ಪ್ರವೃತ್ತವಾಗಿದೆಯಷ್ಟೆ.

ಬಲವತ್ತ್ವಂ ಪ್ರತಿಜ್ಞಾಯ ಬಹುತ್ವಾಚ್ಚ ಸ್ವಭಾವತಃ || ೩೬ ||
ಪ್ರಬಲಸ್ಯ ವಿರೋಧೇನ ದುರ್ಬಲಸ್ಯೈವ ಹೇಯತಾಂ |
ಶಿಕ್ಷತೋ ಮಧ್ವಮಾರ್ಗಸ್ಯ ಗತಿಸ್ತೇ ಕಂಟಕಾಯತೇ || ೩೭ ||

ಬಹುತ್ವ ಮತ್ತು ಸ್ವಾಭಾವಿಕ ಪ್ರಬಲತ್ವವನ್ನು ಪ್ರಸ್ತಾವಿಸಿ, ಪ್ರಬಲ ವಿರೋಧ ಬಂದಾಗ ದುರ್ಬಲವನ್ನು ತ್ಯಜಿಸಬೇಕೆಂದು ಹೇಳುವ ಶ್ರೀಮಧ್ವಾಚಾರ್ಯರ ಮಾರ್ಗವು ನಿನಗೆ ಕಂಟಕಪ್ರಾಯವಾಗಿದೆ.

ಬಹ್ವಾಗಮವಿರೋಧೇಷು ಬ್ರಾಹ್ಮಣೇಷು ವಿವಾದಿಷು |
ಉಪೋಷ್ಯಾ ದ್ವಾದಶೀ ಶುದ್ಧಾ ತ್ರಯೋದಶ್ಯಾಂ ತು ಪಾರಣಮ್ || ೩೮ ||
ಇತ್ಯಾಚಾರ್ಯವಚಃ ಸಾಕ್ಷಾತ್ತ್ಯಕ್ತಂ ಸರ್ವಾತ್ಮನಾ ತ್ವಯಾ |
ಬಹುದುಷ್ಟವಿರೋಧೇಽಪಿ ಯತಃ ಪೂರ್ವೈವ ಸೇವ್ಯತೇ || ೩೯ ||

ಅನೇಕ ಆಗಮಗಳ ವಿರೋಧವಿದ್ದು, ಬ್ರಾಹ್ಮಣರಲ್ಲಿ ವಿವಾದವಿರಲು ಶುದ್ಧ ದ್ವಾದಶಿಯಂದು ಉಪವಾಸಮಾಡಿ ತ್ರಯೋದಶಿಯಂದು ಪಾರಣೆ ಮಾಡಬೇಕು ಎನ್ನುವ ಶ್ರೀಮಧ್ವರ ವಚನವನ್ನು ನೀನು ಸರ್ವಥಾ ಬಿಟ್ಟಿರುವಿ. ಯಾಕೆಂದರೆ ಬಹು ದುಷ್ಟ ವಿರೋಧಗಳಿದ್ದರೂ ಹಿಂದಿನ ದಿನವನ್ನೇ ಉಪವಾಸಕ್ಕಾಗಿ ಸ್ವೀಕರಿಸಿರುವಿ.

ಏಕಾऽತಿದ್ವಾದಶೀವೃದ್ಧ್ಯಾ ನೋ ಚೇದ್ವೃದ್ಧ್ಯಾ ತು ಷೋಡಶ |
ಹ್ಯೇಕಲಿಪ್ತೀ ಸಮೇ ಹ್ರಾಸೇ ಚತುಷ್ಕಾದುತ್ತರಂ ತ್ರಿದಮ್ || ೪೦ ||
ಅತಿವೃದ್ಧ್ಯಾವಷ್ಟಯುಗಂ ವೃದ್ಧ್ಯಾವಷ್ಟ ಸಮೇ ಚತುಃ |
ಹ್ಯೇಕಲಿಪ್ತೀ ಸಮೇ ಹ್ರಾಸೇ ಚತುಷ್ಕಾದುತ್ತರಂ ತ್ರಿದಮ್ || ೪೧ ||
ಅಸ್ಯಾರ್ಥಃ ಕಥ್ಯತೇ ಪೂರ್ವವಿದ್ವಚ್ಛಿಕ್ಷಾನುಸಾರತಃ |

ಮೇಲಿನ ಎರಡು ಶ್ಲೋಕಗಳಿಗೆ ಹಿಂದಿನ ಜ್ಞಾನಿಗಳ ಶಿಕ್ಷಾನುಸಾರವಾಗಿ ಅರ್ಥವನ್ನು ಹೇಳುವೆನು.

ಏಕಾತಿದ್ವಾದಶೀವೃದ್ಧ್ಯಾ ನೋ ಚೇದಿತ್ಯೇಕವಾಕ್ಯತಾ || ೪೨ ||
ವೃದ್ಧ್ಯಾ ತು ಷೋಡಶೇತ್ಯೇತದಪರಂ ತತ್ಪರಂ ಪರಮ್ |
ಆದಿಪಾದಸ್ಯಾದಿವಾಕ್ಯಂ ದ್ವಿತೀಯಸ್ಯ ದ್ವಿತೀಯಕಂ || ೪೩ ||
ವಾಕ್ಯಂ ದ್ವಿತೀಯಪದ್ಯೇऽಸ್ಮಿನ್ ತೃತೀಯಸ್ಯ ತೃತೀಯಕಮ್ |

"ಏಕಾತಿ ದ್ವಾದಶೀ ವೃದ್ಧ್ಯಾ ನೋಚೇತ್" ಎನ್ನುವುದು ಒಂದು ವಾಕ್ಯ- "ವೃದ್ಧ್ಯಾ ತು ಷೋಡಶ" ಎನ್ನುವುದು ಮೊದಲನೆಯದರ ನಂತರದ ಮತ್ತೊಂದು ವಾಕ್ಯ. ಮೊದಲನೆ ಪಾದದ ಮೊದಲನೆ ವಾಕ್ಯವು, ಎರಡನೇ ಪಾದದ ಎರಡನೆ ವಾಕ್ಯವು; ಮೂರನೇ ಪಾದದ ಮೂರನೇ ವಾಕ್ಯವು ಎರಡು ಶ್ಲೋಕಗಳಲ್ಲಿಯೂ ಇವೆ.

ಷಟ್ಪಂಚಘಟಿಕಾವೃದ್ಧಿರತಿವೃದ್ಧಿರಿಹೋಚ್ಯತೇ || ೪೪ ||
ಏಕದ್ವಿತ್ರ್ಯಾತ್ಮಿಕಾ ವೃದ್ಧಿಃ ಸಮವೃದ್ಧಿರಿತಿ ಸ್ಮೃತಾ |

ಆರು, ಐದು ಘಳಿಗೆಗಳ ವೃದ್ಧಿಯು ಅತಿವೃದ್ಧಿಯೆಂದೂ, ಒಂದು ಎರಡು, ಮೂರು ಘಳಿಗೆಗಳ ವೃದ್ಧಿಯು ಸಮವೃದ್ಧಿಯೆಂದೂ ಪರಿಗಣಿತವಾಗಿದೆ.

ಟಿಪ್ಪಣಿ :- ತಿಥಿಗಳ ವೃದ್ಧಿಯು ಸಮವೃದ್ಧಿ ಪಕ್ಷದಲ್ಲಿ ಒಂದು, ಎರಡು, ಮೂರು ಘಳಿಗೆಗಳೆಂತಲೂ, ಅತಿ ವೃದ್ಧಿ ಪಕ್ಷದಲ್ಲಿ ಐದು ಮತ್ತು ಆರು ಘಳಿಗೆಗಳೆಂತಲೂ, ನಿರ್ದಿಷ್ಟವಾಗಿ ಸಂಖ್ಯೆಯನ್ನೇ ತಿಳಿಸಿರುವುದರಿಂದ, ಇದಕ್ಕಿಂತ ಅಧಿಕವಾಗಿ ಬರುವ ದೃಕ್ಸಿದ್ಧಾಂತ ಪ್ರಕಾರ ಸಾಧಿಸಿದ ತಿಥಿಗಳು ಕರ್ಮಾರ್ಹ ವಲ್ಲವೆಂದೂ ಅಗ್ರಾಹ್ಯವೆಂದೂ ತಿಳಿಯುತ್ತದೆ.

ಚತುಷ್ಕಾನ್ಮೂಲವಾಕ್ಯೋಕ್ತ ಘಟಿಕಾನಾಂ ಚತುಷ್ಟಯಾತ್ || ೪೫ ||
ಉತ್ತರಂ ಪೂರ್ವಕಾಲೇ ತು ಜ್ಞೇಯೇತ್ಥಂ ದಶಮೀ ತಿಥಿಃ |

ಚತುಸ್ರೋ ಘಟಿಕಾಃ ಎಂದು ಮೂಲವಾಕ್ಯದಲ್ಲಿ ಹೇಳಿರುವ ನಾಲ್ಕು ಘಳಿಗೆಗಳಿಗೆ ಪೂರ್ವಕಾಲದಲ್ಲಿ ದಶಮಿ ತಿಥಿಯು ಎಷ್ಟಿರಬೇಕೆಂಬುದನ್ನು ಮುಂದೆ ಹೇಳಿದಂತೆ ತಿಳಿಯಬೇಕು.

ಅತಿವೃದ್ಧ್ಯಾ ನ ಚೇತ್ಸಾಮ್ಯವೃದ್ಧ್ಯಾ ತದ್ವೇಧ ವರ್ಜಿತಾ || ೪೬ ||
ಘಟಿಕೈಕಾ ಯದಿ ಭವೇಚ್ಛುದ್ಧಾ ಸಾ ಸಕಲಾ ತಿಥಿಃ |

ಅತಿವೃದ್ಧಿಯಿಲ್ಲದಿರುವಾಗ, ಸಾಮ್ಯವೃದ್ಧಿಯಿರುವಾಗ (4ಘಳಿಗೆಗಳ ಹಿಂದಿನ) ಒಂದು ಘಳಿಗೆಯು (56ನೇ ಘಳಿಗೆಯು) ದಶಮೀ ವೇಧ ರಹಿತವಾಗಿದ್ದರೆ, ಆ (ಏಕಾದಶಿ) ತಿಥಿಯು ಶುದ್ಧವಾಗಿರುತ್ತದೆ.

ಟಿಪ್ಪಣಿ:- ದಶಮಿ ತಿಥಿಯು ಸೂರ್ಯೋದಯದಿಂದ 55 ಘಳಿಗೆ ಮಾತ್ರ (ಸಮವೃದ್ಧಿ ಪಕ್ಷದಲ್ಲಿ) ಇದ್ದರೆ, ಏಕಾದಶಿ ತಿಥಿಯು ಶುದ್ಧವಾಗಿರುತ್ತದೆ.

ಲಿಪ್ತಿರ್ವಿಘಟಿಕಾಃ ಪಂಚ ಲಿಪ್ತಯೋ ದ್ವಾದಶೈವ ತು || ೪೭ ||
ಘಟಿಕೈಕೇತಿ ವಿಜ್ಞೇಯಾ ಜ್ಯೋತಿಃಶಾಸ್ತ್ರ ಪ್ರಮಾಣತಃ |

ಜ್ಯೋತಿಶಾಸ್ತ್ರದ ಪ್ರಕಾರ ಒಂದು ಲಿಪ್ತಿ ಎಂದರೆ ಐದು ವಿಘಳಿಗೆಗಳು. ಆದ್ದರಿಂದ ಹನ್ನೆರಡು ಲಿಪ್ತಿಗಳಿಗೆ ಒಂದು ಘಳಿಗೆ ಎಂದು ತಿಳಿಯಬೇಕು.

ಪಂಚಾಶದುತ್ತರಾ ಷಷ್ಟಿಃ ಘಟಿಕೈಕಾಽಥ ಲಿಪ್ತಯಃ || ೪೮ ||
ಚತಸ್ರಃ ಪಂಚಮೀ ಪ್ರಾಂತ ಭಾಗಾತ್ಮಕತಯಾ ಸ್ಥಿತಾಃ |

ಏವಂ ಷೋಡಶ ಪೂರ್ವೋಕ್ತಾ ದಶಮೀ ವೇಧವರ್ಜಿತಾಃ || ೪೯ ||
ಯದಿ ಸ್ಯುರ್ಲಿಪ್ತಯಸ್ತರ್ಹಿ ಶುದ್ಧಾ ಸಾ ಸಕಲಾ ತಿಥಿಃ |

(ಸೂರ್ಯೋದಯದಿಂದ) 50 ಘಳಿಗೆ ನಂತರದ 60 ಲಿಪ್ತಿಗಳ (5 ಘಳಿಗೆಗಳ) ಅನಂತರದ ಒಂದು ಘಳಿಗೆ (56ನೇ ಘಳಿಗೆಯು) (ಸೂರ್ಯೋದಯದ ಪೂರ್ವದ) ಐದನೆಯ (ಘಳಿಗೆ) ಭಾಗವಾಗಿರುತ್ತದೆ. ಮತ್ತು 55ನೇ ಘಳಿಗೆಯ ಕೊನೆಯ ನಾಲ್ಕು ಲಿಪ್ತಿಗಳು (20 ವಿಘಳಿಗೆಗಳು) ಒಟ್ಟು 16 ಲಿಪ್ತಿಗಳು, ಅತಿವೃದ್ಧಿ ಪಕ್ಷದಲ್ಲಿ ದಶಮೀ ವೇಧ ವರ್ಜಿತವಾಗಿದ್ದರೆ, ಆ ಏಕಾದಶಿ ತಿಥಿಯು ಶುದ್ಧವಾಗಿರುತ್ತದೆ.

ಟಿಪ್ಪಣಿ:- ಅತಿವೃದ್ಧಿಯಲ್ಲಿ ಸೂರ್ಯೋದಯದಿಂದ 54 ಘಳಿಗೆ 40 ವಿಘಳಿಗೆ ಮಾತ್ರ ದಶಮೀ ತಿಥಿಯಿದ್ದರೆ ದಶಮೀ ವೇಧ ವರ್ಜಿತವಾಗಿ, ಏಕಾದಶಿ ತಿಥಿಯು ಶುದ್ಧವಾಗಿರುತ್ತದೆ.

ಸಮೇ ದ್ವಿಲಿಪ್ತಿಕಾ ಮಾತ್ರಂ ಹ್ರಾಸೇ ತ್ವೇಕೈವ ಸಾ ಮತಾ || ೫೦ ||
ಚತುಷ್ಕಾದುತ್ತರಂ ತ್ವೇತದ್ದಶಮೀ ವೇಧವರ್ಜನಮ್ |

ಸಮಪಕ್ಷದಲ್ಲಿ ನಾಲ್ಕು ಘಳಿಗೆಗಳ ಹಿಂದಿನ ಎರಡು ಲಿಪ್ತಿಗಳು (= 10ವಿಘಳಿಗೆ), ಹ್ರಾಸ ಪಕ್ಷದಲ್ಲಿ ನಾಲ್ಕು ಘಳಿಗೆಗಳ ಹಿಂದಿನ ಒಂದು ಲಿಪ್ತಿ (= 5 ವಿಘಳಿಗೆ) ದಶಮೀ ವೇಧ ವರ್ಜಿತರಾಗಿರಬೇಕು. (ಹಾಗಿದ್ದರೆ ಆ ಏಕಾದಶಿಯು ಶುದ್ಧವಾಗಿರುತ್ತದೆ).

ಟಿಪ್ಪಣಿ:- ಸಮಪಕ್ಷದಲ್ಲಿ ದಶಮಿಯು ಸೂರ್ಯೋದಯದಿಂದ 55 ಘಳಿಗೆ 50 ವಿಘಳಿಗೆ ಮತ್ತು ಹ್ರಾಸ ಪಕ್ಷದಲ್ಲಿ ದಶಮಿಯು ಸೂರ್ಯೋದಯದಿಂದ 55 ಘಳಿಗೆ 55 ವಿಘಳಿಗೆ ವರೆಗಿದ್ದರೆ, ಏಕಾದಶಿಯು ವೇದ ರಹಿತವಾಗಿ ಶುದ್ಧವಾಗಿರುತ್ತದೆ.

ಮಹಾಹ್ರಾಸೇಽಧಿಕಾ ಶುದ್ಧಿರಲ್ಪಹ್ರಾಸೇ ತು ವಿದ್ಧತಾ || ೫೧ ||
ಅಪಿ ಸ್ಯಾದಿತಿ ಸಾ ಶಂಕಾ ಲಿಪ್ತಿಮಾತ್ರಮಶೋಧಯತ್ |

ಮಹಾಹ್ರಾಸದಲ್ಲಿ ಅಧಿಕ ಶುದ್ಧಿಯಿರುತ್ತದೆ. (ಅಂದರೆ ವೇಧದ ಪ್ರಸಂಗವೇ ಇಲ್ಲ) ಅಲ್ಪ ಹ್ರಾಸದಲ್ಲಿ ಮಾತ್ರ ವೇಧದ ಶಂಕೆಯಿರುತ್ತದೆ. ಆ ವೇಧ ಕಾಲವು ಒಂದು ಲಿಪ್ತಿ (= 5 ವಿಘಳಿಗೆ) ಮಾತ್ರ.

ಟಿಪ್ಪಣಿ :- ಅತಿಕ್ಷಯ ಪಕ್ಷದಲ್ಲಿ ವೇಧವು ಇರುವುದಿಲ್ಲವಾದ್ದರಿಂದ ವೇಧ

ಶೋಧನೆಯನ್ನು ಹೇಳಿಲ್ಲ. ಅಲ್ಪ ಹ್ರಾಸದಲ್ಲಿ, ವೇಧವು ಇರಬಹುದೆಂಬ ಶಂಕೆಯಿಂದ ಒಂದು ಲಿಪ್ತಿಯ ವೇಧದ ಪರಿಹಾರವನ್ನು ಹೇಳಲಾಗಿದೆ.

ಏವಂ ಸತಿ ತದಾಽಪ್ಯುಕ್ತಾ ಲಿಪ್ತಿರೇಕಾ ಪರಾಽಪಿ ಚ || ೫೨ ||
ಹ್ರಾಸತ್ವಾವಗತೇರಸ್ಯಾಃ ಸಾಮ್ಯಪಕ್ಷೋಪಮ್ಯೈವ ಹಿ |

ಹೀಗಿರಲು, ಸಾಮ್ಯ ಪಕ್ಷದಲ್ಲಿ ಇನ್ನೂ ಒಂದು ಹೆಚ್ಚಿನ ಲಿಪ್ತಿ (ಅಂದರೆ ಎರಡು ಲಿಪ್ತಿ) ವೇಧವನ್ನು ಹೇಳಲಾಗಿದೆ. ವೇಧಾಶಂಕಾ ವಿಷಯದಲ್ಲಿ ಹ್ರಾಸ ಪಕ್ಷಕ್ಕೆ ಸಮಪಕ್ಷದ ಹೋಲಿಕೆಯಿದೆ.

ಅತಿವೃದ್ಧಾವಷ್ಟಯುಗಮಷ್ಟದ್ವಂದ್ವಂ ಹಿ ಷೋಡಶ || ೫೩ ||
ಲಿಪ್ತಯೋ ವೇಧಹೀನಾಃ ಸ್ಯುರ್ವೃದ್ಧೌ ಸತ್ಯಾಂ ಸಮೇ ದಿನೇ |
ಸತಿ ಸಾಮ್ಯೇ ನ ವೃದ್ಧಿಶ್ಚೇದಿತಿ ಯಾವತ್ತದಷ್ಟಕಮ್ || ೫೪ ||
ಚತುಷ್ಟಯಂ ಚ ಲಿಪ್ತಿನಾಮೇವಂ ದ್ವಾದಶ ಲಿಪ್ತಯಃ |
ಘಟಿಕೈಕಾ ಭವೇತ್ಸರ್ವಾ ದಶಮೀ ವೇಧವರ್ಜಿತಾ || ೫೫ ||
ಅನ್ಯತ್ಸ್ಪಷ್ಟಂ ಲಿಪ್ತಿಮಾತ್ರಾಶ್ರಯಾ ಚ್ಛ್ಲೋಕೋಽಯಮುತ್ತರಃ |

ಅತಿವೃದ್ಧಿ ಪಕ್ಷದಲ್ಲಿ ಅಷ್ಟಯುಗ = ಅಷ್ಟದ್ವಂದ್ವಂ = ಹದಿನಾರು ಲಿಪ್ತಿಗಳು (ಅಂದರೆ 1 ಘಳಿಗೆ 20 ವಿಘಳಿಗೆ) ವೇಧ ರಹಿತವಾಗಿರಬೇಕು. ಅತಿವೃದ್ಧಿಯಿಲ್ಲದೆ ಸಮವೃದ್ಧಿಯಿರುವಾಗ, ಅಷ್ಟಕಂ ಚತುಷ್ಟಯಂ = ಹನ್ನೆರಡು ಲಿಪ್ತಿಗಳು (ಅಂದರೆ 60 ವಿಘಳಿಗೆ = 1 ಘಳಿಗೆ) ವೇಧ ವರ್ಜಿತವಾಗಿರಬೇಕು. ಶ್ಲೋಕದ ಉಳಿದ ಭಾಗ ಸಮಪಕ್ಷದಲ್ಲಿ 2 ಲಿಪ್ತಿಗಳು. ಹ್ರಾಸ ಪಕ್ಷದಲ್ಲಿ 1 ಲಿಪ್ತಿ ಮಾತ್ರ ವೇಧ ರಹಿತವಾಗಿರಬೇಕೆನ್ನುವುದು ಸ್ಪಷ್ಟವಾಗಿದೆ. "ಏಕಾತಿ ದ್ವಾದಶೀ ವೃದ್ಧಾ" ಇತ್ಯಾದಿ ಎರಡು ಶ್ಲೋಕಗಳ ಪೈಕಿ ಒಂದನೇ ಶ್ಲೋಕವು ಘಳಿಗೆ, ಲಿಪ್ತಿಗಳನ್ನೂ, ಎರಡನೇ ಶ್ಲೋಕವು ಕೇವಲ ಲಿಪ್ತಿಗಳನ್ನೊಳಗೊಂಡಿದೆ.

ಟಿಪ್ಪಣಿ:-

ಅತ್ಯಂತ ವೃದ್ಧಿ ಪಕ್ಷದಲ್ಲಿ - ದಶಮೀ ತಿಥಿಯು ಸೂರ್ಯೋದಯದಿಂದ 54 ಘ. 40 ವಿಘಳಿಗೆಯಿದ್ದರೆ, ಏಕಾದಶಿ ಶುದ್ಧ.

ಸಮ ವೃದ್ಧಿ ಪಕ್ಷದಲ್ಲಿ - ದಶಮೀ ತಿಥಿಯು ಸೂರ್ಯೋದಯದಿಂದ 55 ಘಳಿಗೆಯಿದ್ದರೆ ಏಕಾದಶಿ ಶುದ್ಧ.

ಸಮ ಪಕ್ಷದಲ್ಲಿ - ದಶಮೀ ತಿಥಿಯು ಸೂರ್ಯೋದಯದಿಂದ 55 ಘಳಿಗೆ 50 ವಿಘಳಿಗೆಯಿದ್ದರೆ, ಏಕಾದಶಿ ಶುದ್ಧ.

ಹ್ರಾಸ ಪಕ್ಷದಲ್ಲಿ - ದಶಮೀ ತಿಥಿಯು ಸೂರ್ಯೋದಯದಿಂದ 55 ಘಳಿಗೆ 55 ವಿಘಳಿಗೆಯಿದ್ದರೆ ಏಕಾದಶಿ ಶುದ್ಧ.

ಇತಿ ಶ್ರೀಮಧ್ವಕೃಪಯಾ ಹಯಗ್ರೀವಸ್ಯ ಕಿಂಕರಃ || ೫೬ ||
ಏಕಾದಶೀಂ ನಿರ್ಣಾಯ ವಾದಿರಾಜೋ ಯತಿಃ ಸ್ಫುಟಮ್ ||

ಹಯಗ್ರೀವ ದೇವರ ದಾಸರಾದ ವಾದಿರಾಜ ಯತಿಗಳು ಶ್ರೀಮಧ್ವರ ಕೃಪೆಯಿಂದ ಏಕಾದಶೀ ತಿಥಿಯನ್ನು ಸ್ಫುಟವಾಗಿ ನಿರ್ಣಯಿಸಿದರು.

|| ಶ್ರೀಃ ||


|| ವಿಜಯತಾಂ ಶ್ರೀ ಸಹಸ್ರಕಿರಣಃ ||

ಅಖಿಲ ಕರ್ನಾಟಕ ಜ್ಯೌತಿಷಿಕ

ಚತುರ್ಥ ಮಹಾ ಸಮ್ಮೇಳನದ

ವರದಿ

12-2-1952



ಕರ್ನಾಟಕ ಜ್ಯೌತಿಷಿಕ ಚತುರ್ಥ ಮಹಾಸಮ್ಮೇಳನ ಉಡುಪಿ, ತಾ. 10-2-1952.

|| ಶ್ರೀಃ ||

|| ವಿಜಯತಾಂ ಶ್ರೀ ಸಹಸ್ರಕಿರಣಃ ||

'ಅಖಿಲ ಕರ್ನಾಟಕ ಜ್ಯೌತಿಷಿಕ ಸಂಘ', ಶಿವಮೊಗ್ಗಾ.

ವರದಿ

ಸಂಘದ ಕಾರ್ಯದರ್ಶಿಗಳಾದ, ಸಿ. ಲಿಂಗಾಚೊಯ್ಸರು ಉಡುಪಿಗೆ ಹೋಗಿ ಅಲ್ಲಿ ಅಷ್ಟಮಠದ ಶ್ರೀಪಾದಂಗಳವರನ್ನು ಸಂದರ್ಶಿಸಿ ಸಂಘದ ಉದ್ದೇಶಗಳನ್ನೂ ೪ನೇ ಸಮ್ಮೇಳನವನ್ನು ಮಾಡುವ ಅಗತ್ಯವನ್ನೂ ವಿಜ್ಞಾಪಿಸಿಕೊಂಡು ಅವರ ಸಮ್ಮತಿಯನ್ನೂ ಅನುಗ್ರಹವನ್ನೂ ಪಡೆಯಲಾಗಿ ಅಲ್ಲಿ ೪ನೇ ಸಮ್ಮೇಳನಕ್ಕೋಸ್ಕರ ಸ್ವಾಗತ ಸಮಿತಿಯು ಏರ್ಪಟ್ಟಿತು.

ಸ್ವಾಗತ ಸಮಿತಿ.

ಪ್ರಕೃತ ನಮ್ಮ ಪ್ರಾಂತ್ಯದಲ್ಲಿ ಪ್ರಕಟವಾಗುತ್ತಿರುವ ಅನೇಕ ಪಂಚಾಂಗಗಳಲ್ಲಿ ಭಿನ್ನ ಭಿನ್ನ ಗಣಿತಕ್ರಮವನ್ನನುಸರಿಸುವುದರಿಂದ ಉಂಟಾಗುತ್ತಿರುವ ವ್ಯತ್ಯಾಸದಿಂದ ಸನಾತನ ಧಾರ್ಮಿಕ ಸತ್ಕರ್ಮಾನುಷ್ಠಾನ ಪರಾಯಣರಾದ ಧಾರ್ಮಿಕ ಜನರಿಗೆ ನಾನಾ ಸಂಶಯಗಳು ತಲೆದೋರಿ ಯಾವ ಪಂಚಾಂಗವು ಸರಿ; ಯಾವದು ಸರಿಯಲ್ಲ; ಯಾವ ಪಂಚಾಂಗಾನುಸಾರ ನಾವು ಧಾರ್ಮಿಕ ಕರ್ಮಗಳನ್ನಾಚರಿಸಬೇಕೆಂಬ ಕಳವಳ ವುಂಟಾದುದರಿಂದ ಇದರ ನಿರ್ಣಯದ ಬಗ್ಗೆ ಅನೇಕರು ಧರ್ಮ ಪೀಠಾಧಿಪತಿಗಳನ್ನು ವಿಜ್ಞಾಪಿಸಿಕೊಂಡದ್ದರಿಂದ ಇದರ ಸರಿಯಾದ ವ್ಯವಸ್ಥೆಯ ಬಗ್ಗೆ, ಈ ಮೊದಲು ಶಿವಮೊಗ್ಗೆಯಲ್ಲಿ ಸ್ಥಾಪಿತವಾದ "ಅಖಿಲ ಕರ್ನಾಟಕ ಜ್ಯೌತಿಷಿಕ ಸಂಘ"ದ ಕಾರ್ಯದರ್ಶಿಗಳಾದ ಜ್ಯೋತಿಶ್ಶಾಸ್ತ್ರ ವಿಶಾರದ, ದೈವಜ್ಞಾವತಂಸ ಶ್ರೀಮಾನ್ ಸಿ. ಲಿಂಗಾಚೋಯ್ಸರು ಇಲ್ಲಿಗೆ ಆಗಮಿಸಿ "ಅಖಿಲ ಕರ್ನಾಟಕ ಜ್ಯೌತಿಷಿಕ ಚತುರ್ಥ ಮಹಾ ಸಮ್ಮೇಳನ"ವನ್ನು ಶ್ರೀ ಉಡುಪಿ ಕ್ಷೇತ್ರದಲ್ಲಿ ನಡೆಯಿಸಬೇಕಾಗಿ ಅಷ್ಟಮಠದ ಶ್ರೀಪಾದಂಗಳವರಲ್ಲಿಯೂ ಇತರ ಅನೇಕ ಧಾರ್ಮಿಕ ಮಹಾಜನರಲ್ಲಿಯೂ

ವಿಜ್ಞಾಪಿಸಿಕೊಂಡ ಪ್ರಕಾರ ಸದರೀ ಸಮ್ಮೇಳನವನ್ನು ಇದೇ ಖರನಾಮ ಸಂವತ್ಸರದ ಮಾಘ ಶುದ್ಧ ೧೨ ಗುರುವಾರ ಮೊದಲುಗೊಂಡು ಮಾಘ ಶುದ್ಧ ೧೪ ಶನಿವಾರದ ವರೆಗೆ (ತಾ. 7-2-1952ರಿಂದ9-2-52ರ ವರೆಗೆ) ಜರಗಿಸಬೇಕಾಗಿ ನಿರ್ಣಯಿಸಿ, ಈ ಕೆಳಗೆ ಕಂಡಂತೆ ಸ್ವಾಗತ ಸಮಿತಿಯನ್ನೇರ್ಪಡಿಸಲಾಯಿತು.

ಸ್ವಾಗತಸಮಿತಿಯ ರಚನೆ

ಅಧ್ಯಕ್ಷರು : ಶ್ರೀಮಾನ್ ಯಂ. ನಾರಾಯಣಾಚಾರ್ಯರು
ಜನರಲ್ ಏಜಂಟ್, ಪೇಜಾವರ ಮಠ.

ಉಪಾಧ್ಯಕ್ಷರು : ಶ್ರೀಮಾನ್ ಕೆ.ಎಸ್. ಐತಾಳರು, ಜನರಲ್ ಏಜಂಟ್,
ಶೀರೂರು ಮಠ.

ಕಾರ್ಯದರ್ಶಿಗಳು : " ಜ್ಯೋತಿಷ ವಿದ್ವಾನ್ ಅಡ್ಡೆ ಸುಬ್ರಹ್ಮಣ್ಯಾಚಾರ್ಯರು.
" " ಕಾಪು ಕೃಷ್ಣಾಚಾರ್ಯರು.

ಸದಸ್ಯರು :
1 ಶ್ರೀಮಾನ್ ಯು. ಶ್ರೀನಿವಾಸ ಉಪಾಧ್ಯಾಯರು
2 " ಬಿ. ಶ್ರೀನಿವಾಸ ಭಟ್ಟರು
3 " ಭಂ. ನಾರಾಯಣಾಚಾರ್ಯರು
4 " ಯು. ವೆಂಕಟರಮಣಾಚಾರ್ಯರು
5 " ಕಲ್ಮಂಜೆ ವ್ಯಾಸಾಚಾರ್ಯರು
6 " ಕೌಲಗಿ ಶೇಷಾಚಾರ್ಯರು
7 " ವೆಂಕಟರಮಣಾಚಾರ್ಯರು
M.G.M. College, ಉಡುಪಿ
8 " ಪೇಜಾವರ ಸೀತಾರಾಮಾಚಾರ್ಯರು
9 " ಎ.ಕೆ. ರಾಮಕೃಷ್ಣ ಆಚಾರ್ಯರು
10 " ನರಸಿಂಹ ಉಪಾಧ್ಯಾಯರು

ನಮ್ಮೆಲ್ಲರ ಪ್ರಾರ್ಥನೆಯನ್ನಂಗೀಕರಿಸಿ ಈ "ಅಖಿಲ ಕರ್ಣಾಟಕ ಜ್ಯೌತಿಷಿಕ ಚತುರ್ಥ ಮಹಾಸಮ್ಮೇಳನ"ಕ್ಕೆ ಬರತಕ್ಕ ಅತಿಥಿಗಳಿಗೆ ಭೋಜನಾದಿ ಸೌಕರ್ಯವನ್ನೊದಗಿಸಲು ಪರ್ಯಾಯ ಪೀಠಾಧಿಪತಿಗಳಾದ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ದಯವಿಟ್ಟು ಒಪ್ಪಿಗೆಯನ್ನಿತ್ತಿದ್ದಾರೆ.

ಮೇಲ್ಕಂಡ ಮಹಾಸಮ್ಮೇಳನವು ಯಶಸ್ವಿಯಾಗಿ ನಡೆಯುವುದಕ್ಕೋಸ್ಕರ ಸ್ವಾಗತಸಮಿತಿಯು ಕಾರ್ಯನಿರ್ವಾಹಕ ಸಮಿತಿಯನ್ನೇರ್ಪಡಿಸಿಕೊಳ್ಳತಕ್ಕದ್ದು.

ತಾ. 13-1-1952 ಎಂ. ನಾರಾಯಣಾಚಾರ್ಯ

ಉಡುಪಿ ಜನರಲ್ ಏಜಂಟ್

ಶ್ರೀ ಪೇಜಾವರ ಮಠ

ಸ್ವಾಗತಸಮಿತಿಯ ಅಧ್ಯಕ್ಷ

ಬಳಿಕ ಶ್ರೀಮಾನ್ ಸಿ. ಲಿಂಗಾಚೋಯ್ಸರು ತಾವು ಉಡುಪಿಗೆ ಹೋಗಿ ಅಲ್ಲಿ ಸಮ್ಮೇಳನವನ್ನು ನಡೆಯಿಸುವಂತೆ ಏರ್ಪಡಿಸಿ ಶಿವಮೊಗ್ಗಕ್ಕೆ ಆಗಮಿಸಿ "ಅಖಿಲ ಕರ್ಣಾಟಕ ಜ್ಯೌತಿಷಿಕ ಸಂಘ"ಕ್ಕೆ ಉಡುಪಿಯ ಸಮಾಚಾರವನ್ನೆಲ್ಲಾ ಅರುಹಲು, ಉಡುಪಿಯಲ್ಲಿ ನಡೆಯಲಿರುವ ಮಹಾ ಸಮ್ಮೇಳನಕ್ಕೆ ಸಂಘದ ವತಿಯಿಂದ ನಿರ್ಮಿಸಿದ ಯಂತ್ರೋಪಕರಣಗಳನ್ನು ತೆಗೆದುಕೊಂಡು ಹೋಗಬೇಕೆಂದು ಸಂಘದಲ್ಲಿ ತೀರ್ಮಾನವಾಯಿತು. ತಾ. 18-1-1952

ಸ್ವಾಗತಸಮಿತಿಯವರು ಉಡುಪಿಯಲ್ಲಿ ಶ್ರೀಕೃಷ್ಣ ಮಠದ ವಸಂತ ಮಹಲಿನಲ್ಲಿ ಜ್ಯೋತಿಷ ಸಮ್ಮೇಳನವನ್ನು ಮಾಡಲು ಅವಕಾಶ ಕೊಡಬೇಕೆಂದು ಶ್ರೀ ಪರ್ಯಾಯ ಪೀಠಾಧಿಪತಿಗಳಾದ ಶ್ರೀ ಪೇಜಾವರ ಮಠಾಧೀಶ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರನ್ನು ಪ್ರಾರ್ಥಿಸಿ ಅವರ ಅಪ್ಪಣೆಯನ್ನು ಪಡೆದು, ಸ್ವಾಗತಸಮಿತಿ ಸದಸ್ಯರ ಸರ್ವಾನುಮತಿಯಿಂದ ಕರ್ಣಾಟಕ ಜ್ಯೋತಿರ್ವಿದರಿಗೂ ಮಹಾನುಭಾವರಿಗೂ ಆಹ್ವಾನ ಪತ್ರಿಕೆಯನ್ನು ಕಳುಹಿಸಬೇಕೆಂದು ತೀರ್ಮಾನವಾದಂತೆ ಆಹ್ವಾನಪತ್ರಿಕೆಯನ್ನು ಅಚ್ಚುಮಾಡಿಸಿ ಸಮಿತಿಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಸ್ವಾಗತ ಸಮಿತಿಯ ಕಾರ್ಯದರ್ಶಿಗಳಾದ ಶ್ರೀಮಾನ್ ಜ್ಯೋತಿರ್ವಿದ್ವಾನ್ ಕಾಪು ಕೃಷ್ಣಾಚಾರ್ಯರವರು ಶ್ರೀಮಾನ್ ಜ್ಯೋತಿಷವಿದ್ವಾನ್ ಅಡ್ಡೆ ಸುಬ್ರಹ್ಮಣ್ಯಾಚಾರ್ಯರೊಡನೆ ಸಹಕರಿಸಿ ಆಹ್ವಾನ ಪತ್ರಿಕೆಗಳನ್ನು ಸರ್ವರಿಗೂ ಕಳುಹಿಸಿದರು. ಟಪ್ಪಾಲು ಮೂಲಕ

ಕಳುಹಿಸಿದ್ದಲ್ಲದೆ ಸಂಯುಕ್ತ ಕರ್ಣಾಟಕವೆಂಬ ವೃತ್ತ ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು.

ಸ್ವಾಗತಸಮಿತಿಯವರ ಆಹ್ವಾನವನ್ನು ಮನ್ನಿಸಿ ಈ ಮಹಾ ಸಮ್ಮೇಳನಕ್ಕೆ ಕರ್ಣಾಟಕದ ಕೆಲವು ಮುಖ್ಯ ಭಾಗಗಳಿಂದ ಪಂಡಿತರು ದಯಮಾಡಿಸಿದ್ದರು. ಕೆಲವು ಜನಮಾತ್ರ ಬಂದಿದ್ದರೂ ಅವರೆಲ್ಲರೂ ಗಣಿತ, ಗೋಲ, ಧರ್ಮಶಾಸ್ತ್ರ, ಪಾಶ್ಚಾತ್ಯಗಣಿತ ಇವುಗಳನ್ನು ತಿಳಿದವರಾಗಿದ್ದರು. ಅನೇಕ ಜನ ದೃಗ್ಗಾದಿಗಳೂ ಸಿದ್ಧಾಂತಾಭಿಮಾನಿಗಳೂ ದಯಮಾಡಿಸಿದ್ದರು.

ತಾ. 7-2-1952ನೇ ದಿನ ಬೆಳಿಗ್ಗೆ (ಕಾರ್ಯಕ್ರಮದಲ್ಲಿ ಕಂಡಂತೆ) ಕ್ಲಪ್ತ ಕಾಲದಲ್ಲಿ ಶ್ರೀ ಕೃಷ್ಣ ಮಠದಿಂದ ವಾದ್ಯವೈಭವದೊಂದಿಗೆ ಉಡುಪಿ ಶ್ರೀ ಶ್ರೀಮಠಗಳ ಶ್ರೀಪಾದಂಗಳವರು ವಿದ್ವಜ್ಜನರೊಡಗೂಡಿ ಮುಖ್ಯ ಶ್ರೇಣಿಗಳಲ್ಲಿ ಮೆರವಣಿಗೆಯಿಂದ ಶ್ರೀ ಕೃಷ್ಣ ಮಠದ ವಸಂತ ಮಹಲಿನಲ್ಲಿ ಏರ್ಪಡಿಸಿದ್ದ ಸಭಾಮಂಟಪಕ್ಕೆ ಪುರಪ್ರಮುಖರೊಡನೆ ದಯಮಾಡಿಸಲ್ಪಟ್ಟರು.

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯತ್ವಾದ್ಯನೇಕ ಗುಣಗಣ ವಿಭೂಷಿತರಾದ ಶ್ರೀ ಭಂಡಾರಿಕೇರೀ ಮಠಾಧೀಶ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದಂಗಳವರು ಸರ್ವಮಹನೀಯರ ಹಾಗೂ ಪಂಡಿತೋತ್ತಮರ ಪ್ರಾರ್ಥನೆ ಯಂತೆ ಈ "ಅಖಿಲ ಕರ್ಣಾಟಕ ಜ್ಯೌತಿಷಿಕ ಚತುರ್ಥ ಮಹಾ ಸಮ್ಮೇಳನ"ದ ಅಧ್ಯಕ್ಷತೆಯನ್ನು ವಹಿಸಿದರು.

ಶ್ರೀದೇವತಾ ಪ್ರಾರ್ಥನಾನಂತರ ಶ್ರೀಮತ್ಪೂಜ್ಯ ಶ್ರೀ ಭೀಮನಕಟ್ಟೆ ಮಠಾಧೀಶ ಶ್ರೀ ಶ್ರೀಪಾದಂಗಳವರು ಉದ್ಘಾಟನ ಭಾಷಣವನ್ನು ಅಚ್ಚುಕಟ್ಟಾಗಿಯೂ ರಸವತ್ತಾಗಿಯೂ ಇರುವಂತೆ ಹೇಳುತ್ತ ಸಮ್ಮೇಳನವನ್ನು ಉದ್ಘಾಟಿಸಿದರು.

ಈ ಸಮ್ಮೇಳನಕ್ಕೆ ಬರಲು ಆಗದಿದ್ದವರು ಶುಭಸಂದೇಶವನ್ನು ಕಳುಹಿಸಿದ್ದಾರೆ.

೧ ಶ್ರೀಮಾನ್. ಜ್ಯೋತಿಷರತ್ನಂ, ಸಂಸ್ಥಾನ ಧರ್ಮಾಧಿಕಾರೀ, ಕರೂರು ಶೇಷಾಚಾರ್ಯರು, ಮೈಸೂರು.

೨ " ವಿದ್ವಾನ್ ಕೆ. ಶೇಷ ಶಾಸ್ತ್ರಿಗಳು, ಆಚಾರ ವಿಚಾರ ಧರ್ಮಾ ಧಿಕಾರಿಗಳು, ಶೃಂಗೇರಿ.

೩ ಶ್ರೀಮಾನ್ ವಿದ್ವಾನ್, ಬಾಲಚಂದ್ರಶಾಸ್ತ್ರಿಗಳು, ಸಂಸ್ಕೃತ ಪಾಠಶಾಲಾಧ್ಯಾಪಕರು, ಧಾರವಾಡ

೪ " ಸ್ಥಾ. ಸಂಪತ್ಕುಮಾರಾಚಾರ್, ಶ್ರೀ ಮಠದ ಕಾರ್ಯಕರ್ತರು ಮೇಲ್ಕೋಟೆ.

೫ " ದೈವಜ್ಞಶಿಖಾಮಣಿ, ಆಸ್ಥಾನ ಮಹಾ ವಿದ್ವಾನ್ ಸಂಪತ್ಕೃಷ್ಣ ಜೋಶ್ಯರ್, ಮೈಸೂರು.

೬ " ಕೇಶವ ಲಕ್ಷ್ಮಣ ದಪ್ತರಿ, ಮಹಾಲ್ ನಾಗಪೂರ.

೭ " ಕೆ. ಚೆಂಗಲರಾಯ ರೆಡ್ಡಿ, ಮುಖ್ಯಮಂತ್ರಿಗಳು, ಮೈಸೂರು.

೮ " ಎಮ್.ಟಿ.ಲಕ್ಷ್ಮಿ ನರಸಿಂಹ ಶಾಸ್ತ್ರಿ, ಎಮ್.ಎ. ಯುನಿವರ್ಸಿಟಿ ಕೌನ್ಸಿಲ್ ಬೆಂಗಳೂರು.

೯ " ಕೆ. ನಂಜುಂಡ ಘನಪಾಠಿಗಳು, ಭದ್ರಾವತಿ.

೧೦ " ಪಂಡಿತ ದ್ವಿವೇದೀ ಎಸ್.ಎಸ್. ಶಾಸ್ತ್ರೀ ಪಾವಂಜೆ (ದ.ಕ.)

(ಉಳಿದ ಹೆಸರುಗಳನ್ನು ಸ್ಥಳ ಸಂಕೋಚದಿಂದ ನಮೂದಿಸಲಿಲ್ಲ)

ಈ ಮಹನೀಯರು ಕಳುಹಿಸಿದ ಶುಭಸಂದೇಶಗಳನ್ನು ಸಭೆಯಲ್ಲಿ ಓದಲಾಯಿತು.

ಬಳಿಕ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀಮಾನ್ ಎಂ. ನಾರಾಯಣಾಚಾರ್ಯರವರು ಸರ್ವರಿಗೂ ಸ್ವಾಗತವನ್ನು ಬಯಸಿ ಸಭಿಕರಿಗೆ ಅಧ್ಯಕ್ಷರ ಪರಿಚಯವನ್ನು ಮಾಡಿಸಿಕೊಟ್ಟು ತಮ್ಮ ಭಾಷಣವನ್ನು ಮಾಡಿದರು. ಅನಂತರ "ಅಖಿಲ ಕರ್ಣಾಟಕ ಜ್ಯೌತಿಷಿಕ ಸಂಘ"ದ ಕಾರ್ಯದರ್ಶಿಗಳಾದ ಸಿ. ಲಿಂಗಾಜೋಯ್ಸರು ತಮ್ಮ ವರದಿಯನ್ನೊಪ್ಪಿಸಿದರು. ತರುವಾಯ ಅಧ್ಯಕ್ಷರ ಭಾಷಣವು ಮುಗಿದ ಮೇಲೆ ಬೆಳಿಗ್ಗೆ ನಡೆಯಿಸಬೇಕಾಗಿದ್ದ ಪ್ರಾರಂಭೋತ್ಸವದ ಕಾರ್ಯಕಲಾಪಗಳು ಮುಗಿದವು.

ಅದೇ ದಿನ ಮಧ್ಯಾಹ್ನ 3 ಘಂಟೆಗೆ ವಿಷಯನಿರ್ಮಾಣ ಸಭೆಯು ಏರ್ಪಟ್ಟಿತು. ಖರಸಂವತ್ಸರದ ಮಾಘಶುದ್ಧ ೧೨ ಗುರುವಾರ.

ವಿಷಯ ನಿಯಾಮಕ ಸಮಿತಿ

ಅಧ್ಯಕ್ಷರು			ಜ್ಯೋತಿಸ್ಸಿದ್ಧಾಂತಕೇಸರಿ, ಉಭಯ ಭಾಷಾ ವಿದ್ವಾನ್, ಆಸ್ಥಾನ ವಿದ್ವಾನ್, ಶ್ರೀಮಜ್ಜಗದ್ಗುರು ಶ್ರೀ ಶೃಂಗೇರೀ ಮಠದ ಪಂಚಾಂಗ ಕರ್ತರು ಶ್ರೀಮಾನ್ ವೆಂಕಟಸುಬ್ಬ ಶಾಸ್ತ್ರಿಗಳು, ಕೊಳ್ಳೆಗಾಲ.
ಸದಸ್ಯರು	1	ಶ್ರೀಮಾನ್	ಮೊಗೇರೀ ಪದ್ಮನಾಭ ಅಡಿಗರು ಸಿದ್ಧಾಂತ ಪಂಚಾಂಗ ಕರ್ತರು
	2	"	ಕೃಷ್ಣ ಬನ್ನಿಂತಾಯರು, ಕರಿಂಕ ದೃಕ್ಪಂಚಾಂಗಕರ್ತರು
	3	"	ಪಿ. ಲಕ್ಷ್ಮೀನಾರಾಯಣ ಅಡಿಗರು ಜ್ಯೋತಿಷ ಶಿರೋಮಣಿ, ಸಂಸ್ಕೃತ ಪಾಠ ಶಾಲಾಧ್ಯಾಪಕರು, ಸಾಲಿಗ್ರಾಮ
	4	"	ಶ್ರೀಪತಿ ನರಸಿಂಹ ಅಡಿಗರು, ಮೊಗೆಬೆಟ್ಟು.
	5	"	ಯು. ಅನಂತಪದ್ಮನಾಭ ಉಪಾಧ್ಯಾಯರು ಉಡುಪಿ ಪಂಚಾಂಗ ಕರ್ತರು, ಉಡುಪಿ
	6	"	ಕೆ. ನರಸಿಂಹ ಉಪಾಧ್ಯಾಯರು, ಜ್ಯೋತಿಷ ಪ್ರಧಾನೋಪಾಧ್ಯಾಪಕರು, ಸಂಸ್ಕೃತ ಪಾಠಶಾಲಾ, ಉಡುಪಿ.
	7	"	ಪಿ.ಕೆ. ರಾಮಕೃಷ್ಣ ಆಚಾರ್ಯರು, ಉಪಾಧ್ಯಾಯರು, ಸಂಸ್ಕೃತಪಾಠಶಾಲಾ, ಉಡುಪಿ.
	8	"	ಪಿ. ಸೀತಾರಾಮಾಚಾರ್ಯರು, ರಿಟ್ಯಾರ್ಡ್ ಕನ್ನಡ ಪಂಡಿತರು, ಪ್ರೆಸಿಡೆನ್ಸಿ ಕಾಲೇಜ್, ಮದರಾಸ್, ಕ್ಯಾಂಪ್-ಪೇಜಾವರ ಮಠ, ಉಡುಪಿ.
	9	"	ಬಿ. ಶ್ರೀನಿವಾಸ ಭಟ್ಟರು, ಸಾಹಿತ್ಯ ಶಿರೋಮಣಿ, ಸಂಸ್ಕೃತ ಪಾಠಶಾಲಾ, ಉಡುಪಿ.

10	ಶ್ರೀಮಾನ್	ಯು. ಶ್ರೀನಿವಾಸ ಉಪಾಧ್ಯಾಯರು, ವಿದ್ವಾನ್, ಫಲಿಮಾರು ಮಠ, ಉಡುಪಿ.
11	"	ಯು. ವಿಠ್ಠಲಾಚಾರ್ಯರು, ಧರ್ಮಪ್ರಕಾಶ ಪ್ರೆಸ್, ಮಂಗಳೂರು(ಉದ್ಯಾವರ)
12	"	ಶ್ರೀಪಾದಕೃಷ್ಣ, ಕಲ್ಯಾಣಪುರ, ಜ್ಯೋತಿಸ್ತತ್ವ ವಿವೇಕ ಗ್ರಂಥಕರ್ತಾ, ಚಿತ್ರಾಪುರ ಮಠ.
13	"	ಕೆ ಎಂ ಮಧ್ಯಸ್ತರು, ಟೀಚರ್, ಬೋರ್ಡ್ ಹೈಸ್ಕೂಲ್, ಉಡುಪಿ.

ಈ ರೀತಿಯಾದ ವಿಷಯ ನಿರ್ಮಾಣ ಸಮಿತಿಯಲ್ಲಿ ನಿಯಮಿತ ನಿರ್ಣೀಯ ವಿಷಯಗಳು.

೧ "ರವೀಂದು ಮಂದ ಸಂಸಿದ್ಧಾತ್ತತ್ತತ್ತಿಥ್ಯಾದಿ ಭೋಗತಃ |
ಸ್ಯಾತಾಂ ತತ್ಕಾಲ ಬೀಜೋತ್ಥಾ ಬಾಣವೃದ್ಧಿರಸಕ್ಷಯೌ ||
ಅತಃ ಪೈತೃಕರ್ಮಾದೌ ತತ್ಕಾಲಚರಬೀಜಕೈಃ |
ಬಾಣವೃದ್ಧಾ ರಸಕ್ಷೀಣಾ ಗ್ರಾಹ್ಯಾ ನಾನ್ಯಾ ತಿಥಿಃಕ್ವಚಿತ್ ||"
ಈ ಶ್ಲೋಕದ ಸಮ್ಯಗರ್ಥ ವಿವೇಚನೆಯು ಹೇಗೆ ?

(ವೆಂಕಟ ಸುಬ್ಬ ಶಾಸ್ತ್ರಿಗಳು, ಕೊಳ್ಳೆಗಾಲ)

೨ ಆರ್ಯಭಟೀಯ ಸಿದ್ಧಾಂತಾನುಸಾರವಾದ ಕೇರಳೀಯದೃಗ್ಗಣಿತದಂತೆ ಮಾಡಿದ ಪಂಚಾಂಗವನ್ನು ನಾವು ಆಧರಿಸಿಕೊಂಡಿದ್ದೇವೆ. ಅದು ಶಾಸ್ತ್ರವಿರುದ್ಧವೆಂದೂ ಕೇತಕೀಯ ದೃಗ್ಗಣಿತ ಸಿದ್ಧ ಪಂಚಾಂಗವನ್ನೇ ಅವಲಂಬಿಸತಕ್ಕದ್ದೆಂದೂ ಶಾಸ್ತ್ರಸಿದ್ಧ ಪಂಚಾಂಗದವರು ಸಮರ್ಥಿಸುತ್ತಾರೆ. ಅವರು ಹೇಳುವದು ನ್ಯಾಯವೋ, ನಾವು ಆಚರಿಸುತ್ತಿರುವದು ನ್ಯಾಯವೋ?

(ಅಡ್ಡೆ ಸುಬ್ರಹ್ಮಣ್ಯಾಚಾರ್ಯರು ಉಡುಪಿ.)

೩ ಬಾಣವೃದ್ಧಿರಸಕ್ಷಯವೆಂಬ ಮತವು ಪ್ರಳಯದ ವರೆಗೆ ಒಂದೇ ವಿಧವಾಗಿರುವುದೇ?

(ಕರೂರು ಶೇಷಾಚಾರ್ಯರು) (ರಾ.ತಿ. ಬಗ್ಲೋಣ).

೪ ಪಾಶ್ಚಾತ್ಯದೃಗ್ಗಣಿತವು ಶಾಸ್ತ್ರ ಅಥವಾ ಸಿದ್ಧಾಂತ ಅಥವಾ ವೇದಾಂಗ ಎಂದು ಹೇಳಿಸಿಕೊಳ್ಳುವದೇ?

(ಮೊಗೇರೀ ಪದ್ಮನಾಭ ಅಡಿಗಳು.) (ಸಿ. ಲಿಂಗಾಜೊಯ್ಸರು.)

೫ ಧರ್ಮಶಾಸ್ತ್ರ ಜ್ಯೋತಿಶ್ಶಾಸ್ತ್ರಗಳಲ್ಲಿ ವಿಸಂವಾದವಿದ್ದರೆ ಧರ್ಮಕೃತ್ಯಗಳ ನಿರ್ಣಾಯಿಕ ಶಾಸ್ತ್ರವ್ಯಾವದು?

(ಅನಂತಶರ್ಮಾ-ದೇವನೀಮಠ) (ರಾಮಚಂದ್ರ ಶಾಸ್ತ್ರೀ, ಸೂರಿ, ಕರ್ಕಿ)

೬ ಪ್ರಾಚೀನ ಗ್ರಂಥಗಳು ಆಗಿನಕಾಲಕ್ಕೆ ದೃಕ್ಪ್ರತ್ಯಯಕ್ಕೆ ಸರಿಯಾಗಿದ್ದವೇ, ಇಲ್ಲವೇ? ಸರಿಯಾಗಿತ್ತಾದರೆ ಆಗ ಮಂದಫಲ ಸಂಸ್ಕಾರವೊಂದರಿಂದಲೇ ದೃಕ್ಪ್ರತ್ಯಕ್ಷಕ್ಕೆ ಬರುತ್ತಿತ್ತೇ? ಸರಿಯಾಗಿರಲಿಲ್ಲವೆಂದಾದರೆ ತಿಥಿಚ್ಯುತಿ ಮೊದಲಾದ ಅಧಿಕ ಸಂಸ್ಕಾರಗಳನ್ನೇಕೆ ಹೇಳಲಿಲ್ಲ?

(ಸಿ. ಲಿಂಗಾಜೋಯ್ಸರು.) (ಎಚ್. ಜಕ್ಕಪ್ಪ ಜೋಯ್ಸರು.)

೭ ಜ್ಯೋತಿಶ್ಶಾಸ್ತ್ರಕ್ಕೂ ಧರ್ಮಶಾಸ್ತ್ರಕ್ಕೂ ಸಂಬಂಧವಿರುವ ಕಡೆಯಲ್ಲಿ ಪ್ರಾಚೀನ ಸಿದ್ಧಾಂತಗಳನ್ನೂ ಇತರ ಸ್ಥಳಗಳಲ್ಲಿ ನವೀನ ದೃಕ್ಕನ್ನೂ ತೆಗೆದುಕೊಳ್ಳುವಲ್ಲಿ ಬಾಧಕವೇನು? (ಮೊಗೇರಿ ಪದ್ಮನಾಭ ಅಡಿಗರು.)

೮ ಜ್ಯೋತಿಶ್ಶಾಸ್ತ್ರಕ್ಕೆ ಧರ್ಮಶಾಸ್ತ್ರ ಕರ್ಮಕಾಲ ನಿರ್ಣಯ ಮಾಡುವದು ಮಾತ್ರ ಪ್ರಯೋಜನವಲ್ಲದೇ ಇತರ ಪ್ರಯೋಜನಗಳಿವೆಯೇ?, ಇದ್ದರೆ ಅವ್ಯಾವವು?

(ಮೊಗೇರಿ ಪದ್ಮನಾಭ ಅಡಿಗರು.)

೯ ಸಿದ್ಧಾಂತಗಳು ಹಲವು ಇರುವಲ್ಲಿ ಸೂರ್ಯಸಿದ್ಧಾಂತವೆ ಏತಕ್ಕೆ ಶ್ರೇಷ್ಠವಾಗಿದೆ? ಅಥವಾ ಬೇರೆ ಸಿದ್ಧಾಂತವಾದರೆ ಯಾವದು?

(ಮೊಗೇರಿ ಪದ್ಮನಾಭ ಅಡಿಗರು) (ಶ್ರೀನಿವಾಸ ಕೆದ್ಲಾಯರು.)

೧೦ ಪ್ರಾಚೀನ ದೃಗ್ಗಣಿತಕ್ಕೂ ಆಧುನಿಕ (ಪಾಶ್ಚಾತ್ಯ) ದೃಗ್ಗಣಿತಕ್ಕೂ ಭೇದವುಂಟೇ, ಇಲ್ಲವೇ? ಇರುವದಾದರೆ ಯಾವ ಭಾಗದಲ್ಲಿ? ಪಾಶ್ಚಾತ್ಯದೃಗ್ಗಣಿತ ರೀತ್ಯಾ ಸಪ್ತವೃದ್ಧಿ ದಶಕ್ಷಯವುಳ್ಳ ತಿಥಿಘಳಿಗೆಗಳನ್ನಂಗೀಕರಿಸಿದ ಧರ್ಮ ಶಾಸ್ತ್ರವುಂಟೇ? ಇದ್ದರೆ ಅದ್ಯಾವದು? ಇಲ್ಲವಾದರೆ ತದನುಗುಣವಾದ ಬೇರೆ ಧರ್ಮ ಶಾಸ್ತ್ರವನ್ನು ಕಲ್ಪಿಸಿ ಬರೆಯುವದು ಯೋಗ್ಯವಲ್ಲವೇ?

ಈ ಹತ್ತು ವಿಷಯಗಳನ್ನು ಚರ್ಚಿಸಿ ನಿರ್ಣಯಿಸಬೇಕೆಂದು ತೀರ್ಮಾನವಾಯಿತು. "ತಿಥಿಯು ಪ್ರತ್ಯಕ್ಷವೇ ಅಪ್ರತ್ಯಕ್ಷವೇ" ಎಂಬ ಪ್ರಶ್ನೆಯನ್ನಿಡ ಬೇಕೆಂದೂ ಸಭೆಯಲ್ಲಿ ಬಂದಿತು. (ಹನ್ನೊಂದು ವಿಷಯಗಳಾಗುವದರಿಂದ ಬಿಡಲಾಯಿತು.) ಬಳಿಕ ವಿಷಯನಿಯಾಮಕ ಸಮಿತಿಯ ಅಧ್ಯಕ್ಷರ ಭಾಷಣದೊಂದಿಗೆ ಈ ಸಭೆಯು ಮುಕ್ತಾಯವಾಯಿತು.

ಆ ಮೇಲೆ ಸಮ್ಮೇಳನದ ಕಾರ್ಯದರ್ಶಿಗಳಾದ ಶ್ರೀ ಸಿ. ಲಿಂಗಾಜೊಯ್ಸರು ನಾಳೆ ಬೆಳಗಿನ ಕಾರ್ಯಕ್ರಮವನ್ನು ಹೇಳಿ, ಸರ್ವರೂ ಸಕಾಲಕ್ಕೆ ಸಭೆಯಲ್ಲಿ ಉಪಸ್ಥಿತರಾಗಿರಬೇಕೆಂದೂ ಸಭಾಧರ್ಮವನ್ನನುಸರಿಸಿ ಸಭ್ಯರೀತಿಯಿಂದ ವರ್ತಿಸುತ್ತಾ ಮನಸ್ಸಿಗೆ ಹತ್ತುವ ಮಾತುಗಳನ್ನಾಡದೇ ಮೇಲ್ಕಂಡ ವಿಷಯಗಳನ್ನು ಗೋಲ, ಗಣಿತ, ಧರ್ಮಶಾಸ್ತ್ರ ಮೊದಲಾದವುಗಳಿಂದಲೂ ಯುಕ್ತಿಯಿಂದಲೂ ಚರ್ಚಿಸಿ ಐಕಮತ್ಯದ ನಿರ್ಣಯವಾಗುವಂತೆ ಮಾಡಬೇಕೆಂದೂ ವಿದ್ವಜ್ಜನರನ್ನು ಪ್ರಾರ್ಥಿಸಿಕೊಂಡರು. ಬಳಿಕ ಸರ್ವರೂ ತಮ್ಮ ತಮ್ಮ ನಿವಾಸಕ್ಕೆ ತೆರಳಿದರು.

ಮರುದಿನ ಅಂದರೆ ತಾ. 8-2-1952ನೇ ದಿವಸ ಬೆಳಗಿನಿಂದ ಸಾಯಂಕಾಲದ ವರೆಗೆ ಚರ್ಚೆ ನಡೆಯಿತು.

ಸಭೆಗೆ ಬಂದಿರತಕ್ಕ ಜ್ಯೋತಿಷ್ಕರೆಲ್ಲರೂ ಬಹುಬುದ್ಧಿಶಾಲಿಗಳೂ ಯುಕ್ತಿಕುಶಲರೂ ಗಣಿತಗೋಲ ಧರ್ಮಶಾಸ್ತ್ರಜ್ಞರೂ ವಾಚಾಲಿಗಳೂ ಆದ್ದರಿಂದ ತಾ. 9ನೇ ದಿವಸ ಬೆಳಿಗ್ಗೆ ಸಭೆಯು ನಿರ್ಣಯವನ್ನು ಬರೆಯುವಸ್ಥಿತಿಗೆ ಬರಲಿಲ್ಲ. ಇದನ್ನು ನೋಡಿ ಅಧ್ಯಕ್ಷರಾದ ಶ್ರೀ ಭಂಡಾರಿಕೇರೀ ಮಠದ ಶ್ರೀಪಾದಂಗಳವರೂ ಪರ್ಯಾಯ ಪೀಠಾಧಿಪತಿಗಳಾದ ಶ್ರೀ ಪೇಜಾವರ ಮಠಾಧೀಶ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರೂ ಸೇರಿ 9ನೇ ತಾರೀಖಿನ ದಿನವನ್ನೂ ಸಹ ಚರ್ಚೆಗಾಗಿ ಬಿಟ್ಟು ಸಮ್ಮೇಳನ ದಿನಗಳನ್ನು ಎರಡು ದಿವಸ ವೃದ್ಧಿಪಡಿಸಿದರು. ಅವರ ಆಜ್ಞೆಯಂತೆ,

ಸಭೆಯು ಒಪ್ಪುವಂತೆಯೂ ಶಾಸ್ತ್ರ ಮರ್ಯಾದೆಯನ್ನು ಮೀರದಂತೆಯೂ ಬಹುಮಟ್ಟಿಗೆ ಚರ್ಚೆ ನಡೆಯಿತು. ಸಭೆಯಲ್ಲಿ ನಿಷ್ಪಕ್ಷಪಾತವನ್ನು ವಹಿಸಿದ ಅಧ್ಯಕ್ಷರು ವಿದ್ವಾಂಸರ ಭಾಷಣದ ಸಾರವನ್ನು ಗ್ರಹಿಸಿ ತಾ. 10-2-1952ನೇ ಮಾಘ ಶುದ್ಧ ೧೫ ರವಿವಾರ ಸಾಯಂಕಾಲ 8 ಘಂಟೆಗೆ ಈ ಕೆಳಗೆ ಕಂಡಂತೆ ನಿರ್ಣಯಗಳನ್ನು ಹೇಳಿದರು.

ನಿರ್ಣಯಗಳು ಕ್ರಮವಾಗಿ.

೨ನೇ ಪ್ರಶ್ನೆಗೆ - ಆರ್ಯಭಟೀಯ ಸಿದ್ಧಾಂತಾನುಸಾರವಾದ ಕೇರಳೀಯ ದೃಗ್ಗಣಿತದಂತೆ ಮಾಡಿದ ಪಂಚಾಂಗವು ಶಾಸ್ತ್ರವಿರುದ್ಧವೆಂದೂ ಕೇತಕೀಯ ದೃಗ್ಗಣಿತ ಪಂಚಾಂಗವೇ ಗ್ರಾಹ್ಯವೆಂದೂ ಶಾಸ್ತ್ರಸಿದ್ಧ ಪಂಚಾಂಗದವರು ಪ್ರತಿಪಾದಿಸುವುದು ಸರಿಯಲ್ಲವೆಂದು ಈ ಸಮ್ಮೇಳನವು ಅಭಿಪ್ರಾಯ ಪಡುತ್ತದೆ.

(ಇದರ ಸೂಚಕರು - ಶ್ರೀ ಅಡ್ವೆ ಸುಬ್ರಹ್ಮಣ್ಯಾಚಾರ್ಯರು
ಅನುಮೋದಕರು - ಶ್ರೀ ಬಿ. ಶ್ರೀನಿವಾಸ ಭಟ್ಟರು
ಪೋಷಕರು - ಶ್ರೀ ಪಡುಬಿದ್ರೆ ಲಕ್ಷ್ಮೀನಾರಾಯಣಾಚಾರ್ಯರು
ವಿರೋಧಕರು - ಶ್ರೀ ಶ್ರೀಪತಿ ನರಸಿಂಹ ಅಡಿಗರು ಮತ್ತು
- ಶ್ರೀ ಕೃಷ್ಣಬನ್ನಿಂತಾಯರು ಆಗಿದ್ದರು)

೩ನೇ ಪ್ರಶ್ನೆಗೆ ತಿಥಿಚ್ಯುತ್ಯಾದಿ ಆಕರ್ಷಣ ಸಂಬಂಧವಾದ ನವೀನ ಸಂಸ್ಕಾರಗಳು ಮಾಡಲ್ಪಡದಿರುವಾಗ ಕೇವಲ ಪ್ರಾಚೀನ ಮಂದಫಲ ಸಂಸ್ಕೃತ ತಿಥಿ ಭೋಗದಲ್ಲಿ ಮಾತ್ರ ಬಾಣವೃದ್ಧಿ ರಸಕ್ಷಯ ಲಕ್ಷಣವು ಕಲ್ಪಾಂತದ ವರೆಗೆ ಒಂದೇ ವಿಧವಾಗಿರುವದೆಂದೂ ಮೇಲ್ಕಂಡ ಆಕರ್ಷಣಾದಿ ನವೀನ ಸಂಸ್ಕಾರಗಳನ್ನು ಮಾಡಿದರೆ ಬಾಣ (೫) ವೃದ್ಧಿ ರಸ (೬) ಕ್ಷಯ ಲಕ್ಷಣವು ಯಾವಾಗಲೂ ಬರುವುದಿಲ್ಲವೆಂದೂ ಈ ಸಮ್ಮೇಳನವು ನಿರ್ಣಯಿಸುತ್ತದೆ.

(ಇದರ ಸೂಚಕರು - ಶ್ರೀ ಮೊಗೇರೀ ಪದ್ಮನಾಭ ಅಡಿಗರು.
ಅನುಮೋದಕರು - ಶ್ರೀವೆಂಕಟಸುಬ್ಬಶಾಸ್ತ್ರಿಗಳು, ಕೊಳ್ಳೇಗಾಲ.
ಪೋಷಕರು - ಶ್ರೀ ಪಿ. ಲಕ್ಷ್ಮೀ ನಾರಾಯಣ ಅಡಿಗರು.

ವಿರೋಧಕರು - ಶ್ರೀಶ್ರೀಪತಿ ನರಸಿಂಹ ಅಡಿಗರು ಆಗಿದ್ದರು)

೪ನೇ ಪ್ರಶ್ನೆಗೆ - ಪಾಶ್ಚಾತ್ಯದೃಗ್ಗಣಿತವು ಶಾಸ್ತ್ರವೆಂದಾಗಲೀ ಸಿದ್ಧಾಂತವೆಂದಾಗಲೀ ವೇದಾಂಗವೆಂದಾಗಲೀ ಹೇಳಿಸಿಕೊಳ್ಳುವದಿಲ್ಲ.

(ಇದರ ಸೂಚಕರು - ಶ್ರೀ ಪದ್ಮನಾಭ ಅಡಿಗರು.

ಅನುಮೋದಕರು - ಶ್ರೀ ವೆಂಕಟಸುಬ್ಬ ಶಾಸ್ತ್ರಿಗಳು.

ಪೋಷಕರು - ಶ್ರೀ ಅನಂತಪದ್ಮನಾಭ ಉಪಾಧ್ಯಾಯರು.

ವಿರೋಧಕರು - ಶ್ರೀ ಶ್ರೀಪತಿ ನರಸಿಂಹ ಅಡಿಗರು ಮತ್ತು ಶ್ರೀ ಕೃಷ್ಣ ಬನ್ನಿಂತಾಯರು ಆಗಿದ್ದರು.)

೫ನೇ ಪ್ರಶ್ನೆಗೆ - ಧರ್ಮಶಾಸ್ತ್ರ ಜ್ಯೋತಿಶ್ಶಾಸ್ತ್ರಗಳೊಳಗೆ ಧರ್ಮಕರ್ಮಗಳ ವಿಷಯದಲ್ಲಿ ಭಿನ್ನಾಭಿಪ್ರಾಯ ತೋರಿಬಂದಲ್ಲಿ ಧರ್ಮಶಾಸ್ತ್ರವೆ ನಿರ್ಣಾಯಕವಾಗಿರ ತಕ್ಕದ್ದೆಂದು ಈ ಸಮ್ಮೇಳನವು ನಿರ್ಣಯಿಸುತ್ತದೆ.

(ಇದರ ಸೂಚಕರು - ಶ್ರೀ ಅನಂತ ಕೃಷ್ಣಾಚಾರ್ಯರು

ಅನುಮೋದಕರು - ಶ್ರೀ ಶ್ರೀನಿವಾಸ ಕೆದಿಲಾಯರು

ಪೋಷಕರು - ಶ್ರೀ ಯು. ಶ್ರೀನಿವಾಸಚಾರ್ಯರು.

ವಿರೋಧಕರು - ಶ್ರೀ ಕೃಷ್ಣ ಬನ್ನಿಂತಾಯರು, ಆಗಿದ್ದರು)

೬ನೇ ಪ್ರಶ್ನೆಗೆ - ಜ್ಯೋತಿಶ್ಶಾಸ್ತ್ರಕ್ಕೆ ಧರ್ಮಕಾರ್ಯಗಳ ಕಾಲನಿರ್ಣಯವು ಮುಖ್ಯ ಪ್ರಯೋಜನವಾಗಿಯೂ ಫಲನಿರ್ದೇಶಾದಿಗಳು ಗೌಣ ಪ್ರಯೋಜನ ವಾಗಿಯೂ ಇರುತ್ತದೆ.

(ಇದರ ಸೂಚಕರು - ಶ್ರೀ ಪದ್ಮನಾಭ ಅಡಿಗರು)

ಈ ರೀತಿಯಾಗಿ ಐದು ನಿರ್ಣಯಗಳು ಸರ್ವಾನುಮತದಿಂದ ಪಾಸಾದವು. ಉಳಿದ ವಿಷಯಗಳನ್ನು ತೀರ್ಮಾನಿಸಲು ಅವಕಾಶ ಸಾಲದ್ದರಿಂದ ಮುಂದುವರಿಸಲಾಯಿತು. ಶಾಖಾಸಮಿತಿಯನ್ನು ನಾಳೆಗೆ ಇಟ್ಟುಕೊಂಡು ಇಂದಿನ ಸಭೆಯು ಕೊನೆಗೊಂಡಿತು.

ಮರುದಿವಸ ಅಂದರೆ ತಾ 11-2-1952ನೇ ಮಾಘ ಬಹುಳ ೧ ಸೋಮವಾರ

ಮಧ್ಯಾಹ್ನ 3 ಘಂಟೆಗೆ ಪುನಃ ಸಭೆ ಸೇರಿ ಶಿವಮೊಗ್ಗಾದಲ್ಲಿ ಹಿಂದೆ ಸ್ಥಾಪಿತವಾದ "ಅಖಿಲ ಕರ್ಣಾಟಕ ಜ್ಯೌತಿಷಿಕ ಸಂಘ"ದ ಶಾಖಾಸಮಿತಿಯನ್ನು ಸ್ಥಾಪಿಸಲಾಯಿತು. ಈ ಶಾಖಾ ಸಮಿತಿಗೆ"ಜ್ಯೌತಿಷಿಕ ಶಾಖಾಸಮಿತಿ" ಎಂದು ನಾಮಕರಣ ಮಾಡಲ್ಪಟ್ಟಿದೆ. (ಇದರ ನಿಯಮಗಳು(ರೂಲ್ಸ್) ಪ್ರತ್ಯೇಕವಾಗಿ ಬರೆಯಲ್ಪಟ್ಟಿರುವದು)

ಈ ಸಮ್ಮೇಳನಕ್ಕೆ ದಯಮಾಡಿಸಿದ್ದ ಪಂಡಿತರಿಗೆ ಭೋಜನ, ವಸತಿ ಮೊದಲಾದ ಸೌಕರ್ಯಗಳು ಬಹು ತೃಪ್ತಿಕರವಾಗಿತ್ತು. ಶ್ರೀಕೃಷ್ಣ ಸಂದರ್ಶನವೂ ಶ್ರೀ ಶ್ರೀಗಳವರ ಸಂದರ್ಶನ ಭಾಷಣಗಳೂ ಉತ್ಸವಗಳ ನೋಟವೂ ಸ್ವಾಗತ ಸಮಿತಿಯವರ ಸುವ್ಯವಸ್ಥೆಯೂ ಹೃದಯಂಗಮವಾಗಿತ್ತು. ಸರ್ವರೂ ಸಂತೋಷಪಟ್ಟರು.

ತದನಂತರ ಈ ಮಹಾ ಸಮ್ಮೇಳನದ ಕಾರ್ಯದರ್ಶಿಗಳಾದ ಶ್ರೀ ಸಿ. ಲಿಂಗಾಜೋಯ್ಸರು ಮಹಾ ಸಮ್ಮೇಳನದ ಪರವಾಗಿ ಮತ್ತು ಅ.ಕ. ಜ್ಯೌತಿಷಿಕ ಸಂಘದ ಪರವಾಗಿ, ಈ ಸಮ್ಮೇಳನದ ಉದ್ಘಾಟಕರಿಗೂ ಅಧ್ಯಕ್ಷರಿಗೂ, ಸ್ವಾಗತ ಸಮಿತಿಯ ಅಧ್ಯಕ್ಷರಿಗೂ ಕಾರ್ಯದರ್ಶಿಗಳಿಗೂ ಸ್ವಾಗತ ಸಮಿತಿಯವರಿಗೂ ಸಮ್ಮೇಳನಕ್ಕೆ ಆಶ್ರಯವನ್ನು ದಯಪಾಲಿಸಿದ ಶ್ರೀ ಪೇಜಾವರ ಮಠದ ಶ್ರೀ ಶ್ರೀಗಳವರಿಗೂ ಅಷ್ಟ ಮಠದ ಶ್ರೀ ಶ್ರೀಗಳವರಿಗೂ ಸಮ್ಮೇಳನಕ್ಕೆ ಬಂದಿದ್ದ ಪಂಡಿತಾದಿ ಸಕಲರಿಗೂ ವೃತ್ತ ಪತ್ರಿಕೆಯವರಿಗೂ ಧನ್ಯವಾದಗಳನ್ನರ್ಪಿಸಿದ ಬಳಿಕ ಶ್ರೀಕೃಷ್ಣ ಭಗವಂತನ ಪ್ರಾರ್ಥನೆಯೊಂದಿಗೆ ಅಖಿಲ ಕರ್ಣಾಟಕ ಜ್ಯೌತಿಷಿಕ ಸಂಘದ ೪ನೇ ಮಹಾ ಸಮ್ಮೇಳನವು ಪರಿಪೂರ್ಣವಾಯಿತು.

|| ಶುಭಮಸ್ತು ||

ಅಡ್ಡೆ ಸುಬ್ರಹ್ಮಣ್ಯಾಚಾರ್ಯರು,
ಕಾಪು ಕೃಷ್ಣಾಚಾರ್ಯರು,
ಕಾರ್ಯದರ್ಶಿಗಳು
ಜ್ಯೌತಿಷಿಕ ಶಾಖಾಸಮಿತಿ, ಉಡುಪಿ.

ಸಿ. ಲಿಂಗಾಜೋಯ್ಸರು,
ಕಾರ್ಯದರ್ಶಿ.
ಅ.ಕ.ಜ್ಯೌ. ಸಂಘ ಶಿವಮೊಗ್ಗಾ.

ಈ ಲೇಖಕರ ಕೃತಿಗಳು :

1. ಭೂಗೋಳ ವರ್ಣನೆ
2. ಸ್ವಾಪ್ನವೃಂದಾವನಾಖ್ಯಾನಮ್
3. ಏಕಾದಶಿ ನಿರ್ಣಯ

ಪ್ರತಿಗಳು ದೊರೆಯುವ ಸ್ಥಳ:-

ಶ್ರೀ ಸೋದೆ ವಾದಿರಾಜ ಮಠ,

ತೇರುಬೀದಿ, ಸೋಂದಾ - 581 447

ಶಿರ್ಸಿ ತಾಲೂಕು, ಉತ್ತರ ಕನ್ನಡ

ಶ್ರೀ ಶೀರೂರು ಮಠ,

ರಥಬೀದಿ, ಉಡುಪಿ - 576 101

ಮೆಜೆಸ್ಟಿಕ್ ಪ್ರೆಸ್,

ತೆಂಕಪೇಟೆ, ಉಡುಪಿ - 576 101